# ಧರ್ಮ ವಾಹಿನಿ

ತೆಲುಗು ಮೂಲ

**ಭಗವಾನ್ ಶ್ರೀ ಸತ್ಯಸಾಯಿ ಬಾಬಾ**

ಇಂಗ್ಲಿಷ್ ಸಂಕಲನ

**ನಾ. ಕಸ್ತೂರಿ**

ಕನ್ನಡ ಅನುವಾದ

**ಆರ್. ಎಲ್. ಅನಂತರಾಮಯ್ಯ**

**ಶ್ರೀ ಸತ್ಯಸಾಯಿ ಪಬ್ಲಿಕೇಷನ್ಸ್ ಸೊಸೈಟಿ (ರೆ)**
'ಸುಧಾಮ ಹೌಸ್', ಚಿಕ್ಕಪೇಟೆ, ಬೆಂಗಳೂರು ೫೬೦೦೫೩
೨೦೧೮

*Dharma Vahini*—Translation of Telugu book written by Bhagavan Sri Sathya Sai Baba into Kannada by R. L. Anantharamaiah. Published by Sri Sathya Sai Publications Society (R), 'Sudhama House', Chickpet, Bengaluru 560 053, India. Demy octavo, Pages viii+88.

© 2018
Sri Sathya Sai Publications Society, Bengaluru, India

೦೬/೨೦೧೮ (೨೦೦೦ ಪ್ರತಿಗಳು)

ಪುಟಗಳು : ೯೬

**ಬೆಲೆ : ₹ 25**

ಮುದ್ರಣ : ಪದ್ಮ ಶೇಖರ್ ಪ್ರಿಂಟರ್ಸ್, ಮೈಸೂರು; ✆ 98865 05878

ಬೇರೆ ಬೇರೆ ಧರ್ಮಗಳೆಲ್ಲ ಇರಲಿ,
ಎಲ್ಲ ಧರ್ಮಗಳೂ ವರ್ಧಿಸಲಿ,
ಭಗವಂತನ ಮಹಿಮೆಯನ್ನು ಎಲ್ಲ ಭಾಷೆಗಳಲ್ಲೂ
ವಿವಿಧ ರಾಗಗಳಲ್ಲೂ ಹಾಡಲಿ.
ಧರ್ಮ ಧರ್ಮಗಳ ವ್ಯತ್ಯಾಸ ವೈಶಿಷ್ಟ್ಯಗಳನ್ನು ಗೌರವಿಸಿ.
ಭಾವೈಕ್ಯತೆಯ ಬೆಳಕನ್ನು ನಂದಿಸದಿರುವ
ಧರ್ಮಗಳೆಲ್ಲ ಸತ್ವಯುತ ಎಂದು ಮನ್ನಿಸಿ.

**ಶ್ರೀ ಸತ್ಯಸಾಯಿ ಬಾಬಾ**

ಓಂ ಬ್ರಹ್ಮಾಂಡಕ್ಕೆ ಮೂಲವಾದ ಆದಿಮ ಶಬ್ದ. ಓಂಕಾರವು ಅನಾಹತ ಶಬ್ದ. ನಿಮ್ಮ ಹೃದಯದಲ್ಲೂ ವಿಶ್ವದ ಹೃದಯದಲ್ಲೂ ಸದಾ ನಿನದಿಸುತ್ತಿರುವ ಅದನ್ನು ಆಲಿಸಿರಿ.

ಅಹಂಕಾರವನ್ನು ಕತ್ತರಿಸಿ. ಅದು ಶಿಲುಬೆಯ ಮೇಲೆ ಅಳಿದು ಹೋಗಲಿ. ನಮಗೆ ಅಮರತ್ವವನ್ನು ತರಲಿ.

ಕಾರಣ–ಪರಿಣಾಮ, ಕಾರ್ಯ–ಅದರ ಫಲ—ಇವುಗಳ ಚಕ್ರವನ್ನು ಸದಾ ನೆನಪಿನಲ್ಲಿಡಿ.

ಚಂದ್ರನಿಂದ ದೂರ ಸರಿಯದ ನಕ್ಷತ್ರದ ಹಾಗೆ ನೀವೂ ಭಗವಂತನಿಂದ ಅತ್ತಿತ್ತ ಅಲುಗದೆ ಸ್ಥಿರವಾದ ಶ್ರದ್ಧೆಯನ್ನು ಬೆಳೆಸಿಕೊಳ್ಳಿರಿ.

ಬದುಕಿನ ಕಹಿಯೆಲ್ಲವನ್ನು ಈ ಪವಿತ್ರಾಗ್ನಿಯಲ್ಲಿ ಸಮರ್ಪಿಸಿ ಭವ್ಯರಾಗಿ, ಮಹಾನ್ ಆಗಿ ಪರಿಣಮಿಸಿರಿ.

# ಪರಿವಿಡಿ

ಮುನ್ನುಡಿ . . . . . . . . . . . . . . . . . . . . . . . . . . . . . vii
೧ ಧರ್ಮ ಎಂದರೇನು? ೧
೨ ದೈವಿಕ ಮತ್ತು ಲೌಕಿಕ ಧರ್ಮ ೮
೩ ಮೂಲ ದೋಷ ೧೬
೪ ಪುರುಷ ಮತ್ತು ಸ್ತ್ರೀ ಪ್ರಕೃತಿಗಳು ೨೨
೫ ಸ್ತ್ರೀಯರಿಗೆ ಶಿಕ್ಷಣ ೨೯
೬ ಧರ್ಮವನ್ನಾಚರಿಸಿ ೩೫
೭ ಮಂತ್ರಗಳ ಮಾತೆ ಗಾಯತ್ರಿ ೪೧
೮ ಗೃಹಸ್ಥಾಶ್ರಮ ೪೭
೯ ಎಲ್ಲರೂ ಆಧ್ಯಾತ್ಮ ಜ್ಞಾನ ಪಡೆಯಬಹುದು ೫೨
೧೦ ಭಗವನ್ನಿವಾಸ ೫೭
೧೧ ಯುಗತ್ರಯ ೬೫
೧೨ ದೇವಾಲಯಗಳು ೭೧
೧೩ ಧರ್ಮಿಷ್ಠ ೭೯

# ಮುನ್ನುಡಿ

ಭಗವಾನ್ ಶ್ರೀ ಸತ್ಯಸಾಯಿಬಾಬಾ ಅವರು 'ಧರ್ಮವಾಹಿನಿ' ಎಂಬ ಹೆಸರಿನಲ್ಲಿ, ಪ್ರಶಾಂತಿ ನಿಲಯದಿಂದ ಪ್ರಕಟವಾಗುವ ಮಾಸ ಪತ್ರಿಕೆ ಸನಾತನ ಸಾರಥಿಗೆ ಬರೆದ ಲೇಖನಗಳು ಈ ಪುಟ್ಟ ಪುಸ್ತಕದಲ್ಲಿವೆ. ಇಲ್ಲಿ ಅವು ಇಂಗ್ಲಿಷಿನಲ್ಲಿವೆ, ಆದರೆ ಮೂಲ ತೆಲುಗು ಇನ್ನೂ ಸರಳವಾಗಿದೆ, ಮಧುರವಾಗಿದೆ ಎಂದು ಹೇಳಲೇಬೇಕು. ಭಾರತೀಯ ಸಂಸ್ಕೃತಿಯ ಮೂಲ ಭೂತ ವಿಚಾರಗಳನ್ನು ಇಂಗ್ಲಿಷಿನಲ್ಲಿ ಅಭಿವ್ಯಕ್ತಿಪಡಿಸುವುದು ಕಷ್ಟ. ಏಕೆಂದರೆ ಅನುವಾದಕನಿಗೆ ಇಂಗ್ಲಿಷ್ ಭಾಷೆ ಅನ್ಯಭಾಷೆ. ಬಹುಶಃ ಅನೇಕ ಓದುಗರಿಗೂ ಹಾಗೆಯೇ. ಭಾರತೀಯ ಭಾಷೆಗಳಲ್ಲಿ ಸಾಮಾನ್ಯವಾಗಿ ಚಲಾವಣೆಯಲ್ಲಿರುವ ಅನೇಕ ಪದಗಳಿಗೆ ಇಂಗ್ಲಿಷ್ ಶಬ್ದ ಭಂಡಾರವು ತೃಪ್ತಿಕರವಾದ ಸಮಾನ ಪದಗಳನ್ನು ಕೊಡುವುದಿಲ್ಲ. ಆದ್ದರಿಂದ ಬಾಬಾ ಅವರ ತೆಲುಗಿನ ಸ್ಪಷ್ಟ ಲೋಹಕ್ಕೆ ಅಸ್ಪಷ್ಟತೆಯ ಮಿಶ್ರಲೋಹದ ಬೆರಕೆಯಾಗಿರುವುದು ಕಂಡು ಬಂದರೆ ಓದುಗರು ದಯವಿಟ್ಟು ನನ್ನನ್ನು ಕ್ಷಮಿಸಬೇಕು.

ಈ ಪುಸ್ತಕದ ವಿಷಯದಲ್ಲಿ ಇಷ್ಟನ್ನು ಹೇಳಲೇಬೇಕು. ಇದು ಅಧಿಕೃತ ದೈವವಾಣಿ. ಇಂದಿನ ಕೋಟಿಗಟ್ಟಲೆ ಸ್ತ್ರೀ ಪುರುಷರ ನಡವಳಿಕೆಯನ್ನು ನೀತಿ ನಿಯಮಗಳನ್ನು ಸರಿಯದ ರೀತಿಯಲ್ಲಿ ರೂಪಿಸಿಕೊಟ್ಟಿದೆ. ಆದ್ದರಿಂದ ಇದನ್ನು ಜಾಗರೂಕತೆಯಿಂದ ಶ್ರದ್ಧೆಯಿಂದ ಓದ ಬೇಕು. ನೈತಿಕ ಮೌಲ್ಯವು ಕುಸಿದಾಗ, ಮನುಷ್ಯನು ತನ್ನ ವೈಭವೋಪೇತವಾದ ನೆಲೆಯನ್ನು ಮರೆತಾಗ ಅಥವಾ ಅಲಕ್ಷಿಸಿದಾಗ, ತಾನೇ ಮಾನವರ ನಡುವೆ ಮಾನವನಾಗಿ ಅವತರಿಸಿ ಮಾನವ ಜನಾಂಗವನ್ನು ನೇರವೂ ಪವಿತ್ರವೂ ಆದ ಪಥದಲ್ಲಿ ನಡೆಸಿಕೊಂಡು ಹೋಗುತ್ತೇನೆ ಎಂದು ಭಗವಂತನು ಘೋಷಿಸಿದ್ದಾನೆ. ಅವನು ಬಂದಿದ್ದಾನೆ; ಹಾದಿತಪ್ಪಿ ದೂರ ಹೊರಟು ಹೋಗಿರುವವರಿಗೆ ಮರಳಿ ಬನ್ನಿರೆಂದು ಕರೆ ಕೊಡುತ್ತಿದ್ದಾನೆ; ಒಪ್ಪಿಕೊಳ್ಳುವವರಿಗೆ ಮಾರ್ಗ ದರ್ಶನ ನೀಡುತ್ತಿದ್ದಾನೆ. ಬಾಬಾ ಅವರ ಪ್ರೀತಿಗೆ, ಜ್ಞಾನಕ್ಕೆ ಮೇರೆಯೇ ಇಲ್ಲ, ಅವರ ಕರುಣೆಗೆ ತಡೆಯಿಲ್ಲ. ಅವರು ಕಠಿಣ ಮನಸ್ಕರಾದ ಯಜಮಾನ ಅಲ್ಲ; ನಮ್ಮ ಕಲ್ಯಾಣ, ನಮ್ಮ ನಿಜವಾದ ಪ್ರಗತಿಗಳನ್ನು ಕುರಿತು ಅವರಿಗಿರುವ ಕಾಳಜಿ ಆಶ್ಚರ್ಯಕರವಾದದ್ದು.

ಈ ಪುಸ್ತಕವು ಬಾಬಾ ಮಾತೃಪ್ರೇಮದಿಂದ ಬರೆದಿದ್ದಾರೆ. ಆ ಪ್ರೇಮವನ್ನು ಇದು ನಿಮಗೆ ತೋರಿಸಲಿ. ಇಲ್ಲಿರುವ ಪ್ರತಿಯೊಂದು ಆದೇಶದ ಹಿಂದಿರುವ ಪಿತೃಸಹಜ ಅಧಿಕಾರವನ್ನು ತೆರೆದು ತೋರಿಸಲಿ. ಪ್ರತಿಯೊಂದು ಹೇಳಿಕೆಯನ್ನೂ ದಿವ್ಯಕಾಂತಿಯಿಂದ ಬೆಳಗುವ ಗುರುವಿನ ಬೆಳಕು ಮತ್ತು ಭಗವಂತನ ಭವ್ಯ ವಿಶ್ವಾತ್ಮಕತೆಗಳು ನಿಮ್ಮ ಅರಿವಿಗೆ ಬರಲಿ. ನಿಮ್ಮ ವ್ಯಕ್ತಿತ್ವವನ್ನು ಸೇವೆಯ ಅತಿ ಮಹತ್ವದ ಉಪಕರಣವಾಗುವಂತೆ ಮಾಡಿಕೊಳ್ಳಲು ಅದು ಕೊಡುತ್ತಿರುವ ಕರೆ ನಿಮಗೆ ಕೇಳಿಸಲಿ.

ಪ್ರಶಾಂತಿ ನಿಲಯಂ **ನಾ. ಕಸ್ತೂರಿ**

## ಅಧ್ಯಾಯ ೧

# ಧರ್ಮ ಎಂದರೇನು?

ಮನುಷ್ಯನು ತನ್ನನ್ನು ಧರ್ಮಕ್ಕೆ ಅರ್ಪಿಸಿಕೊಳ್ಳಬೇಕು ಮತ್ತು ಸದಾ ಧರ್ಮದಲ್ಲೇ ನಿರತನಾಗಿರಬೇಕು. ಅದರಿಂದ ಅವನು ಶಾಂತಿಯಿಂದ ಬದುಕುತ್ತಾನೆ, ಪ್ರಪಂಚವೂ ಶಾಂತಿಯನ್ನು ಸವಿಯುವಂತಾಗುತ್ತದೆ. ಧಾರ್ಮಿಕ ಜೀವನದ ಹೊರತು ಬೇರೆ ಯಾವುದೇ ವಿಧಾನದಿಂದಲೂ ಅವನು ನಿಜವಾದ ಶಾಂತಿಯನ್ನಾಗಲಿ ಭಗವಂತನ ಕೃಪೆಯನ್ನಾಗಲಿ ಗಳಿಸುವುದು ಸಾಧ್ಯವಾಗುವುದಿಲ್ಲ. ಧರ್ಮವು ಮಾನವ ಜನಾಂಗದ ಕಲ್ಯಾಣಕ್ಕೆ ತಳಹದಿ; ಇದು ಎಲ್ಲ ಕಾಲಕ್ಕೂ ನಿಲ್ಲುವ ಸತ್ಯ. ಧರ್ಮವು ಮಾನವನ ಬದುಕನ್ನು ಪರಿವರ್ತಿಸಲು ವಿಫಲವಾದಾಗ ದುಃಖ, ಭೀತಿ, ಕಳವಳಗಳು ಪ್ರಪಂಚವನ್ನು ಕಾಡುತ್ತವೆ, ಭೀಕರ ಚಂಡಮಾರುತದಂತಹ ಗಂಡಾಂತರಗಳುಂಟಾಗುತ್ತವೆ. ಧರ್ಮದ ಕಾಂತಿಯು ಮಾನವ ಸಂಬಂಧಗಳನ್ನು ಬೆಳಗಲು ವಿಫಲವಾದಾಗ ಮಾನವತೆಯು ದುಃಖದ ಕಗ್ಗತ್ತಲಲ್ಲಿ ಮುಳುಗಿ ಹೋಗುತ್ತದೆ.

ಭಗವಂತನು ಧರ್ಮದ ಸಾಕಾರವಾಗಿದ್ದಾನೆ, ಧರ್ಮದಿಂದ ಅವನ ಅನುಗ್ರಹವನ್ನು ಪಡೆಯಬಹುದು. ಅವನು ಸದಾ ಧರ್ಮವನ್ನು ಪೋಷಿಸುತ್ತಿದ್ದಾನೆ, ಧರ್ಮವನ್ನು ಸ್ಥಾಪಿಸುತ್ತಿದ್ದಾನೆ, ಧರ್ಮವೇ ಆಗಿದ್ದಾನೆ. ವೇದಗಳು, ಶಾಸ್ತ್ರಗಳು, ಪುರಾಣೇತಿಹಾಸಗಳು ಎಲ್ಲವೂ ಧರ್ಮದ ಮಹಿಮೆಯನ್ನು ಘಂಟಾಘೋಷವಾಗಿ ಸಾರಿ ಹೇಳಿವೆ. ವಿವಿಧ ಧರ್ಮಗಳ ಶಾಸ್ತ್ರ ಗ್ರಂಥಗಳಲ್ಲಿ ಧರ್ಮವೆಂದರೇನೆಂಬುದನ್ನು ಆಯಾ ಮತಾನುಯಾಯಿಗಳಿಗೆ ಸುಪರಿಚಿತವಾದ ಭಾಷೆಯಲ್ಲಿ ವಿಸ್ತಾರವಾಗಿ ನಿರೂಪಿಸಿರುತ್ತದೆ. ಎಲ್ಲೇ ಇರಲಿ, ಪ್ರತಿಯೊಬ್ಬ ಮನುಷ್ಯನ ಕರ್ತವ್ಯ ಎಲ್ಲಾ ಕಾಲಗಳಲ್ಲು ಧರ್ಮನಾರಾಯಣನಿಗೆ, ಧರ್ಮಮೂರ್ತಿಗೆ ಗೌರವವನ್ನು ಅರ್ಪಿಸುವುದು. ಧಾರ್ಮಿಕ ಚಟುವಟಿಕೆಗಳ ನದಿಯು ಎಂದಿಗೂ ಬತ್ತಬಾರದು. ತಂಪಾದ ಆ ನದಿಯ ನೀರು ಹರಿಯದೆ ನಿಂತುಹೋದಾಗ ಗಂಡಾಂತರವು ಖಚಿತ. ಮಾನವ ಕುಲವು ಈ ಹಂತಕ್ಕೆ ಬಂದು ನಿಂತಿರುವುದಕ್ಕೆ ಕಾರಣವಾದರೂ ಧರ್ಮವು ಸರಸ್ವತೀ ನದಿಯಂತೆ ಅಗೋಚರವಾಗಿ ನೆಲದಡಿಯಲ್ಲಿ, ಬೇರುಗಳಿಗೆ ನೀರುಣಿಸುತ್ತಾ ತೊರೆಗಳಿಗೆ ನೀರು ತುಂಬುತ್ತಾ ಹರಿಯುತ್ತಿರುವುದೇ. ಮಾನವರು ಮಾತ್ರವಲ್ಲ, ಪಕ್ಷಿಪ್ರಾಣಿಗಳೂ ಧರ್ಮಕ್ಕೆ ಬದ್ಧರಾಗಬೇಕು, ಆಗ ಅವೂ ಸಂತೋಷವಾಗಿ ಸುಖವಾಗಿ ಬದುಕಿರಲು ಸಾಧ್ಯವಾಗುತ್ತದೆ.

ಆದ್ದರಿಂದ ಧರ್ಮದ ನದಿಯು ನಿರಂತರವಾಗಿ, ತುಂಬಿ ಹರಿಯುತ್ತಿರುವಂತೆ ನೋಡಿಕೊಳ್ಳಬೇಕು. ಅದರಿಂದ ಇಡೀ ಜಗತ್ತೇ ಸುಖಮಯವಾಗುತ್ತದೆ. ಧರ್ಮ ವನ್ನು ಅಲಕ್ಷಿಸಿ, ಧಾರ್ಮಿಕ ಜೀವನದ ಮೂಲತತ್ತ್ವಗಳನ್ನು ನಂಬದಿರುವುದ ರಿಂದಲೇ ಇಂದು ಜಾಗತಿಕ ರಂಗದಲ್ಲಿ ಗಂಡಾಂತರವು ಹುಚ್ಚೆದ್ದು ಕುಣಿಯುತ್ತಿದೆ. ಆದ್ದರಿಂದ ಮನುಷ್ಯನು ಧರ್ಮದ ಹೃದಯವನ್ನು ಅತ್ಯಂತ ಸ್ಪಷ್ಟವಾಗಿ ತಿಳಿದು ಕೊಳ್ಳುವುದು ಅತ್ಯಗತ್ಯ.

ಧರ್ಮ ಎಂದರೇನು? ಧರ್ಮದ ಸಾರವೇನು? ಧರ್ಮವನ್ನು ಅವಲಂಬಿಸಿದರೆ ಮನುಷ್ಯನು, ಸಾಮಾನ್ಯ ವ್ಯಕ್ತಿಯು ಸುಖಸಂತಸಗಳಿಂದ ತುಂಬಿದ ಬದುಕನ್ನು ನಡೆಸಲು ಸಾಧ್ಯವಾಗುತ್ತದೆಯೆ? ಈ ಸಂದೇಹಗಳು ಮನುಷ್ಯನನ್ನು ಕಾಡುತ್ತವೆ. ಅವುಗಳನ್ನು ಪರಿಹಾರ ಮಾಡಿಕೊಳ್ಳುವುದು ಅಗತ್ಯ, ತುರ್ತು ಕೂಡ.

ಧರ್ಮ ಎಂಬ ಪದವನ್ನು ಹೇಳಿದೊಡನೆ ಸಾಮಾನ್ಯನ ಮನಸ್ಸಿನಲ್ಲಿ ದಾನ ಕೊಡು ವುದು, ಯಾತ್ರಿಕರಿಗೆ ಆಹಾರ ವಸತಿಗಳನ್ನು ಒದಗಿಸುವುದು, ತನ್ನ ಪರಂಪರಾಗತ ವೃತ್ತಿಗೆ ಅಥವಾ ಕಸುಬಿಗೆ ಬದ್ಧನಾಗಿ ಅದನ್ನು ಮುಂದುವರಿಸುವುದು, ಕಾನೂನು ಕಟ್ಟಳೆಗಳಿಗೆ ಬದ್ಧನಾಗುವುದು, ತಪ್ಪು ಸರಿಗಳ ನಡುವೆ ವಿವೇಚನೆ, ತನ್ನ ಸ್ವಭಾವ ವನ್ನೂ ಮನಸ್ಸಿನ ಹುಚ್ಚು ವರ್ತನೆಗಳನ್ನೂ ವಿಶ್ಲೇಷಣೆ ಮಾಡುವುದು ಮತ್ತು ತನ್ನ ಬಯಕೆಗಳು ಫಲಿಸುವಂತೆ ನೋಡಿಕೊಳ್ಳುವುದು ಇತ್ಯಾದಿ ವಿಚಾರಗಳು ಬರುತ್ತವೆ.

ಧರ್ಮದ ಅತ್ಯಂತ ನಿರ್ಮಲ ಶುದ್ಧ ಸ್ವರೂಪವು ಕೊಳೆ ಮೆತ್ತಿ ವಿರೂಪಗೊಂಡು ಗುರುತೇ ಸಿಕ್ಕದಂತಾಗಿ ಬಹುಕಾಲವಾಗಿ ಹೋಯಿತು. ಸುಂದರವಾದ ಹೊಲ ಗದ್ದೆಗಳು, ತೋಟಗಳು ಅಲಕ್ಷಿತವಾಗಿ ಕಾಡು, ಕಳೆ, ಮುಳ್ಳು ಪೊದೆ ಬೆಳೆದು ಗುರುತು ಸಿಕ್ಕದಂತಾಗಿಬಿಟ್ಟಿದೆ. ಲೋಭಿಗಳಾದ ಜನರು ಸುಂದರವಾದ ಮರಗಳನ್ನು ಕಡಿದು ಮೇಲ್ಮೈ ಸ್ವರೂಪವನ್ನೇ ಬದಲಾಯಿಸುತ್ತಿದ್ದಾರೆ. ಕಾಲ ಕಳೆದಂತೆ ಜನರು ಈ ಹೊಸ ಪರಿಸ್ಥಿತಿಗಳಿಗೆ ಒಗ್ಗಿಕೊಳ್ಳುತ್ತಾರೆ. ಉಂಟಾಗಿರುವ ಪರಿವರ್ತನೆಯನ್ನೂ ಅವನತಿಯನ್ನೂ ಗಮನಿಸದೆ ಹೋಗುತ್ತಾರೆ. ಧರ್ಮಕ್ಕೂ ಇದೇ ಗತಿ ಒದಗಿದೆ.

ಪ್ರತಿಯೊಬ್ಬನೂ ವೇದಗಳಲ್ಲಿ, ಶಾಸ್ತ್ರ ಮತ್ತು ಪುರಾಣಗಳಲ್ಲಿ ನಿರೂಪಿತವಾಗಿರುವ ಧರ್ಮದ ರೂಪುರೇಖೆಗಳನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಬೇಕು. ಅಸಮರ್ಥ ಬುದ್ಧಿ, ಕಡಿವಾಣವಿಲ್ಲದ ಭಾವಾವೇಶಗಳು, ಅಶುದ್ಧ ತರ್ಕ ಇವುಗಳಿಂದ ತಪ್ಪಾಗಿ ತಿಳಿದುಕೊಂಡು ಧರ್ಮದ ಮೂಲ ಲಕ್ಷಣಗಳು ತೆಳುವಾಗಿಬಿಟ್ಟಿವೆ. ಮಹಿಮೆ ಹಾನಿಗೊಳಗಾಗಿದೆ. ಸ್ವಚ್ಛವಾದ ನೀಲ ಆಗಸದಿಂದ ಬೀಳುವ ಮಳೆಹನಿಗಳು ನೆಲಕ್ಕೆ

ಬಿದ್ದು ಬಣ್ಣ ಪಡೆದುಕೊಂಡು ಅಶುದ್ಧವಾಗುವ ಹಾಗೆ ಪ್ರಾಚೀನ ಋಷಿಗಳು ನೀಡಿದ ನಿರ್ಮಲ ಸಂದೇಶವು, ಅವರ ಉಜ್ವಲ ವರ್ತನೆಗಳ ಮಾದರಿಗಳು, ಅವರು ಮಾಡಿದ ಕಾರ್ಯಗಳ ಹಿಂದಿದ್ದ ನಿಷ್ಕಲ್ಮಷ ಪ್ರೇರಣೆಗಳೆಲ್ಲವೂ ಹಿಂದಿನ ವೈಭವದ ಅಣಕು ಚಿತ್ರಗಳಾಗಿವೆ. ಸಂಸ್ಕೃತಿ ಹೀನ ವಿದ್ವಾಂಸರು ಮತ್ತು ವ್ಯಾಖ್ಯಾನಕಾರರು ಹಾಗೆ ಮಾಡಿಟ್ಟಿದ್ದಾರೆ.

ಮಕ್ಕಳಿಗಾಗಿ ರಚಿತವಾದ ಪುಸ್ತಕಗಳಲ್ಲಿ ಪಠ್ಯವು ಸ್ಪಷ್ಟವಾಗುವುದಕ್ಕಾಗಿ ಚಿತ್ರಗಳನ್ನು ಸೇರಿಸಲಾಗುತ್ತದೆ. ಮಕ್ಕಳು ಚಿತ್ರಗಳನ್ನೇ ನೋಡುತ್ತಾ ಇದ್ದು ಬಿಡುತ್ತಾರೆ. ಅವು ಏನು ಹೇಳಬೇಕಾಗಿದೆಯೋ ಅದನ್ನು ಗಮನಿಸುವುದೇ ಇಲ್ಲ. ಹಾಗೆಯೇ ಅಜಾಗರೂಕರೂ ಅವಿದ್ಯಾವಂತರೂ ಆದವರು ಧಾರ್ಮಿಕ ಆಚರಣೆಗಳನ್ನು ತಪ್ಪಾಗಿ ಭಾವಿಸುತ್ತಾರೆ. ಮಹಾಸತ್ಯಗಳ್ನು ಚಿತ್ರಿಸಲಿಕ್ಕಾಗಿ ರೂಪಿತವಾದುವೇ ಸತ್ಯಗಳೆಂದು ಭಾವಿಸಿ, ಅವು ಸೂಚಿಸುವ ಮೂಲ ಸತ್ಯಗಳನ್ನು ಅಲಕ್ಷಿಸುತ್ತಾರೆ. ದಾರಿ ನಡೆಯುತ್ತಿರುವ ಯಾತ್ರಿಕರು ಆಯಾಸವಾದಾಗ ದಾರಿ ಬದಿಯ ಛತ್ರಗಳಲ್ಲಿ ಸ್ವಲ್ಪ ವಿಶ್ರಾಂತಿ ಪಡೆಯುತ್ತಾರೆ. ಆದರೆ ಅಲ್ಲಿರುವ ಸಮಯದಲ್ಲಿ ಅಲಕ್ಷ್ಯದಿಂದ ತಮಗೆ ಆಶ್ರಯ ಕೊಟ್ಟ ಸ್ಥಳವನ್ನೇ ಕೆಡಿಸಿ ಹಾಳುಮಾಡುತ್ತಾರೆ. ಹಾಗೆಯೇ ಮಂದ ಬುದ್ಧಿಯವರೂ ವಿಕೃತ ಬುದ್ಧಿಯವರೂ ವೈದಿಕ ನೀತಿ ನಿಯಮಗಳನ್ನು ಹಾನಿಗೊಳಪಡಿಸಿ ತಮ್ಮ ಕೈಚಳಕದಿಂದ ಕಂಡುಬರುತ್ತಿರುವುದೇ ಸಾರವಾಗಿ ವೇದಗಳ ಬೋಧನೆಯೆಂದು ಜಗತ್ತು ನಂಬುವಂತೆ ಅವರನ್ನು ವಂಚಿಸುತ್ತಾರೆ.

ಹೀಗೆ ಧರ್ಮವು ಹಾನಿಗೊಳ್ಳುತ್ತಿರುವಾಗ, ದೈವ ಶತ್ರುಗಳ ಕೈಗೆ ಸಿಕ್ಕಿ ಧರ್ಮವು ವಿಕೃತಗೊಳ್ಳುತ್ತಿರುವಾಗ ಭಗವಂತನು ದೇವತೆಗಳ ಹಾಗೂ ಸತ್ಪುರುಷರ ಕರೆಗೆ ಓಗೊಟ್ಟನು. ಧರ್ಮ–ಕರ್ಮಗಳ ಕ್ಷೇತ್ರದಲ್ಲಿ ನೇರ್ಮೆ ಮತ್ತು ಸತ್ಯಗಳನ್ನು ಪುನಃ ಸ್ಥಾಪಿಸಿ ಜಗತ್ತನ್ನು ವಿನಾಶದಿಂದ ರಕ್ಷಿಸಿದನು.

ಈಗ ಇಂದಿನ ಕುರುಡನ್ನು ವಾಸಿಮಾಡಬಲ್ಲವರು ಯಾರು? ಮನುಷ್ಯನನ್ನು ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳ ಸೆಳೆತಗಳ ಮೂಲಕ ಗಂಡಾಂತರಕ್ಕೆ ಸೆಳೆಯುತ್ತಿರುವ ಅರಿಷಡ್ವರ್ಗವೆಂಬ ಆರು ಮುಖದ ಪ್ರಾಣಿಯನ್ನು ಅವನು ಇಂದು ಕೊಲ್ಲಬೇಕಾಗಿದೆ. ಧರ್ಮವನ್ನು ಉಳಿಸಲು ಇರುವ ದಾರಿ ಅದೊಂದೇ.

ಭಗವಂತನನ್ನು ವೇದಗಳು ಧರ್ಮ ಎಂದು ಕರೆಯುತ್ತವೆ; ಅದನ್ನೇ ಬುದ್ಧನು ವಿಜ್ಞಾನ ಎಂದು ಕರೆಯುತ್ತಾನೆ. ಏಕೆಂದರೆ ಆ ದಿನಗಳಲ್ಲಿ ವೇದವೆಂಬ ಪದವನ್ನು ಇಚ್ಛೈಸುತ್ತಿರಲಿಲ್ಲ. ಹಿಂದೆ ಸೋಮಕನೆಂಬ ರಾಕ್ಷಸನ ಕಾಲದಲ್ಲಿ ವೇದಗಳನ್ನು

ಅನುಸರಿಸುವವರು, ಅವನ್ನು ವೇದ ಎಂದು ಕರೆಯಲು ಹಿಂಜರಿಯುತ್ತಿದ್ದರು. ಮೃತ್ಯು ಭೀತಿಯಿರುವಾಗ ಅದು ಸಹಜ. ಬುದ್ಧನಿಗೆ ವೇದಗಳ ಬಗೆಗೆ ತುಂಬಾ ಗೌರವವಿತ್ತು. ಅವನು ಯಾವಾಗಲೂ ಭಗವಂತನೊಂದಿಗೆ ಬೆರತಿದ್ದನು. ಅನೇಕ ವೇಳೆ ಬುದ್ಧನನ್ನು ಒಬ್ಬ ನಾಸ್ತಿಕ ಎಂಬಂತೆ ಮಾತನಾಡುತ್ತಾರೆ! ಹಾಗಾದರೆ ಆಸ್ತಿಕ ಯಾರು? ಬುದ್ಧನ ಇಡೀ ಜೀವನವೇ ಧರ್ಮದ ಇತಿಹಾಸ. ಕೆಲವರು ಶಂಕರರನ್ನು ಧರ್ಮ ಮತ್ತು ಕರ್ಮಗಳಿಗೆ ವಿರೋಧಿಯಾದವರು ಎಂದು ಟೀಕಿಸುವುದುಂಟು. ಆದರೆ ಕಾಮನೆಯ ಪೂರೈಕೆಯನ್ನೇ ದೃಷ್ಟಿಯಲ್ಲಿಟ್ಟುಕೊಂಡು ಆಚರಿಸುವ ಧರ್ಮ ಕರ್ಮಗಳನ್ನು ಮಾತ್ರ ಶಂಕರರು ವಿರೋಧಿಸಿದರು. ವಾಸ್ತವವಾಗಿ ಅವರು ಮೂಲ ಸತ್ಯದ ಅರಿವಿನಿಂದ ಪ್ರೇರಣೆ ಪಡೆದ ಧರ್ಮ ಮತ್ತು ಕರ್ಮಗಳ ಪಥವನ್ನು ಬೋಧಿಸಿದ ಮಹಾಗುರು.

ಶಂಕರರು ಸತ್ಯವನ್ನು ಆಧರಿಸಿದ ಧರ್ಮ ಮತ್ತು ಕರ್ಮಗಳನ್ನು ಸಮರ್ಥಿಸಿದ್ದನ್ನಾಗಲಿ, ಬುದ್ಧನು ವೇದಗಳ ಮೂಲ ಸತ್ಯಗಳಲ್ಲಿ ಇಟ್ಟುಕೊಂಡಿದ್ದ ನಂಬಿಕೆಯನ್ನಾಗಲಿ ಒಂದು ಉನ್ನತವಾದ ದೃಷ್ಟಿಯಿರುವವರು ಮಾತ್ರವೇ ಮೆಚ್ಚಬಲ್ಲರು. ಆ ದೃಷ್ಟಿಯಿಲ್ಲದೆ ಹೋದರೆ ವ್ಯಾಖ್ಯಾನವು ದಾರಿ ತಪ್ಪುತ್ತದೆ. ತುಂಬಾ ಎತ್ತರಕ್ಕೆ ಹತ್ತಬೇಕಾದರೆ ಅಷ್ಟೇ ಎತ್ತರವಾದ ಏಣಿಯಿರಬೇಕಲ್ಲವೆ?

ಯಾರು ಅಹಂಕಾರವನ್ನು ಅಡಗಿಸಿ, ಸ್ವಾರ್ಥದ ಬಯಕೆಗಳನ್ನು ಗೆದ್ದು, ಪಾಶವೀ ಭಾವನೆಗಳನ್ನು, ಪ್ರವೃತ್ತಿಗಳನ್ನು ನಾಶಪಡಿಸಿ ದೇಹವೇ ಆತ್ಮವೆಂದು ಭಾವಿಸುವ ಸಹಜ ಪ್ರವೃತ್ತಿಯನ್ನು ತೊರೆದವನೋ ಅವನು ನಿಜವಾಗಿ ಧರ್ಮದ ಪಥವನ್ನು ಹಿಡಿದಿದ್ದಾನೆ ಎಂದು ಹೇಳಬಹುದು. ಧರ್ಮದ ಗುರಿಯು ಸಾಗರದಲ್ಲಿ ತರಂಗವು ಲೀನವಾಗುವ ಹಾಗೆ ಪರಮಾತ್ಮನಲ್ಲಿ ಜೀವಾತ್ಮವು ಲೀನವಾಗುವುದು ಎಂದು ತಿಳಿದುಕೊಳ್ಳುತ್ತಾನೆ.

ಪ್ರಾಪಂಚಿಕವಾದ ಎಲ್ಲಾ ಚಟುವಟಿಕೆಗಳಲ್ಲಿ ಶಿಷ್ಟಾಚಾರವನ್ನು ಬಿಡದಂತೆ, ಸಜ್ಜನಿಕೆಯ ನಿಯಮಗಳನ್ನು ಉಲ್ಲಂಘಿಸದಂತೆ ಎಚ್ಚರ ವಹಿಸಬೇಕು. ಅಂತರ್ವಾಣಿಯನ್ನು ಹುಸಿಗೊಳಿಸಬಾರದು. ಎಲ್ಲಾ ಸಮಯಗಳಲ್ಲು ಪ್ರಜ್ಞೆಯು ಕೊಡುವ ಆದೇಶಗಳನ್ನು ಗೌರವಿಸುವುದಕ್ಕೆ ಸಿದ್ಧವಾಗಿರಬೇಕು. ಬೇರೆ ಯಾರದೋ ದಾರಿಯಲ್ಲಿ ನೀವು ಹೆಜ್ಜೆಯಿಡುತ್ತಿದ್ದೀರೋ ಹೇಗೆ ಎಂಬುದನ್ನು ಗಮನಿಸುತ್ತಿರಬೇಕು. ಈ ಮೋಹಕ ವೈವಿಧ್ಯದ ಹಿಂದೆ ಇರುವ ಸತ್ಯವನ್ನು ಕಂಡುಹಿಡಿಯಲು ಸದಾ ಜಾಗರೂಕನಾಗಿರಬೇಕು. ಇದು ಮನುಷ್ಯನ ಕರ್ತವ್ಯ, ಅವನ ಧರ್ಮ. ಎಲ್ಲವೂ ಬ್ರಹ್ಮ, ಸರ್ವಂ ಖಲ್ವಿದಂ ಬ್ರಹ್ಮ ಎಂದು ತಿಳಿಸಿಕೊಡುವ ಜ್ಞಾನದ ಜ್ವಾಲೆಯು

ನಿಮ್ಮ ಅಹಂಕಾರ ಮತ್ತು ಪ್ರಾಪಂಚಿಕ ಮೋಹದ ಕುರುಹು ಉಳಿಯದಂತೆ ಸುಟ್ಟು ಬೂದಿ ಮಾಡುತ್ತದೆ. ಬ್ರಹ್ಮದೊಂದಿಗೆ ವಿಲೀನವಾಗುವ ಅಮೃತದಿಂದ ನೀವು ಮತ್ತರಾಗಬೇಕು. ಅದೇ ಧರ್ಮದ ಹಾಗೂ ಧರ್ಮ ಪ್ರೇರಿತ ಕರ್ಮದ ಅಂತಿಮ ಲಕ್ಷ್ಯ.

"ಜ್ಞಾನದ ವೇದಿಕೆಯ ಮೇಲೆ ಅಜ್ಞಾನ ಮತ್ತು ಅಹಂಕಾರಗಳನ್ನು ಬಲಿಕೊಟ್ಟು ಅಲ್ಲಿ ಧರ್ಮವನ್ನು ಪ್ರತಿಷ್ಠೆ ಮಾಡಿ"—ವೇದಗಳು ಕೊಡುವ ಸಂದೇಶ ಇದು. ಆತ್ಮವು ಪರಮಾತ್ಮನೊಂದಿಗೆ ವಿಲೀನವಾಗಲು ಆಧಾರವನ್ನು ಸಿದ್ಧ ಪಡಿಸುವ ಪ್ರತಿಯೊಂದು ನಿಸ್ವಾರ್ಥ ಕರ್ಮವೂ ಎಲ್ಲ ಕಡೆಯೂ ಅಂತಸ್ಥವಾಗಿರುವ ಬ್ರಹ್ಮದ ಕಡೆಗೆ ನಿಮ್ಮ ದರ್ಶನವನ್ನು ವಿಸ್ತರಿಸುವ ಪ್ರತಿಯೊಂದು ಕಾರ್ಯವೂ ಬ್ರಹ್ಮಜ್ಞಾನ ಎಂಬ ಮಹಾ ಸಾಗರದ ಕಡೆಗೆ ಸಾಗುತ್ತಿರುವ ಪವಿತ್ರತೆಯ ನದಿಯನ್ನು ಪೋಷಿಸುವ ಕಿರು ತೊರೆಯಾಗಿರುತ್ತದೆ. ನಿಮ್ಮ ಕಾರ್ಯಚಟುವಟಿಕೆಗಳೆಲ್ಲವೂ ವಿಶ್ವವನ್ನೇ ವ್ಯಾಪಿಸಿರುವ ಪರಮಾತ್ಮನನ್ನು ಆರಾಧಿಸುವ ಆಚರಣೆಗಳು. ಸಮರ್ಪಣೆ ಮತ್ತು ಶರಣಾಗತಿಯ ಭಾವನೆಯಿಂದ ಏನನ್ನು ಮಾಡಿದರೂ ಅದು ಧರ್ಮದ ಅಂಗವಾಗಿ ಸಾಕ್ಷಾತ್ಕಾರದತ್ತ ಒಯ್ಯುತ್ತದೆ. ಭಾರತೀಯ ಜೀವನ ವಿಧಾನದ ವ್ಯೂಹವೇ ಅದು. ಪ್ರತಿಯೊಂದು ಕ್ಷಣವನ್ನೂ ಪ್ರತಿಯೊಂದು ಮಾತನ್ನೂ ಕೃತಿಯನ್ನೂ ಆಲೋಚನೆಯನ್ನೂ ಸಾಕ್ಷಾತ್ಕಾರದತ್ತ ಒಂದು ಮುಂದಿನ ಹೆಜ್ಜೆಯಾಗಿ ಪವಿತ್ರಗೊಳಿಸಿಕೊಳ್ಳುವುದು.

ಪ್ರಾಚೀನ ಧರ್ಮ ಕರ್ಮಗಳನ್ನು, ಅವುಗಳ ಸಾಂಕೇತಿಕ ಅರ್ಥವನ್ನು ಒಳಹೊಕ್ಕು ನೋಡಿ ತಿಳಿದುಕೊಳ್ಳಬೇಕು. ಆಧ್ಯಾತ್ಮಿಕ ಕ್ಷೇತ್ರದಲ್ಲಿ ವಿಶಿಷ್ಟ ಅರ್ಥವನ್ನು ಕೊಡುವ ಅನೇಕ ಪಾರಿಭಾಷಿಕ ಪದಗಳಿವೆ. ಇವುಗಳನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬೇಕು. ಶಾಸ್ತ್ರಗಳ ಬೋಧನೆಯನ್ನು ಸರಿಯಾಗಿ ಗ್ರಹಿಸಿಕೊಳ್ಳಬೇಕಾದರೆ, ಅವುಗಳನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಒಂದು ನಿದರ್ಶನವನ್ನು ನೋಡೋಣ. ಪ್ರಾಚೀನ ಕಾಲಗಳಲ್ಲಿ ಜನರು ಯಜ್ಞಗಳನ್ನು ಮಾಡುತ್ತಿದ್ದರು. ಈ ಯಜ್ಞಗಳಲ್ಲಿ ಪಶುಗಳನ್ನು ಅಥವಾ ಪ್ರಾಣಿಗಳನ್ನು ಬಲಿ ಕೊಡುತ್ತಿದ್ದರು. ಆದರೆ ಇಲ್ಲಿ ಪ್ರಾಣಿ ಒಂದು ಸಂಕೇತ ಮಾತ್ರ. ಆ ಮೂಕ ಪ್ರಾಣಿಯನ್ನು ಅವರು ತುಂಡು ತುಂಡಾಗಿ ಕತ್ತರಿಸುತ್ತಿರಲಿಲ್ಲ. ಮನುಷ್ಯನು ಯಜ್ಞವೇದಿಕೆಯಲ್ಲಿ ಅದರ ಜೀವಿತವನ್ನು ಕೊನೆಗೊಳಿಸದೆಯೂ ಪ್ರಾಣಿಯು ತ್ಯಾಗ ಜೀವನವನ್ನು ನಡೆಸುತ್ತದೆ. ಕತ್ತರಿಸಿ ಹೋಮ ಮಾಡಬೇಕಾದ ಪ್ರಾಣಿ ಬೇರೆ. ಆಧ್ಯಾತ್ಮಿಕ ಪರಿಭಾಷೆಯಲ್ಲಿ ಪಶು ಎಂದರೆ ದೇಹ ಪ್ರಜ್ಞೆ, ನಾನು ಎಂಬ ಪ್ರಜ್ಞೆ, ಇದನ್ನು ಕಡಿದೆಸೆಯಬೇಕು. ಭಗವಂತನು ಪಶುಪತಿ ಅಥವಾ ಗೋವಿಂದ ಎಂದು ಪ್ರಸಿದ್ಧನು. ಪಶುಪತಿ ಎಂದರೆ ಸಮಸ್ತ ಜೀವಿಗಳ

ಪ್ರಭು, ಒಡೆಯ ಎಂದರ್ಥ. ಪಶು ಎಂದರೆ ಜೀವ. ಗೋವಿಂದ ಎಂದರೆ ಗೋವುಗಳನ್ನು ಅಥವಾ ಜೀವಗಳನ್ನು ರಕ್ಷಿಸುವವನು ಎಂದರ್ಥ. ಗೋ ಎಂದರೆ ಜೀವ. ಗೋವುಗಳನ್ನು ಪಾಲಿಸುವುದು ಕೃಷ್ಣನ ಒಂದು ಸಾಂಕೇತಿಕ ಲೀಲೆ. ಅದು ಜೀವಿಗಳನ್ನು ರಕ್ಷಿಸುವ ಅವನ ಕಾರ್ಯವನ್ನು ಸೂಚಿಸುತ್ತದೆ.

ಶಾಸ್ತ್ರಗಳಿಗೆ ಗಹನವಾದ ಅಂತರಾರ್ಥಗಳಿವೆ. ಜೀವವು ಬಾಹ್ಯ ಪ್ರಕೃತಿಯ ಮೋಹ ವನ್ನೂ ಅದು ಉಂಟುಮಾಡುವ ಮಾಯೆಯನ್ನೂ ತೊರೆದು ತನ್ನ ನಿಜವನ್ನು ಅರಿಯುವಂತೆ ಮಾಡುವುದು ಅಥವಾ ಈಗ ನಿಜವೆಂದು ತಿಳಿದುಕೊಂಡಿರುವುದರ ಮಿಥ್ಯೆಯನ್ನು ಗ್ರಹಿಸುವಂತೆ ಮಾಡುವುದು ಧರ್ಮದ ಗುರಿ.

ಈ ಅರ್ಥಗಳನ್ನು ಹಿರಿಯರು, ಕಿರಿಯರು ಎಲ್ಲರೂ ತಿಳಿದುಕೊಳ್ಳಬೇಕು. ಶಿವ ದೇವಾಲಯದ ನಿದರ್ಶನವನ್ನು ತೆಗೆದುಕೊಳ್ಳಿ. ಶಿವನ ವಿಗ್ರಹದ ನೇರ ಎದುರಿಗೆ ನಂದಿಯ ವಿಗ್ರಹವಿರುತ್ತದೆ. ನಂದಿಯು ವಾಹನವಾದ್ದರಿಂದ ಅದನ್ನು ಅಲ್ಲಿ ನಿಲ್ಲಿಸಲಾಗಿದೆ ಎಂದು ಹೇಳುತ್ತಾರೆ. ನಿಜವಾಗಿ ಹೇಳುವುದಾದರೆ, ನಂದಿಯು ಅಥವಾ ಪಶುವು ಜೀವವನ್ನೂ ಲಿಂಗವು ಶಿವನನ್ನೂ ಸಂಕೇತಿಸುತ್ತವೆ. "ನಂದಿಗೂ ಶಿವನಿಗೂ ಅಂದರೆ ಜೀವಕ್ಕೂ ಶಿವನಿಗೂ ನಡುವೆ ಯಾರೂ ಅಡ್ಡ ಬರಬಾರದು," ಎಂದು ಹೇಳಲಾಗುತ್ತದೆ. ಕಾರಣ ಅವರಿಬ್ಬರೂ ಒಂದಾಗಿ ಐಕ್ಯಗೊಳ್ಳುತ್ತಾರೆ. ನಂದಿಯ ಎರಡು ಕೋಡುಗಳ ನಡುವಣಿಂದ ಶಿವನ ದರ್ಶನ ಮಾಡಬೇಕು ಎನ್ನುತ್ತಾರೆ. ಇದೇಕೆ ಈ ಕ್ರಮ ಎಂದು ಪ್ರಶ್ನಿಸಿದರೆ ಜನರು ಹೇಳುತ್ತಾರೆ: "ಲಿಂಗ ವನ್ನು ದರ್ಶನ ಮಾಡುವ ಇತರ ಎಲ್ಲ ವಿಧಾನಗಳಿಗಿಂತಲೂ ಇದು ಪವಿತ್ರ ವಾದದ್ದು," ಎಂದು. ಆದರೆ ಇಲ್ಲಿ ನಿಜವಾದ ಅರ್ಥ "ಜೀವದಲ್ಲಿ ಶಿವನನ್ನು ನೋಡು," ಎಂದು. ಪಶು ಮತ್ತು ಪಶುಪತಿ ಇಬ್ಬರೂ ಒಬ್ಬನೇ. ನಂದಿ ಮತ್ತು ಈಶ್ವರ ಸೇರಿ ನಂದೀಶ್ವರ. ಎರಡೂ ಒಂದೇ ವಸ್ತುವನ್ನು ಹೇಳುವ ಎರಡು ವಿಧಾನಗಳು. ಬಂಧನದಲ್ಲಿರುವಾಗ ನಂದಿ; ಬದ್ಧನು ಬಿಡುಗಡೆ ಹೊಂದಿ ನಂದೀಶ್ವರನನ್ನು ಸಾಧಿಸಿದಾಗ ಅದೇ ಈಶ್ವರ. ಆಗ ಅದನ್ನು ಪೂಜಿಸಲಾಗುತ್ತದೆ, ಅದು ಗೌರವಾನ್ವಿತ ವಾಗುತ್ತದೆ. ಪಶುವನ್ನು ಪಶುಪತಿಗೆ ಅರ್ಪಿಸಿದಾಗ ಅದರ ಪ್ರತ್ಯೇಕ ಅಸ್ತಿತ್ವವು ಹೊರಟುಹೋಗುತ್ತದೆ. ಅದೇ ನಿಜವಾದ ಯಜ್ಞ. ಈ ಅರ್ಥ ಮಹತ್ವ ಇಂದು ಮರೆತೇ ಹೋಗಿದೆ.

ಇಂದು ಸಾಂಕೇತಿಕ ಕರ್ಮಗಳು ಗುರುತೇ ಸಿಕ್ಕದಂತೆ ಬದಲಾಗಿಹೋಗಿವೆ. ಇಂದಿನ ಆಚರಣೆಗಳಿಗೂ ನಿನ್ನೆಯ ತತ್ತ್ವಗಳಿಗೂ ಸಂಬಂಧವೇ ಇಲ್ಲದಂತೆ ದೂರವಾಗಿವೆ. ಲೌಕಿಕ ಜೀವನದ ಅತಿ ಸಣ್ಣ ವಿವರವನ್ನೂ ಆಧ್ಯಾತ್ಮಿಕ ಪರಿಪೂರ್ಣತೆಯ ಉನ್ನತ

ಆದರ್ಶವು ಪ್ರೇರಿಸಬೇಕು. ಆಗ ಅತಿ ಸಾಮಾನ್ಯ ಜನರೂ ಗುರಿಯ ಕಡೆಗೆ ಒಂದೊಂದೇ ಹೆಜ್ಜೆಯನ್ನಿಡಲು ಸಾಧ್ಯವಾಗುತ್ತದೆ. ನೀವು ಯಾವುದೇ ಒಂದು ಕಾರ್ಯದ ಪ್ರಕ್ರಿಯೆಯನ್ನೂ ಅದರ ಉದ್ದೇಶವನ್ನೂ ವಿವೇಚಿಸದೆ ಸುಮ್ಮನೆ ಮಾಡುತ್ತಿದ್ದರೆ ಅದು ಅರ್ಥಹೀನವಾದ ಪಳೆಯುಳಿಕೆ ಕಾರ್ಯವಾಗುತ್ತದೆ. ಒಮ್ಮೆ ಪ್ರಹ್ಲಾದನು ಹೇಳಿದನು: "ಅಹಂಕಾರವನ್ನು ನಾಶ ಮಾಡುವುದು ಬಹು ಕಷ್ಟವಾದ್ದ ರಿಂದ ಮನುಷ್ಯನು ಬದಲಿಯಾಗಿ ಈ ಮೂಕ ಪ್ರಾಣಿಯನ್ನು ಬಲಿ ಕೊಡುವುದು ಸುಲಭವೆಂದು ಪರಿಗಣಿಸುತ್ತಾನೆ. ಪ್ರಾಣಿ ಬಲಿಯು ತಮೋ ಗುಣದ ಅಭಿವ್ಯಕ್ತಿ; ಅದು ಬಂಧನದ ದಾರಿ. ಅಹಂಕಾರವೆಂಬ ಪ್ರಾಣಿಯನ್ನು ಬಲಿಗೊಡುವುದು ಸಾತ್ವಿಕ ಯಜ್ಞ, ಅದು ಬಿಡುಗಡೆಯ ದಾರಿ."

ಹೀಗೆ ಹಿಂದಿನ ದಿನಗಳ ಪಾರಮಾರ್ಥವು ಇಂದು ಪರಮಾರ್ಥವಾಗಿ ಪರಿವರ್ತಿತ ವಾಗಿಬಿಟ್ಟಿದೆ! (ಪರಮಾರ್ಥ ಎಂದರೆ ಅತ್ಯುನ್ನತವಾದ ಲಕ್ಷ್ಯ ಎಂದರ್ಥ, ಪಾರ ಮಾರ್ಥ ಎಂದರೆ ಮೂರ್ಖತನ ಗುರಿ). ಪ್ರಾಚೀನ ಕಾಲದ ಪ್ರತಿಯೊಂದು ಆಚರಣೆಯೂ ಇಂದು ಗುರುತು ಹಿಡಿಯಲೂ ಸಾಧ್ಯವಿಲ್ಲದ ಮಟ್ಟಿಗೆ ಹುಚ್ಚಾಪಟ್ಟೆ ಬೆಳೆದಿದೆ, ಹಲವಾರು ದಿಕ್ಕುಗಳಲ್ಲಿ ಕೊಂಬೆಗಳನ್ನು ಚಾಚಿಕೊಂಡಿದೆ. ಈಗ ಈ ಮರ ವನ್ನು ಬೇರು ಸಹಿತ ಕಿತ್ತು ಬೇರೆ ಹೊಸ ಸಸಿಯನ್ನು ನೆಡಲು ಸಾಧ್ಯವಿಲ್ಲವಾಗಿದೆ. ಆದ್ದರಿಂದ ಇರುವ ಮರವನ್ನೇ ಸರಿಯಾಗಿ ಕತ್ತರಿಸಿ ನೇರವಾಗಿ ಬೆಳೆಯುವ ಹಾಗೆ ಮಾಡಬೇಕು. ಅತ್ಯುನ್ನತ ಲಕ್ಷ್ಯವನ್ನು ಸದಾ ನೆನಪಿನಲ್ಲಿ ಇಟ್ಟುಕೊಳ್ಳಬೇಕೇ ಹೊರತು ಅತಿ ನೀಚವಾದ ಗುರಿಯನ್ನು ಯೋಚಿಸಲೂ ಬಾರದು.

ಅಧ್ಯಾಯ ೨

# ದೈವಿಕ ಮತ್ತು ಲೌಕಿಕ ಧರ್ಮ

ಧರ್ಮವನ್ನು ಯಾವುದೇ ಒಂದು ಸಮಾಜಕ್ಕಾಗಲಿ, ರಾಷ್ಟ್ರಕ್ಕಾಗಲಿ ಸೀಮಿತಗೊಳಿಸಲು ಸಾಧ್ಯವಿಲ್ಲ. ಏಕೆಂದರೆ ಅದು ಇಡೀ ಜೀವ ಜಗತ್ತಿನ ಸುದೈವದೊಂದಿಗೆ ಸಂಬಂಧಿಸಿದೆ. ಅದು ಎಂದಿಗೂ ನಂದಿಸಲಾರದ ಬೆಳಕಿನ ಕುಡಿ. ಅದರ ವರದಾಯಕತ್ವವು ಎಂದಿಗೂ ಬತ್ತುವುದಿಲ್ಲ. ಕೃಷ್ಣನು ಗೀತೆಯನ್ನು ಅರ್ಜುನನಿಗೆ ಬೋಧಿಸಿದನು. ಆದರೆ ಅದನ್ನು ಇಡೀ ಮಾನವ ಜನಾಂಗವನ್ನುದ್ದೇಶಿಸಿ ಕೊಟ್ಟನು. ಅರ್ಜುನ ಒಂದು ನೆಪ ಅಷ್ಟೆ. ಆ ಗೀತೆಯೇ ಇಂದಿಗೂ ಮಾನವತೆಯನ್ನು ತಿದ್ದುತ್ತಿದೆ. ಅದು ಯಾವುದೇ ಒಂದು ನಿರ್ದಿಷ್ಟ ಜಾತಿ, ಧರ್ಮ ಅಥವಾ ದೇಶದ್ದಲ್ಲ. ಎಲ್ಲ ಕಡೆ ಇರುವ ಎಲ್ಲ ಮಾನವರ ಉಸಿರೇ ಆಗಿದೆ.

ಧರ್ಮವು ಹಲವು ರೂಪಗಳಲ್ಲಿ ವ್ಯಕ್ತವಾಗುತ್ತದೆ. ಕೆಲವೊಮ್ಮೆ ಅದನ್ನು ಕ್ರೋಡೀಕರಿಸಿದ ವ್ಯಕ್ತಿಗಳ ಹೆಸರಿನಿಂದ, ಮನುಧರ್ಮ ಎಂಬಂತೆ; ಕೆಲವು ಸಾರಿ ಅನುಸರಿಸುವ ವರ್ಗದ ಹೆಸರಿನಲ್ಲಿ, ವರ್ಣ ಧರ್ಮವಿರುವಂತೆ; ಕೆಲವು ಸಾರಿ ಅನ್ವಯವಾಗುವ ಬದುಕಿನ ಹಂತದ ಹೆಸರಿನಲ್ಲಿ, ಗೃಹಸ್ಥ ಧರ್ಮ ಎಂಬಂತೆ. ಆದರೆ ಇವೆಲ್ಲ ಆಚರಣೆಗೆ ಸಂಬಂಧಿಸಿದ ವಿವರಗಳನ್ನು ಕೊಡುತ್ತವೆ. ಮೂಲಭೂತ ನಿಯಮಗಳನ್ನಲ್ಲ. ನಾನು ಹೇಳುತ್ತಿರುವುದು ಆತ್ಮಧರ್ಮ, ದೈವ ಧರ್ಮದ ವಿಚಾರ. ಪ್ರಾಯೋಗಿಕ ಧರ್ಮ ಅಥವಾ ಆಚಾರ ಧರ್ಮವು ತತ್ಕಾಲದ ವಿಷಯಗಳಿಗೆ, ಸಮಸ್ಯೆಗಳಿಗೆ ಮತ್ತು ದೈಹಿಕ ಅಗತ್ಯಗಳಿಗೆ ಹಾಗೂ ಮನುಷ್ಯನಿಗೂ ಈ ಜಗತ್ತಿಗೂ ಇರುವ ನಶ್ವರ ಸಂಬಂಧಗಳಿಗೆ ಅನ್ವಯವಾಗುತ್ತದೆ. ಆ ನಿಯಮಗಳ ಉಪಕರಣವಾದ ಮಾನವ ದೇಹವೇ ಶಾಶ್ವತವಲ್ಲ; ಇನ್ನು ಈ ಧರ್ಮಗಳು ಶಾಶ್ವತವಾಗಿರುವುದಾದರೂ ಹೇಗೆ? ಅವುಗಳ ಸ್ವರೂಪವನ್ನು ಸತ್ಯವೆಂದು ವರ್ಣಿಸುವುದು ಹೇಗೆ? ಅನಿತ್ಯವಾದದ್ದು ನಿತ್ಯವಾದುದನ್ನು ವ್ಯಕ್ತಪಡಿಸಲಾರದು; ಸತ್ಯವು ಅಸತ್ಯದಲ್ಲಿ ಕಾಣಿಸಿಕೊಳ್ಳಲಾರದು; ಕತ್ತಲೆಯಿಂದ ಬೆಳಕನ್ನು ಪಡೆಯುವುದು ಹೇಗೆ ಸಾಧ್ಯ? ನಿತ್ಯವು ನಿತ್ಯದಿಂದಲೇ ಮೂಡಬೇಕು; ಸತ್ಯವು ಸತ್ಯದಿಂದ ಮಾತ್ರವೇ ಮೂಡಬೇಕು. ಆದ್ದರಿಂದ ಪ್ರಾಪಂಚಿಕ ಚಟುವಟಿಕೆಗಳು ಹಾಗೂ ದೈನಂದಿನ ಜೀವನಗಳಿಗೆ ಸಂಬಂಧಪಟ್ಟ ವಸ್ತುನಿಷ್ಠನಿಯಮಾವಳಿಗಳು ತಮ್ಮ ಕ್ಷೇತ್ರದಲ್ಲಿ ಮುಖ್ಯವಾದವೇ ಆದರೂ ಕೂಡ ಅವುಗಳನ್ನು ಆಂತರಂಗಿಕವೂ ಮೂಲಭೂತವು ಆದ ಆತ್ಮ

ಧರ್ಮದ ಪೂರ್ಣ ಅರಿವಿನಿಂದಲೇ ಆಚರಿಸಬೇಕು. ಆಗ ಮಾತ್ರವೇ ಒಳ ಹೊರ ಪ್ರೇರಣೆಗಳು ಸಹಕರಿಸಿ ಸಮರಸವುಳ್ಳ ಪ್ರಗತಿಯ ಆನಂದವನ್ನು ನೀಡುತ್ತವೆ.

ನಿಮ್ಮ ದೈನಂದಿನ ಕಾರ್ಯಚಟುವಟಿಕೆಗಳಲ್ಲಿ ಶಾಶ್ವತವಾದ ಧರ್ಮದ ಸತ್ಯ, ಮೌಲ್ಯಗಳನ್ನು ಪ್ರೇಮಪೂರಿತ ಕ್ರಿಯೆಗಳಾಗಿ ಅನುವಾದಿಸಿಕೊಂಡದ್ದೇ ಆದರೆ ನಿಮ್ಮ ಆಂತರಂಗಿಕ ಸತ್ಯವಾದ ಆತ್ಮಧರ್ಮಕ್ಕೆ ಸಲ್ಲಿಸಬೇಕಾದ ಕರ್ತವ್ಯವನ್ನೂ ಪೂರೈಸಿದಂತಾಗುತ್ತದೆ. ಆತ್ಮದ ಪಾಯದ ಮೇಲೆ ನಿಮ್ಮ ಜೀವನ ಕಟ್ಟಡವನ್ನು ಕಟ್ಟಿರಿ. ಆಗ ನಿಮ್ಮ ಪ್ರಗತಿಯು ಖಚಿತವಾಗುತ್ತದೆ.

ದೇವರನ್ನು ಶಿಲೆಯಾಗಿಸುವುದು; ಇಂದು ನಡೆಯುತ್ತಿರುವ ಪ್ರಯತ್ನ ಅದೇಯೆ. ಶಿಲೆಯನ್ನು ದೈವವನ್ನಾಗಿ ನೋಡಬೇಕಾಗಿರುವುದು ನಿಜವಾದ ಕೆಲಸವಾಗಿರುವಾಗ ಇಂಥ ಪ್ರಯತ್ನವು ಸತ್ಯದ ಕಡೆಗೆ ಹೇಗೆ ತಾನೆ ಒಯ್ದೀತು? ಮೊದಲು ದೈವತ್ವದ ರೂಪವನ್ನು ಧ್ಯಾನಿಸಿ ಚಿತ್ತದ ಮೇಲೆ ಮುದ್ರಿಸಿಕೊಳ್ಳಬೇಕು. ಆಮೇಲೆ ಆ ರೂಪ ವನ್ನು ಶಿಲೆಯಲ್ಲಿ ಕಲ್ಪಿಸಿಕೊಳ್ಳಬೇಕು. ಈ ಪ್ರಕ್ರಿಯೆಯಲ್ಲಿ ಕಲ್ಲು ದೇವರಾಗಿ ರೂಪಾಂ ತರಗೊಂಡು, ಕಲ್ಲನ್ನು ಮರೆಯಬೇಕು. ಅದೇ ರೀತಿಯಲ್ಲಿ ಮೂಲ ಧರ್ಮವನ್ನು, ಇರುವುದು ಆತ್ಮವೊಂದೇ ಎಂಬ ಮೂಲಭೂತ ಸತ್ಯವನ್ನು ನಿಮ್ಮ ಪ್ರಜ್ಞೆಯ ಮೇಲೆ ಅಚ್ಚೊತ್ತಿಕೊಳ್ಳಬೇಕು. ಆಮೇಲೆ ಆ ಶ್ರದ್ಧೆಯಿಂದಲೂ ದರ್ಶನದಿಂದಲೂ ಈ ವೈವಿಧ್ಯ ಪೂರ್ಣ ಪ್ರಪಂಚದೊಂದಿಗೆ, ಅದರ ಆಕರ್ಷಣೆ ಮತ್ತು ವಿಕರ್ಷಣೆಗಳೊಂ ದಿಗೆ ವ್ಯವಹರಿಸಬೇಕು. ಈ ವಿಧಾನದಿಂದ ಮಾತ್ರವೇ ಆದರ್ಶವನ್ನು ಸಾಧಿಸ ಬಹುದು. ಇದನ್ನು ಮಾಡಿದರೆ ಅಧಿಕೃತವಾದ ಅರ್ಥವು ತೆಳ್ಳಗಾಗುವ, ಆತ್ಮ ಧರ್ಮವು ತನ್ನ ಕಾಂತಿಯನ್ನು ಕಳೆದುಕೊಳ್ಳುವ ಅಪಾಯವುಂಟು.

ಒಂದು ಶಿಲೆಯನ್ನು ದೇವರೆಂದು ಪೂಜಿಸಿದಾಗ ಏನಾಗುತ್ತದೆ? ಅಸೀಮವೂ ನಿತ್ಯಸ್ಥಿತವೂ ಸರ್ವವ್ಯಾಪಿಯೂ ಆದ ಅಂತರ್ಯಾಮಿ ಪರವಸ್ತುವನ್ನು ಗಟ್ಟಿಯಾದ ಒಂದು ನಿರ್ದಿಷ್ಟರೂಪದಲ್ಲಿ ನೋಡುವುದಾಗುತ್ತದೆ. ಹಾಗೆಯೇ ಸಾರ್ವತ್ರಿಕವೂ ಸಮಾನವೂ ಸ್ವತಂತ್ರವೂ ಆದ ಧರ್ಮವನ್ನು ಒಂದು ನಿರ್ದಿಷ್ಟ, ಖಚಿತ ಕ್ರಿಯೆಯಲ್ಲಿ ಗುರುತಿಸಿ ಪರೀಕ್ಷಿಸಬಹುದು. ಇದು ಸಾಧ್ಯವಿಲ್ಲ ಎಂಬ ತಪ್ಪು ವಿಚಾರದಿಂದ ದಿಕ್ಕು ಗೆಡಬೇಡಿ. ನಿಮ್ಮಲ್ಲಿ ಆತಂಕವನ್ನೂ ಭೀತಿಯನ್ನೂ ಹೆಚ್ಚಿಸಿದ ಎಷ್ಟೇ ಕಷ್ಟಕರವಾದ ಕೆಲಸಗಳನ್ನು ನೀವು ಸಾಧಿಸಿಲ್ಲವೆ? ಮನುಷ್ಯನು ವಿವೇಕಿಯಾಗಿದ್ದರೆ ಅವುಗಳಿಗಿಂತ ಹೆಚ್ಚು ಅರ್ಹವಾದ, ಅವನಿಗೆ ಮನಶ್ಶಾಂತಿಯನ್ನು ನೀಡಬಲ್ಲ ಕೆಲಸಗಳನ್ನು ಮಾಡಲಾರನೆ?

ಸ್ವತಂತ್ರನಾಗಿರುವುದು ನಿನ್ನ ಜನ್ಮಸಿದ್ಧ ಹಕ್ಕು, ಬಂಧಿತನಾಗಿರುವುದಲ್ಲ. ವಿಶ್ವಾತ್ಮಕ ವಾದ, ಅನಿರ್ಬಂಧಿತ ಧರ್ಮವು ಬೆಳಗಿರುವ ಪಥದಲ್ಲಿ ಹೆಜ್ಜೆ ಹಾಕಿದಾಗ ಮಾತ್ರವೇ ನೀವು ನಿಜವಾಗಿ ಸ್ವತಂತ್ರರು; ಆ ಬೆಳಕಿನಿಂದ ದೂರ ಹೋದರೆ ನೀವು ಸಿಕ್ಕಿಕೊಳ್ಳು ವಿರಿ, ಬಂಧಿತರಾಗುವಿರಿ. ಕೆಲವರು ಒಂದು ಸಂದೇಹವನ್ನು ಎತ್ತಬಹುದು. ಆಲೋ ಚನೆಗಳ ಹಾಗೂ ಮಾತುಗಳ ಮೇಲೆ ಮಿತಿಯನ್ನು ಹೇರುವ, ನಿಯಂತ್ರಿಸುವ, ಹತೋಟಿಯಲ್ಲಿಟ್ಟುಕೊಳ್ಳುವ ಧರ್ಮವು ಒಬ್ಬ ವ್ಯಕ್ತಿಯನ್ನು ಸ್ವತಂತ್ರನನ್ನಾಗಿ ಹೇಗೆ ಮಾಡೀತು ಎಂದು. ಸ್ವಾತಂತ್ರ್ಯ ಎನ್ನುವುದು ಒಂದು ಬಗೆಯ ಬಂಧನಕ್ಕೆ ನೀವು ನೀಡುವ ಹೆಸರು. ನಿಜವಾದ ಸ್ವಾತಂತ್ರ್ಯವು ದೊರಕುವುದು ಮಾಯಾ ವಶನಾಗದಿ ದ್ದಾಗ, ದೇಹಾತ್ಮಭಾವವಿಲ್ಲದಾಗ, ಇಂದ್ರಿಯಗಳೇ ತಾನು ಎಂಬ ಪ್ರಜ್ಞೆ ಇರದಾಗ, ವಸ್ತುಜಗತ್ತಿಗೆ ಗುಲಾಮನಾಗಿಲ್ಲದಾಗ. ಹೀಗೆ ದಾಸ್ಯದಿಂದ ತಪ್ಪಿಸಿಕೊಂಡು ನಿಜ ವಾದ ಅರ್ಥದಲ್ಲಿ ಸ್ವಾತಂತ್ರ್ಯವನ್ನುಗಳಿಸಿದ ವ್ಯಕ್ತಿಗಳು ತುಂಬ ಕಡಮೆ ಜನ. ದೇಹವೇ ನಾನು ಎಂಬ ಭಾವನೆಯಿಂದ ಮಾಡಿದ ಒಂದೊಂದು ಕೆಲಸದಿಂದಲೂ ಬಂಧನವುಂಟಾಗುತ್ತದೆ. ಏಕೆಂದರೆ ಆಗ ಮನುಷ್ಯನು ಇಂದ್ರಿಯಗಳ ಆಟಿಕೆಯಾಗಿ ರುತ್ತಾನೆ. ಈ ವಿಧಿಯನ್ನು ತಪ್ಪಿಸಿಕೊಂಡವರೀಗ ಸ್ವತಂತ್ರರು; ಧರ್ಮವು ಕರೆದೊ ಯ್ಯುವ ಆ ಆದರ್ಶ ಹಂತವೇ ಸ್ವಾತಂತ್ರ್ಯ. ಆ ನೆಲೆಯನ್ನು ಸದಾ ಮನಸ್ಸಿನಲ್ಲಿಟ್ಟು ಕೊಂಡು ಬದುಕಿನ ಚಟುವಟಿಕೆಗಳಲ್ಲಿ ತೊಡಗಿದ್ದೇ ಆದರೆ ಅವನು ಮುಕ್ತ ಪುರುಷನಾಗುತ್ತಾನೆ.

ನಿಮ್ಮನ್ನು ನೀವೇ ಕಟ್ಟಿಹಾಕಿಕೊಂಡು ಧರ್ಮದ ದಾರಿಯಿಂದ ದೂರ ಸರಿದಿರುವುದ ರಿಂದಲೇ ನೀವು ಬಂಧಿತರಾಗಿರುವುದು. ಅದು ಯಾವಾಗಲೂ ಹಾಗೆಯೇ; ಬೇರೆ ಯಾವನೇ ವ್ಯಕ್ತಿಯು ನಿಮ್ಮನ್ನು ಬಂಧಿಸಲಾರನು, ಆ ಕೆಲಸವನ್ನು ನೀವೇ ಮಾಡಿ ಕೊಳ್ಳುತ್ತೀರಿ. ಭಗವಂತನ ಸರ್ವವ್ಯಾಪಿತ್ವವನ್ನು ಕುರಿತ ನಂಬಿಕೆಯು ಆಳವಾಗಿ ಬೇರುಬಿಟ್ಟಿದ್ದರೆ, ಅವನೇ ನಿಮ್ಮ ಆತ್ಮವಾಗಿದ್ದಾನೆ ಎಂಬ ಅರಿವು ನಿಮಗಿರುತ್ತಿತ್ತು. ನಿಮ್ಮನ್ನು ನೀವು ಪ್ರಾಪಂಚಿಕತೆಗೆ ಬಂಧಿಸಿಕೊಳ್ಳುತ್ತಿರಲಿಲ್ಲ. ಆ ನಂಬಿಕೆಯು ಬೆಳೆಯ ಬೇಕಾದರೆ ಆತ್ಮಾನಂದವನ್ನು ತೀವ್ರವಾಗಿ ಗ್ರಹಿಸಬೇಕು. ಆತ್ಮದ ಸತ್ಯವು ಆಧಾರ ಶಿಲೆ. ಅದು ನಿರ್ವಿವಾದವಾದ ಜ್ಞಾನ, ನಿಶ್ಚಿತ ಜ್ಞಾನವೆನಿಸಿಕೊಳ್ಳುತ್ತದೆ. ಆ ತಳಹದಿಯಿಲ್ಲದೆ ಹೋದರೆ ವ್ಯಕ್ತಿಯು ಸಂದೇಹ, ಹತಾಶೆ ಮತ್ತು ಭ್ರಮೆಗಳಿಗೆ ಗುರಿಯಾಗುತ್ತಾನೆ. ಧರ್ಮ ವಧುವು ಅಂಥವನನ್ನು ವರಿಸಲಾರಳು.

ಆದ್ದರಿಂದ ಮೊದಲು ಸ್ವತಂತ್ರರಾಗಲು ಪ್ರಯತ್ನ ಮಾಡಿ. ಅಂದರೆ, ಯಶಸ್ವೀ ಜೀವನಕ್ಕೆ ಪೀಠಿಕೆಯಾಗಿ, ಆತ್ಮವೇ ನಿಮ್ಮ ವ್ಯಕ್ತಿತ್ವದ ಸಾರ ಎಂಬುದರಲ್ಲಿ ಆಳವಾದ ನಂಬಿಕೆಯನ್ನು ಬೆಳೆಸಿಕೊಂಡು, ಆ ಸಾರಕ್ಕೆ ಇಳಿಯಲು ತಕ್ಕ ಸಾಧನೆಯನ್ನು

ಕಟ್ಟುನಿಟ್ಟಾಗಿ ಆಚರಿಸಿ. ಆ ಅರ್ಹತೆಯನ್ನು ಪಡೆದುಕೊಂಡು ಪ್ರಾಪಂಚಿಕ ಕಾರ್ಯ ಚಟುವಟಿಕೆಗಳಲ್ಲಿ ಪೂರ್ತಿಯಾಗಿ ತೊಡಗಬಹುದು. ಅವುಗಳ ನಿಯಂತ್ರಣಕ್ಕೆ ನಿಗದಿಪಡಸಿರುವ ಧರ್ಮವನ್ನು ಪಾಲಿಸುತ್ತಿರಬೇಕು. ಆಗ ನೀವು ಧರ್ಮ ಪುರುಷ ರಾಗುವಿರಿ. ಭೌತಿಕ ವಸ್ತು ಜಗತ್ತೇ ಜೀವನದ ಸರ್ವಸ್ವ ಎಂದೂ ದೇಹವೇ ಆತ್ಮ ಎಂದೂ ತಿಳಿದುಕೊಳ್ಳುವವರು ವ್ಯರ್ಥವಾದ ಬದುಕನ್ನು ನಡೆಸುತ್ತಾರೆ. ದೇವರನ್ನು ಕಲ್ಲಾಗಿಸುವಷ್ಟೇ ಅರ್ಥರಹಿತವಾದ ಜೀವನ ನಡೆಸುತ್ತಾರೆ. ಶಿಲೆಯನ್ನು ದೇವರನ್ನಾಗಿ ಮಾಡುವುದು ಹೆಚ್ಚು ಪವಿತ್ರವೂ, ಪರಿಪೂರ್ಣವೂ ಆದ ಕೆಲಸ. ಹಾಗೆಯೇ ನಿಮ್ಮ ಪ್ರತಿಯೊಂದು ಸಣ್ಣ ಕೆಲಸದಲ್ಲೂ ಆತ್ಮಧರ್ಮವನ್ನು ನೋಡುವು ದರಿಂದ ಅ ಕೆಲಸವು ಪೂಜೆಯಾಗಿ ಪರಿವರ್ತಿತವಾಗುತ್ತದೆ. ಸತ್ಯ ಧರ್ಮದ ಸಂಬಂಧವಿಲ್ಲದೆ ಆಚಾರ ಧರ್ಮವನ್ನು ಪಾಲಿಸಿದರೆ ಎರಡೂ ನಿಷ್ಫಲವಾಗುತ್ತವೆ. ಅವೆರಡೂ ಪ್ರತ್ಯೇಕಿಸಲಾಗದ ಹಾಗೆ ಪರಸ್ಪರ ಹೆಣೆದುಕೊಂಡಿವೆ ಮತ್ತು ಅವನ್ನು ಹಾಗೆಯೇ ಪರಿಗಣಿಸಬೇಕು. ಹಿರಿಯ ಅಧಿಕಾರಿಗೆ ಕಿರಿಯ ನೌಕರನು ಕೆಲಸ ಮಾಡುವುದು ಹೇಗೆ ಅಗತ್ಯವೋ ಹಾಗೆಯೇ ಕಿರಿಯ ನೌಕರನಿಗೆ ಹಿರಿಯ ಅಧಿಕಾರಿಯ ನೆರವೂ ಅಗತ್ಯ. ಹಾಗಾದರೆ ಬಂಧಿತನು ಯಾರು? ಸ್ವತಂತ್ರನು ಯಾರು? ಇಬ್ಬರೂ ಸುಖ ಸಂತೋಷಗಳಿಂದಿರಬೇಕೆಂಬ ತಮ್ಮ ಬಯಕೆಗೆ ಬದ್ಧರು. ಆತ್ಮದ ಮೂಲಭೂತ ರಹಸ್ಯವನ್ನು ಗುರುತಿಸುವವರೆಗೂ ಬಂಧನದ ಹೊರಗಿನ ಸ್ಥಿತಿಯು ಹಾಗೆಯೇ ಮುಂದುವರಿಯುತ್ತದೆ. ಹಾಗೆ ಗುರುತಿಸಿದಾಗ ಇಂದ್ರಿಯಗಳಿಗೂ ವಸ್ತುಜಗತ್ತಿಗೂ ಗುಲಾಮನಾಗಿರುವ ಭಾರವು ತಗ್ಗುತ್ತದೆ. ಆಗ ಜಗತ್ತಿನೊಂದಿಗೆ ನಡೆದುಕೊಳ್ಳಬೇಕಾದ ರೀತಿಯನ್ನು ಹೇಳುವ ನೀತಿ ಸಂಹಿತೆ ಹಾಗೂ ಅಂತರ್ಯಾಮಿಯಾದ ದೈವತ್ವದೊಂದಿಗೆ ನಡೆದುಕೊಳ್ಳಬೇಕಾದ ಪರಿಯನ್ನು ಹೇಳುವ ನೀತಿ ಸಂಹಿತೆಗಳೆರಡೂ ವಿಲೀನಗೊಳ್ಳುತ್ತವೆ. ಹಾಗಾಗಿ ಪ್ರೇರಣೆಗಳೆಲ್ಲವೂ ಸಮರಸದಿಂದ ಸಹಕರಿಸುತ್ತವೆ.

ವೇದಾಂತ, ಆಧ್ಯಾತ್ಮಿಕ ಶಾಸ್ತ್ರಗಳು, ಧರ್ಮ—ಎಲ್ಲವೂ ಮನುಷ್ಯನನ್ನು ಭಗವಂತ ನಂತೆ ವರ್ತಿಸಿ ಜೀವಿಸಲು ಕರೆ ಕೊಡುತ್ತವೆಯೇ ಹೊರತು ಬಂಧಿತ ಮಾನವ ನಂತಲ್ಲ. ಆಗ ಎಲ್ಲ ಕಾರ್ಯಗಳೂ ಧರ್ಮಕರ್ಮಗಳಾಗುತ್ತವೆ, ಕಾಮ್ಯಕರ್ಮ ಗಳಲ್ಲ (ಫಲಾಪೇಕ್ಷೆಯಿಂದ ಮಾಡಿದ ಕರ್ಮಗಳು). ಕರ್ಮದ ಬಗೆಯನ್ನು ಬದಲಾ ಯಿಸಿದ ಮಾತ್ರಕ್ಕೆ ಬಂಧಿಸುವ ಸಂಕೋಲೆಗಳನ್ನು ತಪ್ಪಿಸಿಕೊಳ್ಳುವುದು ಸಾಧ್ಯವಿಲ್ಲ. ದೃಷ್ಟಿಕೋನವನ್ನು ದೇಹದಿಂದ ದೇವನ ಕಡೆಗೆ, ಸೃಷ್ಟಿಯಿಂದ ಸೃಷ್ಟಿಕರ್ತನ ಕಡೆಗೆ, ಬದಲಾಯಿಸುವುದರಿಂದ ಆ ಸಂಕೋಲೆಗಳನ್ನು ನಿವಾರಿಸಬಹುದು. ಅದರಿಂದ ನೈತಿಕ ಗುಣಗಳೂ ಬಲವತ್ತರವಾಗುತ್ತವೆ. ಕಾರ್ಯನಿರತನಾಗಿರುವುದು ಬಂಧನ,

ನಿರ್ದಿಷ್ಟವಾದ ಕೆಲಸ ಏನೂ ಇಲ್ಲದೆ ಸುಮ್ಮನೆ ಮನೆಯಲ್ಲಿ ಕುಳಿತಿರುವುದು ಬಿಡುಗಡೆ ಎಂದು ಕೆಲವರು ಅಭಿಪ್ರಾಯಪಡುತ್ತಾರೆ! ಇದು ಬುದ್ಧಿ ಹೀನತೆಯ ಕುರುಹು. ಒಂದು ವೃತ್ತಿಯಲ್ಲಿರುವಾಗ ಮೇಲಧಿಕಾರಿಗೆ ವಿಧೇಯನಾಗಿರಬೇಕಾಗುತ್ತದೆ ಸರಿ; ಆದರೆ ಮನೆಯಲ್ಲಿರುವಾಗಲೂ ಬಂಧುಗಳ ಅಗತ್ಯಗಳನ್ನು, ಒತ್ತಡಗಳನ್ನು, ಬಲಾತ್ಕಾರಗಳನ್ನು ಅವನು ತಪ್ಪಿಸಿಕೊಳ್ಳಬಲ್ಲನೇನು? ತನ್ನ ಆಪ್ತ ಗೆಳೆಯರ ನಡುವೆ ಇದ್ದಾಗಲೂ ಅವರ ಅಪೇಕ್ಷೆಗಳಿಗನುಸಾರವಾಗಿ ನಡೆಯದೆ ತಪ್ಪಿಸಿಕೊಳ್ಳಬಲ್ಲನೆ? ಕೊನೆಯ ಪಕ್ಷ ತನ್ನ ದೇಹವನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳುವುದು, ತನ್ನ ಸುಖಕ್ಕಾಗಿ ಪ್ರಯತ್ನಿಸುವುದು ಈ ಅಗತ್ಯಗಳಿಂದ ಅವನಿಗೆ ಬಿಡುವು ದೊರಕುವುದೇನು? ಅಂದ ಮೇಲೆ ಬಂಧನದ ಪಂಜರದಲ್ಲೇ ಇರುತ್ತಾ ಮನುಷ್ಯನು ತಾನು ಸ್ವತಂತ್ರನೆಂದು ಭಾವಿಸುವುದು ಹೇಗೆ ಸಾಧ್ಯ? ಶಿಕ್ಷೆ ಯಾವ ತೆರನಾದದ್ದೇ ಇರಲಿ, ಎಲ್ಲ ಜೀವನವೂ ಒಂದು ಕಾರಾಗೃಹವೇ ಸರಿ. ದೇಹವೇ ಆತ್ಮ ಎಂಬ ಭಾವನೆಯಿರುವವರೆಗೂ ಅದು ಹಾಗೆಯೇ.

ಆದ್ದರಿಂದಲೇ ಒಮ್ಮೆ ಶಂಕರರು, "ನರಕ ಎಂದರೆ ದೇಹವನ್ನು ಆಧರಿಸಿದ ಅಹಂಕಾರ," ಎಂದು ಹೇಳಿದರು. ಈ ಅಹಂಕಾರವು ದೈವ ವಿರೋಧಿ ಭಾವನೆಯ ಇನ್ನೊಂದು ರೂಪ ಅಷ್ಟೆ. ಈ ಭೂಮಿಯ ಮೇಲ್ಮೈಯಲ್ಲಿರುವ ಎಲ್ಲಾ ಮುಳ್ಳುಗಳನ್ನೂ ಕಲ್ಲುಗಳನ್ನೂ ಯಾರು ತಾನೆ ತೆಗೆದುಹಾಕಬಲ್ಲರು? ಅವುಗಳನ್ನು ನಿವಾರಿಸುವ ಒಂದೇ ಒಂದು ದಾರಿ ಪಾದರಕ್ಷೆಗಳನ್ನು ಹಾಕಿಕೊಂಡು ನಡೆದಾಡುವುದು. ಹಾಗೆಯೇ ವೇದಾಂತ ದರ್ಶನದ ವಿಚಾರವೂ. ದೃಷ್ಟಿಯು ಸತ್ಯದ ಮೇಲೆ ನೆಲೆಗೊಂಡಿರುತ್ತಾ ನಿಮ್ಮದೇ ಮೂಲ ಸ್ವರೂಪವಾದ ಬ್ರಹ್ಮವನ್ನು ಕುರಿತು ಪೂರ್ಣ ವಿಶ್ವಾಸವನ್ನು ಹೊಂದಿ, ಸಂತೋಷವನ್ನು ಕುರಿತ ನಿಮ್ಮ ಆದರ್ಶಕ್ಕೆ ತಕ್ಕಂತೆ ಜಗತ್ತನ್ನು ಪರಿವರ್ತಿಸುವ ಅಗತ್ಯವನ್ನು ತಪ್ಪಿಸಿಕೊಳ್ಳಬಲ್ಲಿರಿ ಹಾಗೂ ಸತ್ಯ ಧರ್ಮವನ್ನು ಸಾಧಿಸಬಲ್ಲಿರಿ. ಯಾರು ಅಹಂಕಾರವನ್ನು ತುಳಿದು, ಪೂರ್ಣ ವಿಶ್ವಾಸದಿಂದ, "ನಾನು ಈ ದೇಹದ ಗುಲಾಮನಲ್ಲ. ಎಲ್ಲಾ ಬಗೆಯ ದಾಸ್ಯಗಳಿಗೆ ಆಗರವಾಗಿರುವ ದೇಹದ ದಾಸನಲ್ಲ. ದೇಹವೇ ನನ್ನ ದಾಸ. ನಾನು ಒಡೆಯ; ಎಲ್ಲವನ್ನೂ ರೂಪಿಸುವವನು ನಾನು, ನಾನು ಸ್ವಾತಂತ್ರ್ಯದ ಮೂರ್ತಿ," ಎಂದು ಘೋಷಿಸುವನೋ ಅವನು ಆಗಲೇ ಮುಕ್ತನಾಗಿಬಿಟ್ಟಿರುತ್ತಾನೆ. ಎಲ್ಲಾ ನೀತಿ ಸಂಹಿತೆಗಳು ಈ ಅಹಂಕಾರ ನಾಶನ ಪ್ರಕ್ರಿಯೆಗೆ ಸಹಾಯ ಮಾಡಬೇಕು. ಅದನ್ನು ಪೋಷಿಸಿ ಅದು ಹುಚ್ಚಾಪಟ್ಟೆ ಬೆಳೆಯುವಂತೆ ಮಾಡಬಾರದು. ಅದೇ ಸ್ವಾತಂತ್ರ್ಯಕ್ಕೆ ದಾರಿ. ಒಬ್ಬ ವ್ಯಕ್ತಿಯು ಮಗನ ಜೊತೆಯಲ್ಲಿರುವುದು ತುಂಬ ಕಷ್ಟವೆನಿಸಿ ಮಗಳ ಮನೆಗೆ ಹೋಗಿ ಅಲ್ಲಿ ವಾಸಮಾಡತೊಡಗಿದರೆ ಅದು ಸ್ವಾತಂತ್ರ್ಯವನ್ನು ಗಳಿಸಿದ ಹಾಗಲ್ಲ! ಅದು ಒಂದು

ರೀತಿಯಲ್ಲಿ ಅಹಂಕಾರವನ್ನೇ ಪೋಷಿಸಿದ ಹಾಗೆ. ಹೀಗೆ ಇಂದ್ರಿಯ ಸುಖದ ಅನ್ವೇಷಣೆಯನ್ನು ಧರ್ಮದ ಮಟ್ಟಕ್ಕೆ ಏರಿಸಲು ಸಾಧ್ಯವಿಲ್ಲ.

ಹೆಚ್ಚೆಂದರೆ ಮನೆಯೊಂದಿರುವುದು ಯಾಕಾಗಿ? ಭಗವಂತನನ್ನು ಧ್ಯಾನಿಸುವುದ ರಿಂದ ಬರುವ ಆನಂದವನ್ನು ಸವಿಯುವುದಕ್ಕಾಗಿ, ಭಗವದ್ಧ್ಯಾನವನ್ನು ಯಾವುದೇ ಅಡ್ಡಿಯಿಲ್ಲದೆ ನಡೆಸುವ ಅವಕಾಶವನ್ನು ಪಡೆಯುವುದಕ್ಕಾಗಿ. ಮಿಕ್ಕೆಲ್ಲ ಅಂಶ ಗಳನ್ನೂ ಅಲಕ್ಷಿಸಬಹುದು, ಇವುಗಳನ್ನಲ್ಲ. ವ್ಯಕ್ತಿಯ ನಿಜವಾದ ಧರ್ಮವು ಪರವಸ್ತುವಿನೊಂದೊಗೆ ವಿಲೀನಗೊಳ್ಳುವ ಆನಂದವನ್ನು ಸವಿಯುವುದು, ಆ ಮೂಲಕ ನಿಜವಾದ ಮುಕ್ತಿಯನ್ನು ಪಡೆಯುವುದು. ಆ ಹಂತವನ್ನು ತಲುಪಿರುವ ಮನುಷ್ಯನು ಎಂದಿಗೂ ಬಂಧಿತನಾಗುವುದಿಲ್ಲ. ಅತ್ಯಂತ ಕಠೋರವಾದ ಕಾರಾ ಗೃಹಕ್ಕೆ ಹಾಕಿದರೂ ಸರಿಯೆ. ಆದರೆ, ದೇಹದ ಗುಲಾಮನಾಗಿರುವ ವ್ಯಕ್ತಿಗೆ ಒಂದು ಹುಲ್ಲು ಕಡ್ಡಿಯೂ ಮೃತ್ಯು ಕಾರಣವಾಗಬಹುದು. ನಿಜವಾದ ಧರ್ಮವೆಂದರೆ, ಆತ್ಮಾನಂದದಲ್ಲಿ ಮುಳುಗುವುದು; ಅಂತರ್ದರ್ಶನ; ತನಗೂ ಪರವಸ್ತುವಿಗೂ ಇರುವ ನಿಜವಾದ ಸಂಬಂಧದಲ್ಲಿ ಸ್ಥಿರವಾದ ವಿಶ್ವಾಸ ಹಾಗೂ ಸಮಸ್ತವೂ ಬ್ರಹ್ಮವೇ ಎಂಬ ಅರಿವು. ಈ ನಾಲ್ಕೂ ನಿಜವಾದ ಪ್ರಮಾಣಯುತವಾದ ಧರ್ಮ. ಈ ಭೌತಿಕ ಜಗತ್ತಿನಲ್ಲಿ ಆಚರಣೆಗೆ ಅನುಕೂಲವಾಗುವ ಸಲುವಾಗಿ (ಆದರೂ ಆತ್ಮ ಸತ್ಯದ ಆಂತರಿಕ ಧರ್ಮದಲ್ಲಿ ಪರ್ಯಾಪ್ತವಾಗಿರುವಂತೆ) ನಾಲ್ಕು ಹೆಸರನ್ನು ಕೊಡಲಾಗಿದೆ. ಅವೇ ಸತ್ಯ, ಶಾಂತಿ, ಪ್ರೇಮ ಮತ್ತು ಅಹಿಂಸೆ. ನಿರ್ದಿಷ್ಟತೆಯನ್ನುಳ್ಳ ಆ ಪರ ವಸ್ತುವಿನ ಸಾಕಾರ ರೂಪಗಳೇ ಆದ ವ್ಯಕ್ತಿಗಳು ಅವುಗಳನ್ನು ದಿನಜೀವನದಲ್ಲಿ ಅನುಸರಿಸಲು ಅದರಿಂದ ಸಹಾಯವಾಗುತ್ತದೆ. ಈಗ ಧರ್ಮಾನುಸರಣೆಯ ವಿಧಾನವು ಹಿಂದೆ ಇದ್ದಂತೆಯೇ ಪ್ರತಿಯೊಂದು ಕಾರ್ಯದಲ್ಲೂ ಪ್ರತಿ ಆಲೋಚನೆ ಯಲ್ಲೂ ಈ ಉನ್ನತ ತತ್ತ್ವಗಳಿಗೆ ಬದ್ಧನಾಗಿರುವುದೇ ಆಗಿದೆ. ಸತ್ಯ, ಶಾಂತಿ, ಅಹಿಂಸೆ ಮತ್ತು ಪ್ರೇಮಗಳು ಆತ್ಮದಲ್ಲಿ ಸತತವಾಗಿ ವಿಲೀನಗೊಂಡಿರುವುದು, ಅಂತಸ್ಸತ್ಯದ ಮೇಲೆ ದೃಷ್ಟಿಯನ್ನು ನೆಟ್ಟಿರುವುದು, ತನ್ನ ನಿಜವಾದ ಸ್ವರೂಪವನ್ನು ಕುರಿತು ಮನನ ಮಾಡುವುದು ಹಾಗೂ ಸಮಸ್ತವೂ ಏಕೈಕನಾದ ಬ್ರಹ್ಮವೆಂಬ ತಿಳಿವಳಿಕೆ ಈ ಮೂಲಭೂತವೂ ವ್ಯುತ್ಪನ್ನವೂ ಆದ ತತ್ತ್ವಗಳನ್ನು ಸಂಯೋಜಿಸಿ ಸಮರಸಗೊಳಿಸಬೇಕು. ಆಗಲೀಗ ಅದನ್ನು ಆತ್ಮಧರ್ಮ ಎಂದು ಕರೆಯಬಹುದು.

ನಿಮ್ಮ ಕೆಲಸ ಯಾವುದೆನ್ನುವುದು ಮುಖ್ಯವಲ್ಲ ಅಥವಾ ನೀವು ಯಾವ ನಾಮ ವನ್ನು, ರೂಪವನ್ನು ಆಯ್ಕೆ ಮಾಡಿಕೊಂಡಿದ್ದೀರಿ ಎನ್ನುವುದೂ ಮುಖ್ಯವಲ್ಲ. ಲೋಹ ಯಾವುದೇ ಇರಲಿ, ಬಂಧಿಸುವ ಸರಪಣಿ ಸರಪಣಿಯೇ ತಾನೆ. ಅದು ಕಬ್ಬಿಣದ್ದಾದರೇನು, ಚಿನ್ನದ್ದಾದರೇನು ಅಲ್ಲವೆ? ಹಾಗೆಯೇ ಈ ಬಗೆಯ ಕೆಲಸವೆ,

ಆ ಬಗೆಯದೇ ಎಂಬ ವಿವಕ್ಷೆ, ಆತ್ಮ ಧರ್ಮವು ಆಧಾರವಾಗಿರುವವರೆಗೆ, ಆತ್ಮ ತತ್ತ್ವವು ಬೇರಾಗಿರುವವರೆಗೆ ಮುಖ್ಯವಲ್ಲ. ಅದೇ ನಿಸ್ಸಂದೇಹವಾಗಿ ಧರ್ಮ. ಅಂತಹ ಕೆಲಸವು ಶಾಂತಿಯ ಫಲವನ್ನು ಅನುಗ್ರಹಿಸುತ್ತದೆ. ಅಹಂಕಾರಯುತ ಭೀತಿಯ ಅಥವಾ ಲೋಭದ ಅಲೆಗಳು ವ್ಯಕ್ತಿಯನ್ನು ಮನೆಯ ಏಕಾಂತತೆಗೋ ಅರಣ್ಯದ ಒಂಟಿತನಕ್ಕೋ ಬೇರೆ ಯಾವುದೇ ಆಶ್ರಯಕ್ಕೋ ನೂಕಿದಾಗ ಯಾತನೆ ಯಿಂದ ತಪ್ಪಿಸಿಕೊಳ್ಳುವುದು ಅಸಾಧ್ಯ. ಸರ್ಪವು ಸುರುಳಿಸುತ್ತಿಕೊಂಡು ಮಲಗಿದ ಮಾತ್ರಕ್ಕೆ ಸರ್ಪವಾಗದೆ ಹೋಗುತ್ತದೆಯೆ? ಆಗಲು ಅದು ಸರ್ಪವೇ. ದೈನಂದಿನ ಜೀವನದಲ್ಲಿ ಕಾರ್ಯಗಳು ಮೂಲಭೂತ ಆತ್ಮಸತ್ಯದಿಂದ ಪ್ರೇರಿತವಾದಾಗ ಅಂಥ ಒಂದೊಂದು ಕೆಲಸಕ್ಕೂ ಧರ್ಮದ ಮುದ್ರೆ ಬೀಳುತ್ತದೆ. ಆದರೆ ಅವೇ ಕಾರ್ಯಗಳು ತನ್ನ ಅನುಕೂಲ, ಸ್ವಾರ್ಥಾಸಕ್ತಿಗಳಿಂದ ಪ್ರೇರಿತವಾದಾಗ ಅದು ನಕಲಿ ಧರ್ಮ ವಾಗುತ್ತದೆ. ಎಷ್ಟೇ ಆಕರ್ಷಕವಾಗಿದ್ದರೂ ಅದೂ ಒಂದು ಬಗೆಯ ಬಂಧನವೇ. ಕಾರಾಗೃಹದಲ್ಲಿ ವಾರ್ಡರುಗಳು ಖೈದಿಗಳನ್ನು ವಿಚಾರಣೆಗೋ ಊಟಕ್ಕೋ ಒಬ್ಬರ ಹಿಂದೊಬ್ಬರಂತೆ ಸಾಲಾಗಿ ಮುಂದಕ್ಕೆ ತಳ್ಳುವ ಹಾಗೆ, ಇಂದ್ರಿಯ ಪ್ರೇರಣೆಗಳು ಬಂಧಿತನನ್ನು ದುಃಖದ ನೆಲೆಗೆ ಅಥವಾ ಸಮಾಧಾನದ ನೆಲೆಗೆ ತಳ್ಳುತ್ತವೆ.

ಅಷ್ಟೇಕೆ, "ಅವನೊಬ್ಬ ಸ್ನೇಹಿತ," ಅಥವಾ, "ಇವನೊಬ್ಬ ಶತ್ರು," ಎಂಬಂತಹ ಭಾವನೆಯೂ ಒಂದು ದೋಷವೇ. ಈ ಭ್ರಮೆಯನ್ನು ಹೋಗಲಾಡಿಸಿಕೊಳ್ಳಬೇಕು. ಪ್ರೇಮ ಮೂರ್ತಿಯಾದ ಭಗವಂತನೊಬ್ಬನೇ ನಿರಂತರ ಮಿತ್ರ, ಬಂಧು, ಸಂಗಾತಿ, ಮಾರ್ಗದರ್ಶಕ ಮತ್ತು ರಕ್ಷಕ. ಇದನ್ನು ತಿಳಿದುಕೊಂಡು ಈ ಅರಿವಿನಲ್ಲೇ ಬದುಕಿರಿ. ಇದು ಅರಿವಿನ ಆಧಾರ ಶಿಲೆಯ ಮೇಲೆ ಕಟ್ಟಿದ ಧರ್ಮ, ಧರ್ಮದ ಆಧಾರ ಶಿಲೆಯ ಮೇಲೆ ಕಟ್ಟಿದ ಬಾಳುವೆ. ಈ ಮೂಲಭೂತ ಆಧಾರವನ್ನು ಅಲಕ್ಷಿಸಿ, ಹೊರಗಿನ ಥಳುಕಿನ ಮೇಲೆ ಗಮನವನ್ನು ಕೇಂದ್ರೀಕರಿಸಿದರೆ ಗುರಿಯು ಎಟುಕದಷ್ಟು ದೂರಕ್ಕೆ ಹೋಗಿಬಿಡುತ್ತದೆ. ಪ್ರಪಂಚದ ಮೋಹವನ್ನು ಬೆಳೆಸಿಕೊಳ್ಳುವುದರಿಂದ ಮಾತ್ರ ಸಾಧ್ಯ. ಉದ್ದಕ್ಕೂ ಆಕಾಶಕ್ಕೆ ದೃಷ್ಟಿಯನ್ನು ಕೀಲಿಸಲು ಪ್ರಯತ್ನ ಮಾಡುತ್ತಿದ್ದು, ನೆಲವು ಕಾಣಿಸುತ್ತಿಲ್ಲವೆಂದು ದೂರುವುದೇಕೆ? ನೆಲವನ್ನು ನೋಡಿ, ಆಕಾಶವನ್ನು ಪ್ರತಿಬಿಂಬಿಸುವ ನೀರಿನ ಹರಹನ್ನು ನಿಟ್ಟಿಸಿರಿ. ಆಗ ಏಕ ಕಾಲದಲ್ಲಿ ನೀವು ಮೇಲಿನ ಆಕಾಶವನ್ನೂ, ಕೆಳಗಿನ ಭೂಮಿಯನ್ನೂ ನೋಡುತ್ತಿರುತ್ತೀರಿ. ಹಾಗೆಯೇ (ಅಂತರ್ಗತ ಆತ್ಮತತ್ತ್ವದ) ಸತ್ಯ ಧರ್ಮಕ್ಕೆ ಬದ್ಧನಾಗಿರಬೇಕಾದರೆ, ಪ್ರತಿಯೊಂದು ಕ್ರಿಯೆಯಲ್ಲೂ ಆತ್ಮದ ವೈಭವದ ಪ್ರತಿಬಿಂಬವನ್ನು ನೋಡಬೇಕು; ಆಗ ಭಗವಂತ ನನ್ನು ಕುರಿತ ಮೋಹವು ಪ್ರಪಂಚವನ್ನು ಕುರಿತ ಮೋಹವನ್ನು ಒಂದು ಪವಿತ್ರ ಅರ್ಪಣೆಯನ್ನಾಗಿ ಪರಿವರ್ತಿಸುತ್ತದೆ. ಅಂದರೆ, ಮೂಲ ಅಂಶಗಳನ್ನು ಹಾಗೆಯೇ

ಜೋಪಾನವಾಗಿ ಕಾದಿರಿಸಬೇಕು. ಧರ್ಮವು ವಿವಿಧ ನಾಮ ರೂಪಗಳನ್ನು ಅವಲಂಬಿಸುವುದಿಲ್ಲ. ಅವು ಆಧಾರಭೂತವಾದುವಲ್ಲ. ಧರ್ಮವು ಅದನ್ನು ನಿರ್ದೇಶಿಸುವ ಹಾಗೂ ಸರಿಯಾಗಿ ಹರಿಯಿಸುವ ಪ್ರೇರಣೆಗಳು ಮತ್ತು ಭಾವನೆಗಳನ್ನು ಬಹುವಾಗಿ ಅವಲಂಬಿಸುತ್ತದೆ.

ಅಧ್ಯಾಯ ೩

# ಮೂಲ ದೋಷ

ಮೂಲಭೂತವಾದ ಅಜ್ಞಾನವು ಉಳಿದುಕೊಂಡಿರುವವರೆಗೂ ವ್ಯಕ್ತಿಯು ಅಶಾಂತಿಯಿಂದ ತಪ್ಪಿಸಿಕೊಳ್ಳುವುದು ಸಾಧ್ಯವಿಲ್ಲ. ಹೆಚ್ಚಿನ ಸುಖದ ಬಯಕೆಯಿಂದಲೂ ಚಂಚಲವಾದ ಆಸೆಗಳನ್ನು ತೃಪ್ತಿಪಡಿಸಲೆಂದೋ ವೃತ್ತಿಯನ್ನು ಬದಲಾಯಿಸಿಕೊಂಡ ಮಾತ್ರಕ್ಕೆ ಶಾಶ್ವತವಾದ ತೃಪ್ತಿಯು ದೊರಕುವುದಿಲ್ಲ. ಅದು ಕತ್ತಲ ಕೋಣೆಯಲ್ಲಿ ಪೀಠೋಪಕರಣಗಳನ್ನು ಅತ್ತಿತ್ತ ಸರಿಸಿ ಬದಲಾಯಿಸುವುದರಿಂದ ಪರಿಸ್ಥಿತಿಯನ್ನು ಉತ್ತಮಗೊಳಿಸಲು ಆಶಿಸಿದಂತಾಗುತ್ತದೆ ಅಷ್ಟೆ. ಅದಕ್ಕೆ ಬದಲು ಅಲ್ಲಿ ಒಂದು ದೀಪವನ್ನು ಹಚ್ಚಿಟ್ಟರೆ, ಆ ಬದಲಾವಣೆಗಳಿಲ್ಲದೆಯೂ ಕೊಠಡಿಯಿಂದ ಹೊರಗೆ ಹೋಗುವುದು ಸುಲಭವಾಗುತ್ತದೆ, ಆ ವಸ್ತುಗಳನ್ನು ಮುಟ್ಟಬೇಕಾಗಿಯೇ ಇಲ್ಲ.

ಹಾಗೆಯೇ ಕತ್ತಲಿಡಿದ ಈ ಜಗತ್ತಿನಲ್ಲಿ ಸತ್ಯದಿಂದ, ಪ್ರಾಮಾಣಿಕವಾಗಿ, ಶಾಂತಿಯುತವಾಗಿ, ಯಾವುದೇ ತಡೆಗೆ ಡಿಕ್ಕಿ ಹೊಡೆಯದೆ ಓಡಾಡುವುದು ಬಹು ಕಠಿಣ. ಹಾಗಾದರೆ ದಾರಿಯೇನು? ದೀಪವನ್ನು ಹಚ್ಚಿರಿ! ಅದು ಸತ್ಯವನ್ನು ತೋರಿಸಲಿ; ಜ್ಞಾನವೆಂಬ ಬೆಳಕನ್ನು ಪಡೆದುಕೊಳ್ಳಿ. ಎಲ್ಲಾ ಕಷ್ಟಗಳನ್ನು ಅದು ಪರಿಹರಿಸುತ್ತದೆ. ನೀವು ಧರ್ಮದ ಪ್ರಕಾರವೇ ನಡೆಯುತ್ತಿರುವುದಾಗಿ ಹೇಳಿಕೊಳ್ಳಬಹುದು. ಆದರೆ ನಿಮ್ಮ ಮೂಲಭೂತ ದೋಷವಿರುವುದು ನೀವು ಸಮರ್ಪಣ ಭಾವದಿಂದ ಕೆಲಸಗಳನ್ನು ಮಾಡದಿರುವುದರಲ್ಲಿ. ಹಾಗೆ ಮಾಡಿದಾಗ ಅದಕ್ಕೆ ಧರ್ಮದ ಅಧಿಕೃತ ಮುದ್ರೆಯು ಬೀಳುತ್ತದೆ. ಅತಿ ಬುದ್ಧಿಯ ಕೆಲವರು ಹೀಗೆ ಕೇಳಬಹುದು: “ನಾವು ಭಗವಂತನ ಹೆಸರಿನಲ್ಲಿ ಕೊಲೆ ಮಾಡಿ, ಗಾಯಗೊಳಿಸಿ, ಆ ಕೆಲಸವನ್ನು ಭಗವಂತನಿಗೆ ಸಮರ್ಪಿಸಬಹುದೇ?” ಮಾತು, ಮನಸ್ಸು, ಕೃತಿಗಳಲ್ಲಿ ಪರಿಶುದ್ಧನಾಗಿರದೆ ತನ್ನ ಕಾರ್ಯಗಳೆಲ್ಲವೂ ಭಗವಂತನಿಗೆ ಸಮರ್ಪಣೆ ಮಾಡುವ ಪ್ರವೃತ್ತಿಯಾದರೂ ಹೇಗೆ ಬರುತ್ತದೆ? ಪ್ರೇಮ, ಸಮಚಿತ್ತ, ಸಹನೆ, ಅಹಿಂಸೆ–ಇವು ಭಗವಂತನ ಸೇವಕನಿಗಿರಬೇಕಾದ ಸದ್ಗುಣಗಳು. ಈ ಗುಣಗಳೊಂದಿಗೆ ಕ್ರೌರ್ಯ ಮತ್ತು ಔದ್ಧತ್ಯಗಳು ಇರುವುದಾದರೂ ಹೇಗೆ ಸಾಧ್ಯ? ಸ್ವಾರ್ಥರಾಹಿತ್ಯ, ತ್ಯಾಗ ಮನೋಭಾವ, ಸಮರ್ಪಣ ಭಾವಕ್ಕೆ ಅಗತ್ಯವಾದ ಆಧ್ಯಾತ್ಮಿಕ ಒಲವು ಇವು ಇರಬೇಕಾದರೆ ಮೊದಲು ವ್ಯಕ್ತಿಯು ಈ ನಾಲ್ಕು ಗುಣಗಳನ್ನು ಹೊಂದಿರಬೇಕು—

ಸತ್ಯ, ಶಾಂತಿ, ಪ್ರೇಮ ಮತ್ತು ಅಹಿಂಸೆ. ಇವು ಇಲ್ಲದೆ ಬಾಯಲ್ಲಿ ಹೇಳಿದ ಮಾತ್ರಕ್ಕೆ ಒಂದು ಕೆಲಸವು ಭಗವಂತನಿಗೆ ಮಾಡಿದ ಸಮರ್ಪಣೆಯಾಗುವುದಿಲ್ಲ.

ಧರ್ಮದ ಅಭಿವ್ಯಕ್ತಿಗಳಾದ ಕಾರ್ಯಗಳಿಗೆ ಸಾವಿಲ್ಲ. ಅವು ಎಂದಿಗೂ ಸಾಯುವುದಿಲ್ಲ ಎಂದು ತಿಳಿದುಕೊಂಡಿರುವವರು ಮಾತ್ರವೇ ಅವುಗಳನ್ನು ಮಾಡಬಲ್ಲರು. ಅದು ಮಾನವನ ಅತ್ಯುನ್ನತವಾದ ನೆಲೆ. ಅದನ್ನು ತಲುಪದೆ ಇದ್ದರೆ ಅವನು ಸುಮ್ಮನೆ ಧರ್ಮಕ್ಕೆ ವಿರುದ್ಧವಾಗಿ ಕೆಲಸ ಮಾಡುತ್ತಿರುತ್ತಾನೆ. ಇಂದು ಮನುಷ್ಯನು ಎಲ್ಲೆಲ್ಲೂ ಅಮೃತ ಶಿಶುವಿನ ನೆಲೆಯಿಂದ ವ್ಯರ್ಥತೆಯ ಶಿಶುವಿನ ನೆಲೆಗೆ ತನ್ನನ್ನು ಕೆಳಗೆಳೆದುಕೊಳ್ಳುತ್ತಿದ್ದಾನೆ. ಅಮೃತ ಪುತ್ರನಾಗದೆ ಅನೃತ ಪುತ್ರನಾಗುತ್ತಿದ್ದಾನೆ! ಅಮೃತವನ್ನು ಕೈಯಲ್ಲೇ ಇಟ್ಟುಕೊಂಡು ಇಂದ್ರಿಯ ಭೋಗಗಳೆಂಬ ವಿಷವನ್ನು ಕುಡಿಯುತ್ತಿದ್ದಾನೆ. ವಿಶ್ವದ ಮೂಲಭೂತ ಆತ್ಮಸತ್ಯವನ್ನು ಕುರಿತ ಧ್ಯಾನವನ್ನು ಅಲಕ್ಷಿಸಿ ಈ ವಸ್ತು ಜಗತ್ತಿನ ಹೊರ ತೋರಿಕೆಗಳ ಥಳುಕಿನಲ್ಲಿ ತೊಡರಿಕೊಳ್ಳುತ್ತಿದ್ದಾನೆ. ಮನುಷ್ಯನಿಗೆ ಈ ಗತಿ ಬಂದಿರುವುದಕ್ಕೆ ವಿಷಾದಪಡಬೇಕು. ಗೀತೆಯಲ್ಲೂ ಹೀಗೆ ಹೇಳಿದೆ:

> ಬ್ರಹ್ಮಣೋ ಹಿ ಪ್ರತಿಷ್ಠಾಹಮಮೃತಸ್ಯಾವ್ಯಯಸ್ಯ ಚ ।
> ಶಾಶ್ವತಸ್ಯ ಚ ಧರ್ಮಸ್ಯ ಸುಖಸ್ಯೈಕಾಂತಿಕಸ್ಯ ಚ ॥
>
> ನಾನು ಬ್ರಹ್ಮಾನಂದವಾಗಿದ್ದೇನೆ. ಇಚ್ಛಾತ್ಮಕ ಅಮೃತತ್ತ್ವವಾಗಿದ್ದೇನೆ. ನಾನೇ ಕಾಲರಹಿತ ಧರ್ಮ, ಶಾಶ್ವತ ಆನಂದ.

ಉಪನಿಷತ್ತುಗಳಲ್ಲಿ ವರ್ಣಿಸಿರುವುದು ಈ ಅಮೃತ ಧರ್ಮವನ್ನು. ಗೀತೆಯು ಉಪನಿಷತ್ತುಗಳ ಸಾರವಾಗಿರುವುದರಿಂದ ಅದನ್ನೇ ಗೀತೆಯಲ್ಲೂ ಒತ್ತಿ ಹೇಳಿದೆ. ಧರ್ಮಯುತ ಜೀವನವು ಉಸಿರಾಟವಿದ್ದ ಹಾಗೆ. ಅದು ಆತ್ಮಸಾಕ್ಷಾತ್ಕಾರಕ್ಕೆ ದಾರಿ. ಆ ದಾರಿಯಲ್ಲಿ ನಡೆಯುವವರು ಭಗವಂತನಿಗೆ ಪ್ರಿಯರಾಗುತ್ತಾರೆ. ಯಾರು ಸತ್ಯವಂತರಾಗಿರುತ್ತಾರೋ ಯಾರ ಕಾರ್ಯಗಳು ಧರ್ಮಯುತವಾಗಿರುತ್ತವೆಯೋ ಅವರೊಂದಿಗೆ ಭಗವಂತನು ನೆಲೆಸಿರುತ್ತಾನೆ. ಆದ್ದರಿಂದಲೇ ಗೀತೆಯು ಅರ್ಜುನನಿಗೆ ಆತ್ಮಧರ್ಮಾಚರಣೆಗೆ ಸಹಾಯಕವಾಗುವ ಕೆಲವು ಗುಣಗಳನ್ನು ಬೆಳೆಸಿಕೊಳ್ಳುವಂತೆ ಬೋಧಿಸುತ್ತದೆ. ಇವು ಹನ್ನೆರಡನೆಯ ಅಧ್ಯಾಯದ ೧೩ರಿಂದ ೧೯ನೆಯ ಶ್ಲೋಕದವರೆಗೆ ನಿರೂಪಿತವಾಗಿವೆ. ಗೀತೆಯ ಸರೋವರದಲ್ಲಿ ಆಳವಾಗಿ ಮುಳುಗಿ

ಅದರ ದಿವ್ಯ ಜಲವನ್ನು ಪಾನ ಮಾಡಿರುವವರು ಇವುಗಳನ್ನು ನೆನೆಯಬಹುದು. ಈ ಸಂದರ್ಭದಲ್ಲಿ ಅತ್ಯಂತ ಮುಖ್ಯವಾದ ಶ್ಲೋಕವಿದು:

ಯೇ ತು ಧರ್ಮ್ಯಾಮೃತಮಿದಂ ಯಥೋಕ್ತಂ ಪರ್ಯುಪಾಸತೇ ।
ಶ್ರದ್ಧಧಾನಾ ಮತ್ಪರಮಾ ಭಕ್ತಾಸ್ತೇಽತೀವ ಮೇ ಪ್ರಿಯಾಃ ॥

ಈ ಶ್ಲೋಕದಲ್ಲಿ ಎಂತಹ ಭವ್ಯವಾದ ವಿಚಾರವಿದೆ! ವ್ಯಕ್ತಿಯು ಬೆಳೆಸಿಕೊಳ್ಳಬೇಕಾದ ಗುಣಗಳನ್ನು ಹೇಳುವ ಶ್ಲೋಕಗಳ ಸರಣಿಯಲ್ಲಿ ಇದು ಕೊನೆಯದು. ಅವಷ್ಟನ್ನೂ ಇದು ಧರ್ಮ್ಯಾಮೃತ, ಅಮೃತತ್ತ್ವಕ್ಕೆ ಒಯ್ಯುವ ಧಾರ್ಮಿಕ ಪಥ ಎಂದು ಕರೆಯುತ್ತದೆ! ಈ ಗುಣಗಳುಳ್ಳವರು ಏಕೈಕ ಅಂತಿಮ ಲಕ್ಷ್ಯವೆಂದು ಭಗವಂತನಲ್ಲಿ ಪೂರ್ಣ ವಿಶ್ವಾಸವಿಡುವವರು, ಏಕಾಗ್ರಚಿತ್ತದಿಂದ ಅವನಲ್ಲೇ ಆಸಕ್ತರಾದವರು, ತನಗೆ ಅತ್ಯಂತ ಸಮೀಪದವರೂ ಅತ್ಯಂತ ಪ್ರಿಯರೂ ಆಗುತ್ತಾರೆ ಎಂದು ಭಗವಂತನು ಇಲ್ಲಿ ಘೋಷಿಸುತ್ತಾನೆ.

ಇಲ್ಲಿ ಬಳಸಿರುವ ಧರ್ಮ್ಯಾಮೃತಂ ಎಂಬ ಉಕ್ತಿಯನ್ನು ಗಮನಿಸಿ, ಅದನ್ನು ಕುರಿತು ಸ್ವಲ್ಪ ಆಲೋಚನೆ ಮಾಡಿ, ಅದರಿಂದ ಸ್ಫೂರ್ತಿಯನ್ನು ಪಡೆಯಿರಿ. ಭಗವದ್ಧರ್ಮಕ್ಕೆ ಯಾರು ಬದ್ಧರಾಗಿರುತ್ತಾರೆಯೋ ಅವರು ಮಾತ್ರ ಭಗವಂತನ ಕೃಪೆಗೆ ಪಾತ್ರರಾಗಲು ಅರ್ಹರು. ಸಾಮಾನ್ಯ ಜನರು ತಮಗೆ ದೇವರ ಮೇಲೆ ಭಕ್ತಿಯಿದೆ ಎಂದು ನಂಬಿಕೊಳ್ಳುತ್ತಾರೆ. ಆದರೆ, ದೇವರು ಇವರ ಬಗೆಗೆ ಪ್ರೇಮವನ್ನು ಹೊಂದಿದ್ದಾನೆಯೆ ಇಲ್ಲವೆ ಎಂದು ವಿಚಾರ ಮಾಡುವುದಿಲ್ಲ. ಇದನ್ನು ಕಂಡುಹಿಡಿಯಲು ಹಂಬಲವನ್ನು ವ್ಯಕ್ತಪಡಿಸುವವರು ಬಹು ವಿರಳ. ಅದೇ ನಿಜವಾಗಿ ಆಧ್ಯಾತ್ಮಿಕ ಯಶಸ್ಸಿನ ನಿಜವಾದ ಮಾನಕ. ಒಬ್ಬನೇ ವ್ಯಕ್ತಿಯು ತನ್ನ ಪ್ರಜೆಗಳಿಗೆ ಅರಸನೂ ತಂದೆತಾಯಿಯರಿಗೆ ಮಗನೂ ವೈರಿಗಳಿಗೆ ಶತ್ರುವೂ ತನ್ನ ಪತ್ನಿಗೆ ಪತಿಯೂ ತನ್ನ ಮಗನಿಗೆ ತಂದೆಯೂ ಆಗಿರುತ್ತಾನೆ. ಅವನು ಅನೇಕ ಪಾತ್ರಗಳನ್ನು ನಿರ್ವಹಿಸುತ್ತಾನೆ. ಆದರೂ ನೀನು ಯಾರು ಎಂದು ಕೇಳಿದಾಗ ಈ ಯಾವುದಾದರೂ ಒಂದು ಸಂಬಂಧವನ್ನು ಅವನು ಹೇಳಿದರೆ ಅದು ತಪ್ಪಾಗುತ್ತದೆ. ಏಕೆಂದರೆ ಅವೆಲ್ಲ ದೈಹಿಕ ಸಂಬಂಧ ಅಥವಾ ಕರ್ಮಗಳನ್ನು ಕುರಿತ ಕುರುಹುಗಳು. ದೈಹಿಕ ಬಾಂಧವ್ಯಗಳನ್ನೊ, ವೃತ್ತಿ ಸಂಬಂಧವಾದ ನಂಟುಗಳನ್ನೊ ಸೂಚಿಸುವ ಉಕ್ತಿಗಳು, ತಾತ್ಕಾಲಿಕ ಸ್ಥಿತಿಗೆ ಕೊಟ್ಟ ಹೆಸರುಗಳು. ಅಥವಾ ತಾನು ತಲೆ, ಕಾಲುಗಳು, ಕೈಗಳು ಎಂದೂ ಉತ್ತರ ಕೊಡುವಂತೆಯೂ ಇಲ್ಲ. ಅವೆಲ್ಲ ದೈಹಿಕವಾದ ಅಂಗಾಂಗಗಳು. ಅವನು ಎಲ್ಲಾ ಅಂಗಾಂಗಗಳಿಗಿಂತಲೂ ಹೆಚ್ಚು ಸತ್ಯ, ಮೂಲ ಬ್ರಹ್ಮವನ್ನು ಮರೆ

ಮಾಡಿರುವ ಎಲ್ಲಾ ಮಿಥ್ಯೆಗಳಾದ ನಾಮರೂಪಗಳಿಗೆ ಅತೀತನಾದವನು; ಅವನು ನಾನು ಎಂದು ಪ್ರಸಿದ್ಧನು. ಈ ವಸ್ತುವನ್ನು ಕುರಿತು ಚಿಂತನೆ ಮಾಡಿ, ನಿಜವಾಗಿ ನಾನು ಎನ್ನುವುದು ಯಾರು ಎಂದು ಕಂಡುಹಿಡಿಯಿರಿ.

ನಿಮ್ಮ ಅಸ್ತಿತ್ವವನ್ನು ವಿಶ್ಲೇಷಿಸಿ ಅರ್ಥ ಮಾಡಿಕೊಳ್ಳುವುದೇ ಇಷ್ಟು ಕಷ್ಟವಾಗಿರುವಾಗ, ಇತರರನ್ನು ಕುರಿತು ಖಚಿತತೆಯಿಂದ ಹೇಗೆ ನಿರ್ಣಯವನ್ನು ಹೇಳಬಲ್ಲಿರಿ? ನೀವು ನಾನು ಎಂದೋ ನೀನು ಎಂದೋ ಹೇಳುವುದು ದೇಹಕ್ಕೆ, ತೋರಿಕೆಗೆ ಸಂಬಂಧಿಸುತ್ತದೆ; ಅವು ಸತ್ ಅಲ್ಲ. ಆತ್ಮವು ಏಕ ಮತ್ತು ಅಖಂಡ; ಅದನ್ನು ಆಧರಿಸುವುದೇ ನಿಜವಾದ ಧರ್ಮ.

ಕೆಲವರು ಕೇಳುತ್ತಾರೆ: "ನೀವು ಆತ್ಮ, ಆತ್ಮ ಎಂದು ಹೇಳುತ್ತಲೇ ಇದ್ದೀರಿ. ಈ ಆತ್ಮದ ರೂಪ ಅಥವಾ ಆಕಾರ ಏನು?" ಅದು ನಿತ್ಯ, ಪರಿವರ್ತನರಹಿತ, ಅಮರ. ಅದು ಒಳಿತು, ನ್ಯಾಯ, ಉದಾರ. ಅದು ಅಖಂಡ ಅಕಿಲ್ಬಿಷ. ಯಾವುದೇ ನಿರ್ದಿಷ್ಟ ನಾಮ ಅಥವಾ ರೂಪದಿಂದ ಅದನ್ನು ಮಿತಿಗೊಳಿಸಲು ಸಾಧ್ಯವಿಲ್ಲ. ಅಂತರಂಗದಲ್ಲಿ ಉದಿಸುವ ಜ್ಞಾನದಿಂದ ಮತ್ತು ಕರ್ಮ ದೇಹದ ಮೂಲಕ ಅದನ್ನು ಅರ್ಥಮಾಡಿ ಕೊಳ್ಳಬಹುದು. ಕರ್ಮ ದೇಹವೆಂದರೆ ಕರ್ಮದ ಫಲವಾಗಿ ಪಡೆಯುವ ದೇಹ. ನಾಮ ಮತ್ತು ರೂಪ ಇರುವುದು ದೇಹಕ್ಕೆ ಮಾತ್ರ. ಆದ್ದರಿಂದ ದೇಹದ ಪ್ರತಿಯೊಂದು ಚಟುವಟಿಕೆಯಲ್ಲೂ ನೀವು ಆತ್ಮ ಪ್ರಜ್ಞೆಯ ಮೇಲೆ ಆಧರಿತವಾದ ಆತ್ಮಧರ್ಮವನ್ನು ವ್ಯಕ್ತಪಡಿಸಬೇಕು.

"ಆತ್ಮವು ಗಂಡೂ ಅಲ್ಲ, ಹೆಣ್ಣೂ ಅಲ್ಲ; ದನವಲ್ಲ, ಕುರಿಯಲ್ಲ, ಆನೆಯಲ್ಲ, ಪಕ್ಷಿಯಲ್ಲ, ಮರವಲ್ಲ. ಆ ಬಗೆಯ ವರ್ಗೀಕರಣಕ್ಕೆ ಅದು ಅತೀತವಾಗಿದೆ," ಎಂದು ಹೇಳಲಾಗಿದೆ. ಈ ವ್ಯತ್ಯಾಸಗಳು ಮೂಡುವುದು ಕರ್ಮದ ಆಧಾರದ ಮೇಲೆ. ಆತ್ಮವು ಬದಲಾವಣೆಗೆ ಅಸಮರ್ಥವಾಗಿದೆ. ಅದರ ಬಗ್ಗೆ ಖಚಿತವಾಗಿ ಹೇಳಬಹುದಾದ ಒಂದೇ ಒಂದು ವಿಚಾರವೆಂದರೆ ಅದು ಇದೆ ಎನ್ನುವುದು. ಈ ಎಲ್ಲದರ ಸಾರಾಂಶವೇನೆಂದರೆ ಆತ್ಮವು ಪರಮೋನ್ನತ ನಿರಪೇಕ್ಷ, ಪರಮಾತ್ಮ. ಮಿಕ್ಕದ್ದೆಲ್ಲವೂ ನಿರ್ದಿಷ್ಟ, ಗೌಣ, ಮಿಥ್ಯೆ, ಅಸತ್ಯ, ಗುರುತಿಸಬಹುದಾದಂಥದು.

ಒಂದು ಪಲ್ಲಕ್ಕಿಯನ್ನು ತೆಗೆದುಕೊಳ್ಳಿ. ಪಲ್ಲಕ್ಕಿಯಾಗಿ ಬದಲಾಗುವ ಮೊದಲು ಅದು ಮರವಾಗಿತ್ತು. ಆಮೇಲೆ ಹಲಗೆಗಳಾಗಿ ಪರಿವರ್ತನೆ ಹೊಂದಿ, ಅಂತಿಮವಾಗಿ ಪಲ್ಲಕ್ಕಿಯಾಯಿತು. ರೂಪದಲ್ಲಿ ಪ್ರತಿಯೊಂದು ಬದಲಾವಣೆಯಾದಾಗಲೂ ಅದರ ಹೆಸರೂ ಬದಲಾಯಿತು. ಪಲ್ಲಕ್ಕಿಯಲ್ಲಿ ಕುಳಿತಿರುವಾಗ ಆತನು ಒಂದು ಹಲಗೆಯ

ಮೇಲೆ ಕುಳಿತಿದ್ದಾನೆಂದಾಗಲಿ, ಮರದ ಮೇಲೆ ಕುಳಿತಿದ್ದಾನೆಂದಾಗಲಿ ಯಾರೂ ಹೇಳುವುದಿಲ್ಲ. ವಸ್ತುಗಳು ಪರಿವರ್ತನೆ ಹೊಂದುತ್ತವೆ, ಅವು ನಿತ್ಯವಲ್ಲ. ಅವು ಸತ್ ಅಲ್ಲ. ವಸ್ತುಗಳನ್ನು ಗುರುತಿಸಲು ಸಾಧ್ಯವಾಗುವುದು ನಾಮ ಮತ್ತು ರೂಪಗಳಿಂದಲೇ. ಅವುಗಳ ಲಕ್ಷಣಗಳಿಂದ ಮಾತ್ರವೇ ಅವುಗಳನ್ನು ವರ್ಣಿಸ ಬಹುದು. ಏಕೆಂದರೆ, ಅವು ಕೃತಕ ಮತ್ತು ತಾತ್ಕಾಲಿಕ.

ಒಂದು ಕುರ್ಚಿ ಎಂದರೆ ಖಚಿತವಾಗಿ ಏನು? ಅದು ಮರದ ಒಂದು ನಿರ್ದಿಷ್ಟ ಪರಿವರ್ತನೆ ಅಲ್ಲವೆ? ಮರವನ್ನು ತೆಗೆದುಬಿಟ್ಟರೆ ಕುರ್ಚಿಯೂ ಕಣ್ಮರೆಯಾಗಿಬಿಡು ತ್ತದೆ. ಮೂಲ ವಸ್ತುವಾದ ಮರವನ್ನು ಕುರಿತು ಆಲೋಚಿಸಿ, ತೋರಿಕೆಯಾದ ಕುರ್ಚಿ ಮಾಯವಾಗುತ್ತದೆ. ಹಾಗೆಯೇ ಧರ್ಮ! ವರ್ಣಧರ್ಮ, ಗೃಹಸ್ಥ ಧರ್ಮ, ವಾನಪ್ರಸ್ಥ ಧರ್ಮ, ಸನ್ಯಾಸ ಧರ್ಮ, ಬ್ರಹ್ಮಚರ್ಯ ಧರ್ಮ, ಈ ಧರ್ಮ, ಆ ಧರ್ಮ ಎಲ್ಲವೂ ಒಂದು ಮೂಲ ಧರ್ಮದರೂಪಾಂತರಗಳು. ಕುರ್ಚಿ, ಬೆಂಚು, ಪಲ್ಲಕ್ಕಿ ಇವುಗಳ ಹಾಗೆ. ಅವುಗಳ ಸ್ವರೂಪವನ್ನು ಕುರಿತು ಆಳವಾಗಿ ಯೋಚಿಸುತ್ತಾ ಹೋದಂತೆ ಈ ವೈವಿಧ್ಯಗಳೆಲ್ಲವೂ ಮಾಯವಾಗುತ್ತವೆ. ದೇಹಸಂಬಂಧಿ ಧರ್ಮಗಳು ಅಳಿಸಿಹೋಗಿ, ಆತ್ಮ ಧರ್ಮವೊಂದು ಉಳಿಯುತ್ತದೆ. ಪೀಠೋಪಕರಣಗಳು ಮಾಯವಾಗಿ ಮರವೊಂದು ಉಳಿಯುವ ಹಾಗೆಯೇ ವಸ್ತುನಿಷ್ಠವಾದ ಧರ್ಮಗಳೆಲ್ಲವೂ ಮಾಯವಾಗಿ ಆತ್ಮಧರ್ಮವೊಂದು ಉಜ್ವಲ ಕಾಂತಿಯಿಂದ ಬೆಳಗುತ್ತದೆ.

ಪ್ರಾಪಂಚಿಕ ವ್ಯವಹಾರಗಳಿಗಾಗಿ ದೈಹಿಕ ಧರ್ಮಗಳು ಮುಖ್ಯವಾದವೇ. ಇಲ್ಲ ಎಂದು ನಾನು ಹೇಳುವುದಿಲ್ಲ. ಮರವನ್ನು ಪೀಠೋಪಕರಣವನ್ನಾಗಿ ಪರಿವರ್ತಿಸಿ ಉಪಯೋಗಿಸಿಕೊಳ್ಳುವ ಹಾಗೆ, ಆತ್ಮಧರ್ಮ ಅಥವಾ ಶಾಂತಿಧರ್ಮ ಅಥವಾ ಸತ್ಯ ಧರ್ಮವನ್ನು ಗೃಹಸ್ಥ ಧರ್ಮ, ವಾನಪ್ರಸ್ಥ ಧಮ, ವರ್ಣ ಧರ್ಮ, ಸ್ತ್ರೀ ಧರ್ಮ, ಪುರುಷ ಧರ್ಮ, ಇತ್ಯಾದಿಯಾಗಿ ಆಕಾರ ಕೊಟ್ಟು ಆಚರಿಸಲಾಗುತ್ತದೆ. ಎಲ್ಲದರಲ್ಲೂ ಇರುವ ಮೂಲ ವಸ್ತು ಒಂದೇ. ಒಂದೊಂದು ಪ್ರತ್ಯೇಕ ರೂಪದ ಆಂತರ್ಯದಲ್ಲೂ ಇರುವ ಮೂಲ ವಸ್ತು ಸಮಾನವಾದದ್ದು. ಮೂಲ ವಸ್ತುವನ್ನೇ ಉಪಯೋಗಿಸುವುದು ಹೇಗೆ? ಅದನ್ನು ವಿವಿಧ ರೂಪಗಳಾಗಿ ರೂಪಾಂತರಿಸಿ, ಬೇರೆ ಬೇರೆ ಹೆಸರಿಟ್ಟು, ಬೇರೆ ಬೇರೆ ಉದ್ದೇಶಗಳಿಗಾಗಿ ಬಳಸಲಾಗುತ್ತದೆ. ಆತ್ಮ ಧರ್ಮವನ್ನು ಸ್ವಲ್ಪ ಸ್ವಲ್ಪವಾಗಿ ನೋಡಿ, ವಿವಿಧ ಉದ್ದೇಶಗಳಿಗೆ ತಕ್ಕಂತೆ ಸೀಮಿತ ಗೊಳಿಸಲಾಗುತ್ತದೆ, ಮರವನ್ನು ಕತ್ತರಿಸಿ, ಹತ್ತರಿ ಹಾಕಿ ಕೂಡಿಸಿ, ಜೋಡಿಸಿ ಮತ್ತೆ ಜೋಡಿಸಿ ಹೇಗೆ ಬೇಕೋ ಹಾಗೆ ಉಪಯೋಗಿಸಿಕೊಳ್ಳುವಂತೆ. ಆದರೆ ಅದೂ ಆತ್ಮಧರ್ಮವೇ ಅದರಲ್ಲೇನೂ ಸಂದೇಹವಿಲ್ಲ. ಆ ಮರದಿಂದ ಬೇರೆ ಬೇರೆ

ಧರ್ಮ ಪಂಥಗಳನ್ನು ಪಡೆಯುತ್ತಿರುವವರೆಗೆ ಏನೂ ಬಾಧಕವಿಲ್ಲ. ಒಂದು ವಿಷಯ ನೆನಪಿರಲಿ. ಪೀಠೋಪಕರಣವನ್ನು ಮತ್ತೆ ಮೂಲ ಮರ ಎಂದು ವರ್ಗೀಕರಿಸಲು ಬರುವುದಿಲ್ಲ! ಆತ್ಮ ಧರ್ಮವನ್ನು ಪ್ರಾಪಂಚಿಕ ಚಟುವಟಿಕೆಯ ಕ್ಷೇತ್ರಗಳಿಗೆ ಅನ್ವಯಿಸಿ, ಆದರೆ ಪ್ರಾಪಂಚಿಕ ಧರ್ಮಗಳನ್ನು ಆತ್ಮಧರ್ಮ ಎಂದು ಕರೆಯಬೇಡಿ! ಇದು ಪರವಸ್ತುವನ್ನು ತಪ್ಪಾಗಿ ವಿವರಿಸದಂತಾಗುತ್ತದೆ.

ಧರ್ಮವು ನೈತಿಕ ಮಾರ್ಗ, ನೈತಿಕ ಮಾರ್ಗವೇ ಬೆಳಕು; ಬೆಳಕೇ ಆನಂದ. ಧರ್ಮದ ಲಕ್ಷಣ ಪವಿತ್ರತೆ, ಶಾಂತಿ, ಸತ್ಯ, ಸಹಿಷ್ಣುತೆ. ಧರ್ಮವೇ ಯೋಗ, ಐಕ್ಯ, ವಿಲೀನತೆ, ಅದೇ ಸತ್ಯ. ಅದರ ಲಕ್ಷಣಗಳು ನ್ಯಾಯ, ಇಂದ್ರಿಯ ನಿಗ್ರಹ, ಆತ್ಮ ಗೌರವ, ಪ್ರೇಮ, ಗಾಂಭೀರ್ಯ, ಒಳಿತು, ಧ್ಯಾನ, ಸಹಾನುಭೂತಿ, ಅಹಿಂಸೆ. ಇದು ಯುಗ ಯುಗಾಂತರಗಳಿಂದ ಉಳಿದುಕೊಂಡುಬಂದಿರುವ ಧರ್ಮ. ಅದು ವ್ಯಕ್ತಿಯನ್ನು ವಿಶ್ವಾತ್ಮಕ ಪ್ರೇಮ ಮತ್ತು ಐಕ್ಯತೆಗಳಿಗೆ ಒಯ್ಯುತ್ತದೆ. ಅದು ಅತ್ಯುನ್ನತ ವಾದ ಮತ್ತು ಅತ್ಯಂತ ಲಾಭಕರವಾದ ಸಾಧನೆ. ಈ ಬಿಡಿಸಿ ತೋರಿಸುವಿಕೆಯೆಲ್ಲವೂ ಧರ್ಮದಿಂದ ಪ್ರಾರಂಭವಾಯಿತು. ಇದೆಲ್ಲಕ್ಕೂ ಸ್ಥಿರತೆ ಒದಗುವುದು ಸತ್ಯದಿಂದ, ಸತ್ಯವು ಧರ್ಮದಿಂದ ಬೇರೆ ಮಾಡಲಾಗದಂಥದು. ಸತ್ಯವು ವಿಶ್ವದ ನಿಯಮ. ಅದು ಸೂರ್ಯ ಚಂದ್ರರನ್ನು ಅವರವರ ಕಕ್ಷೆಯಲ್ಲಿ ಸುತ್ತುವಂತೆ ಮಾಡುತ್ತದೆ. ಧರ್ಮವೇ ವೇದಗಳು ಮತ್ತು ಮಂತ್ರಗಳು, ಅವು ಒದಗಿಸಿಕೊಡುವ ಜ್ಞಾನ. ಧರ್ಮವೇ ದಾರಿ, ಪಥ ಶಾಸನ. ನೀತಿಗೆ ಎಲ್ಲೆಲ್ಲಿ ಬದ್ಧವಾಗಿರುವುದು ಕಂಡುಬರುತ್ತದೆಯೋ ಅಲ್ಲಿ ಸತ್ಯ, ಧರ್ಮವು ಕಾರ್ಯತತ್ಪರವಾಗಿರುವುದನ್ನು ನೋಡಬಹುದು. ಭಾಗವತದಲ್ಲಿಯೂ ಹೀಗೆ ಹೇಳಿದೆ: "ಧರ್ಮವು ಎಲ್ಲಿ ಇದೆಯೋ ಅಲ್ಲಿ ಕೃಷ್ಣನಿದ್ದಾನೆ; ಎಲ್ಲಿ ಧರ್ಮ ಮತ್ತು ಕೃಷ್ಣ ಇಬ್ಬರೂ ಇದ್ದಾರೆಯೋ ಅಲ್ಲಿ ಜಯವಿದೆ." ಧರ್ಮವೇ ಭಗವಂತನ ಸ್ವರೂಪ; ಪ್ರಪಂಚವು ಭಗವಂತನ ದೇಹವಾದ್ದರಿಂದ, ಪ್ರಪಂಚ ಎನ್ನುವುದು ನೈತಿಕ ವ್ಯವಸ್ಥೆಗೆ ಇನ್ನೊಂದು ಹೆಸರು. ಇಂದಾಗಲಿ ಎಂದೇ ಆಗಲಿ ಅದನ್ನು ಯಾರೂ ನಿರಾಕರಿಸಲಾರರು.

ಅಧ್ಯಾಯ ೪

# ಪುರುಷ ಮತ್ತು ಸ್ತ್ರೀ ಪ್ರಕೃತಿಗಳು

ಜನರು ಅನೇಕಾನೇಕ ಕರ್ತವ್ಯಗಳು, ಹಕ್ಕುಗಳು ಮತ್ತು ಬಾಧ್ಯತೆಗಳ ಬಗೆಗೆ ಹೇಳುತ್ತಾರೆ. ಆದರೆ ಇವೆಲ್ಲ ಮೂಲಭೂತವಾದ ಸತ್ಯ ಧರ್ಮವಲ್ಲ, ಅವು ಬದುಕಿನ ತೊಡಕುಗಳನ್ನು ನಿಯಂತ್ರಿಸಿ ಕ್ರಮಬದ್ಧಗೊಳಿಸುವ ಮಾರ್ಗಗಳು, ವಿಧಾನಗಳು ಅಷ್ಟೆ. ಅವು ಮೂಲಭೂತ ಸ್ವರೂಪದವಲ್ಲ. ಈ ಎಲ್ಲ ನೀತಿ ನಿಯಮಗಳು, ಅಂಗೀಕೃತ ನಡವಳಿಕೆಗಳು ಎರಡು ಬಗೆಯ ಸ್ವಭಾವಗಳನ್ನೂ ಗಮನದಲ್ಲಿಟ್ಟುಕೊಂಡು ಅವುಗಳ ಅಗತ್ಯವನ್ನು ಪೂರೈಸುವ ಸಲುವಾಗಿ ಚೋದಿತ ವಾಗಿವೆ.

ಅವು ಪ್ರಕೃತಿ ಮತ್ತು ಪರಮಾತ್ಮರನ್ನು, ಸ್ಥೂಲ ಸೂಕ್ಷ್ಮಗಳನ್ನು, ಜಡ ಚೇತನಗಳನ್ನು ಸರ್ವವ್ಯಾಪಕವಾದ ಈ ಯುಗಳತೆಯನ್ನು ಸೂಚಿಸುತ್ತವೆ. ಈ ಸಮಸ್ತ ಸೃಷ್ಟಿಯೂ ಜಡ ಮತ್ತು ಚೇತನಗಳ ಪರಸ್ಪರ ಸಂಬಂಧದಿಂದ ಮೂಡಿತು, ಅಲ್ಲವೆ? ಹಾಗೆಯೇ ಈ ವಿಭಜನೆಯಿಂದಲೇ ಇನ್ನಿತರ ಅಂಶಗಳೆಲ್ಲ ಉದಿಸಿವೆ. ಇಷ್ಟೊಂದು ವಿಸ್ತಾರ ವಾದ ಧರ್ಮ ಪರಿಶೀಲನೆ ಮತ್ತು ವಿವರಣೆ ಎಲ್ಲವೂ ಪುರುಷ ಮತ್ತು ಸ್ತ್ರೀ ಎಂಬ ಎರಡರಿಂದಾಗಿ. ಆದ್ದರಿಂದ ಜಗತ್ತಿನ ವಾಸ್ತವ ಪ್ರಗತಿಗೆ ಮುಖ್ಯವಾದ ಧರ್ಮವೆಂದರೆ ಈ ಎರಡೂ ವರ್ಗಗಳ ಉತ್ತಮ ನೀತಿಯುತ ನಡವಳಿಕೆ. ಯಾವ ಮಹಾಗುರುವು ಬೋಧಿಸಿದರೂ ಅದು ಈ ಎರಡು ಅಂಶಗಳಿಂದ ಆಚೆಗೆ ಹೋಗಲಾರದು.

ಪುರುಷನಿಗೆ ಪುರುಷ ಧರ್ಮ, ಸ್ತ್ರೀಗೆ ಸ್ತ್ರೀ ಧರ್ಮ ಇದೇ ಮೇಲೆ ಹೇಳಿದ ಸತ್ಯಧರ್ಮವನ್ನು ಅನ್ವಯಿಸಿರುವ ರೀತಿ. ಇತರ ಸಂಹಿತೆಗಳು, ಸಾಧನೆಗಳು ಎಲ್ಲವೂ ಅವುಗಳಿಗೆ ಪೂರಕಗಳು. ಗೋದಾವರಿಯು ಮುಂದೆ ಮುಂದೆ ಹರಿದಂತೆ ಅದಕ್ಕೆ ಬಂದು ಸೇರುವ ಉಪನದಿಗಳ ಹಾಗೆ. ಅವು ತಾತ್ಕಾಲಿಕವಾದ ವಿವಿಧ ಸನ್ನಿವೇಶಗಳು, ಪರಿಸ್ಥಿತಿಗಳು ಮತ್ತು ಸ್ಥಾನಮಾನಗಳಿಗೆ ಸಂಬಂಧಿಸಿರುತ್ತವೆ. ನೀವು ಮುಖ್ಯ ನದಿಗೆ ಗಮನ ಕೊಡಬೇಕೇ ಹೊರತು ಉಪನದಿಗಳಿಗಲ್ಲ. ಹಾಗೆಯೇ ಪ್ರಧಾನವಾದ ಪುರುಷ ಮತ್ತು ಸ್ತ್ರೀ ಧರ್ಮಗಳನ್ನು ಬದುಕಿನ ಮುಖ್ಯ ಮಾರ್ಗ

ದರ್ಶಕಗಳನ್ನಾಗಿ ಇಟ್ಟುಕೊಳ್ಳಿ, ಗೌಣವಾದ ಪೋಷಕ ಧರ್ಮಗಳಿಗೆ ಬದುಕಿನ ಯೋಜನೆಯಲ್ಲಿ ನಿರ್ಣಾಯಕವಾದ ಸ್ಥಾನವನ್ನು ಕೊಡಬೇಡಿ.

ಸ್ತ್ರೀಧರ್ಮ: ಸ್ತ್ರೀ ತತ್ತ್ವವನ್ನು ಭಗವಂತನು ತನ್ನ ಮೇಲೆ ಹೇರಿದ ಮಾಯೆ ಎಂಬುದಾಗಿ ಪುರುಷನು ಭಾವಿಸುತ್ತಾನೆ. ಅದು ಭಗವಂತನು ತನ್ನದೇ ಇಚ್ಛೆಯಿಂದ ತಾನೇ ಸಜ್ಜುಗೊಳಿಸಿಕೊಂಡ ಶಕ್ತಿ ಎಂದು ಪರಿಗಣಿಸಲು ಇದೇ ಕಾರಣ. ಅವಳು ಪುರುಷನ ನಿಷ್ಠಾವಂತ ಸಹಚರಿ, ಅವನ ಸುದೈವ. ಅವಳು ಭಗವತ್ಸಂಕಲ್ಪದ ಹರಳುಗಟ್ಟಿದ ರೂಪವಾದುದರಿಂದ ಅವಳು ರಹಸ್ಯ, ಅದ್ಭುತ, ಪಾಲಕ ಶಕ್ತಿಯ ಪ್ರತಿನಿಧಿ. ಅವನ ಮನೆಯ ಮಹಾರಾಣಿ, ಆತನ ವರ, ಅವನ ಮನೆಯ ಬೆಳಕು. ಶಕ್ತಿ ಸ್ವರೂಪದ ಆಗರಗಳಾಗಿರುವುದರಿಂದ ಅವರು ಎಂದಿಗೂ ಅಮಾನ್ಯರಲ್ಲ, ಅಮುಖ್ಯರಲ್ಲ. ಅವರ ಸ್ವಭಾವದಲ್ಲಿ ಎಷ್ಟು ಅಪಾರವಾದ ಸಹನೆ, ಸಹಿಷ್ಣುತೆ ಮತ್ತು ಪ್ರೇಮಗಳು ತುಂಬಿವೆ! ಅವರ ಆತ್ಮನಿಗ್ರಹವನ್ನು ಪುರುಷನು ಎಂದಿಗೂ ಸರಿಗಟ್ಟಲಾರನು. ಆಧ್ಯಾತ್ಮಿಕ ಪಥದಲ್ಲಿ ಮುನ್ನಡೆಯಲು ಅವರದೇ ಮಾದರಿ ಮತ್ತು ಮುಂದಾಳತ್ವ. ಸ್ತ್ರೀಯರಲ್ಲಿ ಶುದ್ಧ ನಿಸ್ವಾರ್ಥ ಪ್ರೇಮವು ಮಡುಗಟ್ಟಿ ನಿಂತಿದೆ. ವಿದ್ಯಾವತಿಯರಾದ, ಸುಸಂಸ್ಕೃತೆಯರಾದ, ಪ್ರೇಮ ಬಂಧಿತರಾದ, ತಮ್ಮ ಮಾತು ಮತ್ತು ಕೃತಿಗಳು ಧರ್ಮಕ್ಕೆ ವಿರುದ್ಧವಾಗಿಲ್ಲವೆ, ಸುಸಂಗತವಗಿವೆಯೆ ಎಂದು ವಿವೇಚಿಸುವುದರಲ್ಲಿ ಉತ್ಸುಕರಾಗಿರುವ ಸ್ತ್ರೀಯರು, ಭಗವತಿ ಲಕ್ಷ್ಮಿಯಂತೆ. ಮನೆಗೆ ಸಂತೋಷವನ್ನೂ ಸಕಲ ಸಿರಿ ಸಂಪದಗಳನ್ನೂ ತರುತ್ತಾರೆ. ಎಲ್ಲಿ ಪತಿ ಪತ್ನಿಯರು ಪವಿತ್ರ ಪ್ರೇಮದಿಂದ ಬಂಧಿತರಾಗಿರುವರೋ ಎಲ್ಲಿ ಇಬ್ಬರೂ ಆತ್ಮಕ್ಕೆ ಆಹಾರವುಣಿಸುವ ಪವಿತ್ರ ಗ್ರಂಥಗಳ ವಾಚನ ಮಾಡುವರೋ ಎಲ್ಲಿ ಭಗವನ್ನಾಮವನ್ನು ಹಾಡುವರೋ ಅವನ ದಿವ್ಯ ವೈಭವವನ್ನು ಸ್ಮರಿಸುವರೋ ಆ ಮನೆಯು ನಿಜವಾಗಿ ಭಗವಂತನ ನೆಲೆ, ವೈಕುಂಠ! ಶುದ್ಧ ಪ್ರೇಮದಿಂದ ಪತಿಯನ್ನು ಕುರಿತು ಮೋಹಿತಳಾಗಿರುವ ಪತ್ನಿಯು ಅಮೂಲ್ಯ ಪರಿಮಳವನ್ನು ಹರಡುತ್ತಿರುವ ಹೂವಿನ ಹಾಗೆ. ಅವಳೊಂದು ಅಮೂಲ್ಯ ರತ್ನ. ಮನೆಗೆ ಕಾಂತಿಯನ್ನು ಬೀರುತ್ತಾಳೆ. ಸದ್ಗುಣಭರಿತಳಾದ ಪತ್ನಿಯು ನಿಜವಾಗಿಯೂ ಉಜ್ವಲವಾದ ಒಂದು ರತ್ನ.

ಸ್ತ್ರೀಯರಿಗೆ ಶೀಲವೇ ಆದರ್ಶ. ಆ ಗುಣದಿಂದ ಅವರಿಗೆ ಎಂತಹ ಶಕ್ತಿ ಬರುತ್ತದೆಂದರೆ ಅವರು ಏನನ್ನು ಬೇಕಾದರೂ ಸಾಧಿಸಬಲ್ಲರು. ಆ ಶಕ್ತಿಯ ಮೂಲಕ ಸಾವಿತ್ರಿಗೆ ತನ್ನ ಪತಿಯ ಪ್ರಾಣವನ್ನು ಮರಳಿಗಳಿಸಿಕೊಳ್ಳಲು ಸಾಧ್ಯವಾಯಿತು. ವಾಸ್ತವವಾಗಿ ಅವಳು ಮೃತ್ಯು ದೇವತೆ ಯಮನೊಂದಿಗೆ ವಾದ ಮಾಡಿ ಹೋರಾಡಬೇಕಾಯಿತು. ಅತ್ರಿ ಮುನಿಯ ಪತ್ನಿ, ದತ್ತಾತ್ರೇಯನ ತಾಯಿ ಅನಸೂಯೆಯು ತ್ರಿಮೂರ್ತಿಗಳನ್ನು ಎಳೆ ಹಸುಳೆಗಳನ್ನಾಗಿ ಪರಿವರ್ತಿಸಿಬಿಟ್ಟಳು. ತನ್ನ ಕುಷ್ಠರೋಗಿ

ಪತಿಯ ಸೇವೆಯಲ್ಲಿ ನಿಷ್ಠೆಯಿಂದ ನಿರತಳಾದ ನಳಾಯಿನಿಯು ತನ್ನ ಶೀಲದ ಬಲದಿಂದ ಸೂರ್ಯನನ್ನೇ ಮುಂದಕ್ಕೆ ಚಲಿಸದಂತೆ ತಡೆದು ನಿಲ್ಲಿಸಲು ಸಾಧ್ಯವಾಯಿತು! ಶೀಲವು ಸ್ತ್ರೀಯರ ಅತ್ಯಮೂಲ್ಯ ಆಭರಣ. ಅವಳನ್ನು ಕೊಂಡಾಡಬೇಕಾದುದು ಮುಖ್ಯವಾಗಿ ಅದಕ್ಕಾಗಿಯೇ. ಅದರ ಲಾಭಗಳು ವರ್ಣನೆಗೆ ಮೀರುತ್ತವೆ. ಅದು ಅವಳ ಜೀವದ ಉಸಿರಾಗಿರುತ್ತದೆ. ತನ್ನ ಶೀಲದಿಂದ, ಅದು ಕೊಡುವ ಬಲದಿಂದ ಅವಳು ತನ್ನ ಪತಿಯನ್ನು ಎಲ್ಲಾ ವಿಧದ ಆಪತ್ತುಗಳಿಂದ ರಕ್ಷಿಸಬಲ್ಲಳು. ತನ್ನನ್ನೂ ಕಾಪಾಡಿಕೊಂಡು ಶೀಲದ ಮೂಲಕವೇ ಸ್ವರ್ಗವನ್ನು ಗೆಲ್ಲುವಳು. ದಮಯಂತಿಯೂ ತನ್ನನ್ನು ಕೆಡಿಸಲು ಬಂದ ಒಬ್ಬ ವ್ಯಾಧನನ್ನು ಸುಟ್ಟು ಬೂದಿ ಮಾಡಿದಳು, ಕೇವಲ ತನ್ನ ಮಾತಿನ ಶಕ್ತಿಯ ಮೂಲಕ. ನಳ ಮಹಾರಾಜನು ಕ್ರೂರ ವಿಧಿಯ ಆಘಾತಕ್ಕೆ ಬಲಿಯಾಗಿ ಅವಳನ್ನು ಅಗಲಿ ಹೋದಾಗ ಒಂಟಿಯಾಗಿ ಕಾಡಿನಲ್ಲಿ ಅಪಾರ ಸಂಕಷ್ಟಗಳನ್ನು ಅವಳು ಅನುಭವಿಸಿದಳು.

ಸ್ತ್ರೀಯರಿಗೆ ಗಾಂಭೀರ್ಯ ಅತ್ಯಗತ್ಯ. ಅದು ಅವಳ ಬೆಲೆ ಕಟ್ಟಲಾಗದ ಆಭರಣವಿದ್ದ ಹಾಗೆ. ಗಾಂಭೀರ್ಯದ ಮಿತಿಗಳನ್ನು ಅತಿಕ್ರಮಿಸಿ ಹೋಗುವುದು ಮಹಿಳೆಗೆ ಧರ್ಮವಿರೋಧಿಯಾದದ್ದು. ಅದರಿಂದ ಅನೇಕ ವಿಪತ್ತುಗಳು ಎದುರಾಗಬಹುದು. ಏಕೆ, ಸ್ತ್ರೀತ್ವದ ಭವ್ಯತೆಯೇ ನಾಶವಾಗುವುದು. ಗಾಂಭೀರ್ಯವಿಲ್ಲದೆ ಹೋದರೆ ಅವಳಿಗೆ ಸೌಂದರ್ಯವಾಗಲಿ, ಸಂಸ್ಕೃತಿಯಾಗಲಿ ಇಲ್ಲವೆಂದೇ ಅರ್ಥ. ವಿನಯ, ಶುದ್ಧ ಆಲೋಚನೆ, ಶುದ್ಧ ನಡವಳಿಕೆ, ಮಾರ್ದವತೆ, ಉದಾತ್ತ ಆದರ್ಶಗಳು ಸೂಕ್ಷ್ಮ ಸಂವೇದನೆ, ಸಮಾಧಾನ—ಈ ಗುಣಗಳ ಮಧುರ ಮಿಶ್ರಣವೇ ಗಾಂಭೀರ್ಯ. ಮಹಿಳೆಯರಿಗೆ ಸಮಸ್ತ ಆಭರಣಗಳಿಗಿಂತ ಅತ್ಯಂತ ಅಮೂಲ್ಯವಾದ ಆಭರಣ ಇದು.

ಅಂತರ್ಗತವಾದ ಉಚಿತಾನುಚಿತ ಜ್ಞಾನದಿಂದಾಗಿ ಗಾಂಭೀರ್ಯವುಳ್ಳ ಸ್ತ್ರೀಯು ಎಂದಿಗೂ ತನ್ನ ಮಿತಿಗಳನ್ನು ಅತಿಕ್ರಮಿಸಳು. ಯಾವ ನಡವಳಿಕೆಯು ಉಚಿತವಾದದ್ದು, ಯಾವುದು ಅನುಚಿತವಾದದ್ದು ಎಂಬುದು ಅವಳಿಗೆ ತನಗೆ ತಾನೇ ಅರ್ಥವಾಗುತ್ತದೆ. ಉತ್ತಮ ಕಾರ್ಯಗಳಿಗೆ ಹಾಗೂ ಉತ್ತಮ ನಡವಳಿಕೆಗೆ ಅವಳು ತನ್ನನ್ನು ತೆತ್ತುಕೊಳ್ಳುತ್ತಾಳೆ. ಗಾಂಭೀರ್ಯವೇ ಮಹಿಳೆಯ ಭವ್ಯ ವ್ಯಕ್ತಿತ್ವದ ಪರೀಕ್ಷೆ. ಗಾಂಭೀರ್ಯವಿಲ್ಲದೆ ಹೋದರೆ, ಸ್ತ್ರೀತ್ವದ ಹಿತಾಸಕ್ತಿಗಳನ್ನೇ ಅವಳು ಹಾಳುಮಾಡುತ್ತಿರುತ್ತಾಳೆ, ಜೊತೆಗೆ ತನ್ನ ವ್ಯಕ್ತಿತ್ವಕ್ಕೂ ಕಳಂಕ ತಂದುಕೊಳ್ಳುತ್ತಾಳೆ. ಅಂಥವಳು ಪರಿಮಳವಿಲ್ಲದ ಹೂವಿನ ಹಾಗೆ, ಜಗತ್ತು ಅವಳನ್ನು ಮೆಚ್ಚುವುದಿಲ್ಲ, ಗೌರವಿಸುವುದಿಲ್ಲ, ಕೊನೆಗೆ ಅಂಗೀಕರಿಸುವುದೂ ಇಲ್ಲ. ಗಾಂಭೀರ್ಯವಿಲ್ಲದೆ ಹೋದರೆ, ಬೇರೆ ಸಿರಿ ಸಂಪದಗಳು ಎಷ್ಟೇ ಇರಲಿ, ಅವಳ ಜೀವನವು ನಿಷ್ಫಲವಾಗುತ್ತದೆ,

ಶೂನ್ಯವಾಗುತ್ತದೆ. ಗಾಂಭೀರ್ಯವು ಅವಳನ್ನು ಭವ್ಯ ಪವಿತ್ರತೆಗೇರಿಸುತ್ತದೆ. ಗಂಭೀರಳಾದ ಸ್ತ್ರೀಯು ತನ್ನ ಮನೆಯೊಳಗೂ ಹೊರಗೂ ಸಮಾಜದಲ್ಲೂ ಜಗತ್ತಿನಲ್ಲೂ ಮಾನ್ಯಳಾಗುತ್ತಾಳೆ.

ಮಧ್ಯೆ ಪ್ರವೇಶಿಸಿ ಕೆಲವರು ಹೀಗೆ ಕೇಳಬಹುದು: "ಆದರೆ ಗಾಂಭೀರ್ಯದ ನೀತಿ ನಿಯಮಗಳೆಲ್ಲವನ್ನೂ ಗಾಳಿಗೆ ತೂರಿರುವ ಮಹಿಳೆಯರನ್ನು ಇಂದು ಗೌರವಿಸಲಾಗುತ್ತದಲ್ಲ, ಅವರು ತಲೆಯನ್ನು ಮೇಲೆತ್ತಿ ನಡೆಯುತ್ತಾರಲ್ಲ, ಪ್ರಪಂಚವು ಅವರಿಗೆ ಮರ್ಯಾದೆ ತೋರಿಸುತ್ತದಲ್ಲ, ಅದೇಕೆ?" ಇಂದಿನ ಪ್ರಪಂಚದ ಸ್ಥಿತಿಗತಿಯನ್ನು ಕುರಿತು ನನಗೆ ಪರಿಚಯ ಮಾಡಿಕೊಡಬೇಕಾದ ಅಗತ್ಯವಿಲ್ಲ. ನನಗೆ ಅವುಗಳಲ್ಲಿ ಆಸಕ್ತಿಯಿಲ್ಲ. ಅವರಿಗೆ ಒಂದು ಬಗೆಯ ಗೌರವ ಮರ್ಯಾದೆ ಸಲ್ಲುತ್ತಿರಬಹುದು, ಆದರೆ ಆ ಗೌರವ ಅಧಿಕೃತವಾದದ್ದಲ್ಲ, ಅವರಿಗೆ ಅದನ್ನು ಪಡೆಯುವ ಅರ್ಹತೆಯಿಲ್ಲ. ಅನರ್ಹನಿಗೆ ಮರ್ಯಾದೆ ತೋರಿಸಿದಾಗ ಅದು ಅಪಮಾನಕ್ಕೆ ಸಮನಾಗುತ್ತದೆ. ಅದನ್ನು ಸ್ವೀಕರಿಸುವುದೆಂದರೆ ಆ ಕೊಡುಗೆಯನ್ನೇ ಹೀನಾಯಿಸಿದ ಹಾಗೆ. ಅದು ಗೌರವವಲ್ಲ. ಗಾಂಭೀರ್ಯವಿಲ್ಲದ ವ್ಯಕ್ತಿಯ ಮೇಲೆ ಸ್ವಾರ್ಥಿಗಳು ಮತ್ತು ಲೋಭಿಗಳು ಹೊಗಳಿಕೆಯ ಮಳೆಗರೆಯುತ್ತಾರೆ ಅಷ್ಟೆ. ಅದು ಕೊಳಕಾದ ಮತ್ತು ಅಹಿತಕರವಾದ ಎಂಜಲಿದ್ದ ಹಾಗೆ.

ಗಾಂಭೀರ್ಯವಿರುವ ಸ್ತ್ರೀಯು ಕೀರ್ತಿ, ಪ್ರಶಂಸೆಗಳಿಗೋಸ್ಕರ ಹಂಬಲಿಸುವುದಿಲ್ಲ. ಅವಳ ಗಮನ ಸದಾ ಕಾಲವೂ ತಾನು ಉಲ್ಲಂಘಿಸಬಾರದ ಮಿತಿಗಳ ಕಡೆಗೇ ಇರುತ್ತದೆ. ಕೀರ್ತಿ ಪ್ರಶಂಸೆಗಳು ಅವಳಿಗೆ ಕೇಳದೆಯೇ ಗಮನಕ್ಕೆ ಬಾರದಂತೆಯೇ ಬಂದೊದಗುತ್ತವೆ. ಹೂವಿನಲ್ಲಿರುವ ಮಧುವು ಎಂದೂ ದುಂಬಿಗಳು ಬರಲೆಂದು ಹಂಬಲಿಸುವುದಿಲ್ಲ; ದಯವಿಟ್ಟು ಬನ್ನಿ ಎಂದು ದುಂಬಿಗಳನ್ನು ಬೇಡಿಕೊಳ್ಳುವುದಿಲ್ಲ. ಜೇನಿನ ಸಿಹಿಯನ್ನು ಸವಿದಿರುವುದರಿಂದ ಅವು ತಾವಾಗಿಯೇ ಹೂವುಗಳನ್ನು ಹುಡುಕಿಕೊಂಡು ಧಾವಿಸಿ ಬರುತ್ತವೆ. ತಮಗೂ ಸಿಹಿಗೂ ಇರುವ ಮೋಹದಿಂದಾಗಿ ಅವು ಬರುತ್ತವೆ. ಮಿತಿಯನ್ನರಿತ ಸ್ತ್ರೀ ಮತ್ತು ಅವಳಿಗೆ ದೊರಕುವ ಗೌರವಗಳ ನಡುವಣ ಸಂಬಂಧವೂ ಹೀಗೆಯೆ.

ಒಂದು ಕಪ್ಪೆಯು ತಾವರೆಯ ಮೇಲೆ ಕುಳಿತು, ಹಾಗೆ ತಾನು ಕುಳಿತಿದ್ದೇನೆ ಎಂದು ಜಗತ್ತಿಗೆ ಸಾರಿ ಹೇಳಿಕೊಂಡ ಮಾತ್ರಕ್ಕೆ ಕಪ್ಪೆಗೆ ಆ ಹೂವಿನ ಸೌಂದರ್ಯ, ಮಾಧುರ್ಯಗಳ ಬೆಲೆ ತಿಳಿದಿದೆ ಎಂದರ್ಥವಾಗುತ್ತದೇನು? ಅವುಗಳನ್ನು ಅದು ಸವಿದಿದೆಯೇನು? ಅದು ತಾವರೆಯನ್ನು ಹೊಗಳಬಹುದು, ಆದರೆ ಕೊನೆಯ ಪಕ್ಷ ಅದರಲ್ಲಿ ಏನಿದೆ ಎಂಬುದನ್ನಾದರೂ ಗುರುತಿಸಿದೆಯೇನು? ಇಂದು ಮಹಿಳೆಗೆ

ಕೊಡಲಾಗುತ್ತಿರುವ ಗೌರವ ಈ ರೀತಿಯದು. ಏನನ್ನು ಮೆಚ್ಚಬೇಕು, ಏನನ್ನು ಮೆಚ್ಚತಕ್ಕದ್ದಲ್ಲ ಎಂಬುದನ್ನೂ ಹೇಗೆ ಗೌರವಿಸಬೇಕೆಂಬುದನ್ನೂ ಅರಿಯದ ಜನರು ಕೊಡುವ ಗೌರವ ಅದು. ಅವರಿಗೆ ನಿರ್ಣಯದ ಮಾನಕಗಳೇ ತಿಳಿದಿಲ್ಲ. ಅವರಿಗೆ ಮೌಲ್ಯಗಳಲ್ಲಿ ನಂಬಿಕೆಯಿಲ್ಲ. ನಿಜವಾಗಿಯೂ ಉತ್ತಮವಾದುದನ್ನು, ಶ್ರೇಷ್ಠವಾದು ದನ್ನು ಅವರು ಗೌರವಿಸುವುದಿಲ್ಲ; ಅವರು ನೀಡುವುದನ್ನು ಗೌರವ, ಸನ್ಮಾನ ಎಂದು ಹೇಗೆ ಕರೆಯಬಹುದು? ಅದನ್ನೊಂದು ರೋಗ ಎಂದೋ ಹೆಚ್ಚೆಂದರೆ ರೂಢಿ ಎಂದೋ ಕರೆಯಬಹುದು ಅಷ್ಟೆ.

ಆತ್ಮಧರ್ಮದ ನಿಯಮಗಳು ಗಾಂಭೀರ್ಯವಿಲ್ಲದ ಮಹಿಳೆಗೆ, ಸ್ತ್ರೀ ಎಂಬ ಪದ ವನ್ನು ಅನ್ವಯಿಸಲು ಅವಕಾಶ ಕೊಡುವುದಿಲ್ಲ. ಆತ್ಮಧರ್ಮವನ್ನನುಸರಿಸದ ವ್ಯಕ್ತಿಯ ಮೇಲೆ ಗೌರವ ಮರ್ಯಾದೆಗಳನ್ನು ಹೇರಿದರೆ ಅದು ಜೀವವಿಲ್ಲದ ದೇಹಕ್ಕೆ ಅಲಂಕಾರಗಳನ್ನು ಹೇರಿದ ಹಾಗೆ. ದೇಹವನ್ನು ತ್ಯಜಿಸಿ ಹೊರಟು ಹೋಗಿರುವ ಆತ್ಮವು ಶವಕ್ಕೆ ತೋರಿಸಿದ ಮರ್ಯಾದೆಯನ್ನು ಸವಿಯಲಾರದು. ಹಾಗೆಯೇ ಸತ್ಯವನ್ನು ಅರಿಯದ, ಆತ್ಮವು ಕೋಶಸ್ಥವಾಗಿರುವುದರ ಉದ್ದೇಶವನ್ನು ಅನುಭವ ಮಾಡಿಕೊಂಡಿಲ್ಲದ ವ್ಯಕ್ತಿಯ ಮೇಲೆ ಕೀರ್ತಿಯನ್ನು, ಪ್ರಶಂಸೆಯನ್ನು ಹೇರಿದರೆ ಅದರಿಂದ ಯಾರಿಗೆ ತಾನೆ ಸಂತೋಷವಾದೀತು? ಗಂಭೀರಳಾದ ಮಹಿಳೆಯು ಅಂತಹ ಅರ್ಥರಹಿತ ಅಲ್ಪವಸ್ತುಗಳಿಗಾಗಿ ಹಾತೊರೆಯುವುದಿಲ್ಲ. ಅದಕ್ಕೆ ಬದಲು ಅವಳು ಇನ್ನೂ ಹೆಚ್ಚು ತೃಪ್ತಿದಾಯಕವಾದ ಆತ್ಮಗೌರವವನ್ನು ಅರಸುತ್ತಾಳೆ. ಅವಳನ್ನು ಗೃಹಲಕ್ಷ್ಮಿಯನ್ನಾಗಿಸುವುದು ಈ ಗುಣವೇ. ಪತ್ನಿಯನ್ನು ಗೃಹಲಕ್ಷ್ಮಿ ಎನ್ನುವುದೇ ಈ ಕಾರಣದಿಂದ. ಪತ್ನಿಯಲ್ಲಿ ಅಂತಹ ವಿಶಿಷ್ಟ ಲಕ್ಷಣವಿಲ್ಲದೆ ಹೋದ ಪಕ್ಷದಲ್ಲಿ ಮನೆಯು ಕೊಳಕಿನ ಆಗರವಾಗಿಬಿಡುತ್ತದೆ.

ಮನೆಗೂ ಧರ್ಮಕ್ಕೂ ಮಹಿಳೆಯೇ ಆಧಾರ. ಧಾರ್ಮಿಕ ನಂಬಿಕೆಯನ್ನು ಅವಳು ನೆಟ್ಟು ಬೆಳೆಸಬಹುದು ಇಲ್ಲವೆ, ಒಣಗಿಸಿ ಕಿತ್ತೆಸೆಯಬಹುದು. ಶ್ರದ್ಧೆ ಮತ್ತು ಧಾರ್ಮಿಕ ಸಾಧನೆಯ ಬಗ್ಗೆ ಮಹಿಳೆಯರು ಸಹಜವಾಗಿಯೇ ಆಸಕ್ತಿ ಹೊಂದಿರುತ್ತಾರೆ. ಭಕ್ತಿ, ಶ್ರದ್ಧೆ, ಮಾರ್ದವತೆಗಳಿರುವ ಸ್ತ್ರೀಯರು ಪುರುಷರನ್ನು ಭಗವನ್ಮುಖರಾಗುವಂತೆ, ಪವಿತ್ರ ಗುಣಗಳನ್ನು ಬೆಳೆಸಿಕೊಳ್ಳುವಂತೆ ಮಾಡಬಲ್ಲರು. ಅವರು ಬೆಳಗಿನ ಜಾವ ದಲ್ಲೇ ಏಳುತ್ತಾರೆ, ಮನೆಯನ್ನು ಶುದ್ಧ ಮಾಡಿ, ಸ್ನಾನಾದಿಗಳನ್ನು ಮುಗಿಸುತ್ತಾರೆ. ಆಮೇಲೆ ಸ್ವಲ್ಪ ಹೊತ್ತು ಜಪ ಧ್ಯಾನಗಳಲ್ಲಿ ನಿರತರಾಗುತ್ತಾರೆ. ದೇವರನ್ನು ಪೂಜಿಸ ಲೆಂದೇ ಒಂದು ಸಣ್ಣ ಕೊಠಡಿಯನ್ನು ಅವರು ಮನೆಗಳಲ್ಲಿ ಮಾಡಿಕೊಂಡಿರುತ್ತಾರೆ. ಅಲ್ಲಿ ಭಗವಂತನ ಮೂರ್ತಿಗಳನ್ನು ಸಾಧು ಸಂತರ, ಗುರುಗಳ ಚಿತ್ರಪಟಗಳನ್ನು ಇರಿಸಿರುತ್ತಾರೆ. ಆ ಕೊಠಡಿಯು ತುಂಬಾ ಪವಿತ್ರವಾದುದೆಂದು ಪರಿಗಣಿಸಿ ಬೆಳಗ್ಗೆ

ಮತ್ತು ಸಂಜೆ ಎರಡು ಹೊತ್ತೂ ಅಲ್ಲಿ ಪ್ರಾರ್ಥನೆ ಮಾಡುತ್ತಾ ಇಡೀ ವಾತಾವರಣವನ್ನು ಪ್ರಾರ್ಥನೆಯಿಂದ ತುಂಬುತ್ತಾರೆ. ಪವಿತ್ರ ದಿನಗಳು ಮತ್ತು ಹಬ್ಬಗಳಲ್ಲಿ ವಿಶೇಷವಾಗಿ ಪೂಜೆ ಪ್ರಾರ್ಥನೆ. ಅವಿಚ್ಛಿನ್ನವಾಗಿ ಇದಿಷ್ಟನ್ನು ಮಾಡುತ್ತಿರುವ ಸ್ತ್ರೀಯು ಅತ್ಯಂತ ನಾಸ್ತಿಕನಾದ ತನ್ನ ಪತಿಯನ್ನೂ ಪರಿವರ್ತನೆಗೈಯಬಲ್ಲಳು. ಅವನೂ ಪ್ರಾರ್ಥನೆಯಲ್ಲಿ ಅಥವಾ ಯಾವುದಾದರೂ ಒಂದು ಸತ್ಕಾರ್ಯದಲ್ಲಿ ಅಥವಾ ಭಗವದರ್ಪಣೆಯ ಸಂಕೇತದೊಂದಿಗೆ ಕೈಗೊಂಡ ಯಾವುದಾದರೂ ಒಂದು ಸಮಾಜ ಸೇವಾ ಕಾರ್ಯದಲ್ಲಿ ತೊಡಗುವಂತೆ ಆತನನ್ನು ಒಲಿಸಬಲ್ಲಳು. ವಾಸ್ತವವಾಗಿ ಮನೆಯನ್ನು ಪರಿಪಾಲಿಸುವವಳು ಮಹಿಳೆಯೇ. ಅದೇ ಅವಳ ಜೀವಿತೋದ್ದೇಶ. ನಿಜವಾಗಿಯೂ ಅವಳು ಶಕ್ತಿ ಸ್ವರೂಪಳು.

ಇದಕ್ಕೆ ಬದಲು, ಪತ್ನಿಯು ದಿವ್ಯ ಪಥದಿಂದ ಪತಿಯನ್ನು ದೂರ ಸೆಳೆದರೆ, ಆಧ್ಯಾತ್ಮಿಕ ಸ್ತರದಿಂದ ಇಂದ್ರಿಯ ಕ್ಷೇತ್ರಕ್ಕೆ ಸೆಳೆದರೆ ಅಥವಾ ಧರ್ಮಾಚರಣೆಯಲ್ಲೇ ಆನಂದವನ್ನು ಕಾಣುವ ಅವಳನ್ನು ಪತಿಯು ಅದು ತಪ್ಪು ದಾರಿಯೆಂದು ಅದರಿಂದ ದೂರ ಸೆಳೆದರೆ, ಅಂತಹ ದಂಪತಿಗಳಿರುವ ಮನೆಯು ಆ ಹೆಸರಿಗೇ ಅರ್ಹವಾಗುವುದಿಲ್ಲ. ಅದೊಂದು ಶ್ಮಶಾನ, ದೆವ್ವ ಪಿಶಾಚಿಗಳು ಅಲೆದಾಡುವ ಸ್ಥಳ.

ವಸ್ತುತಃ ಸ್ತ್ರೀಯು ಆತ್ಮಜ್ಞಾನವನ್ನು ಗಳಿಸಲು ಅನವರತ ಶ್ರಮಿಸಬೇಕು ಮತ್ತು ತಾನು ಆತ್ಮ ಮಾತ್ರವೇ ಎಂಬ ಪ್ರಜ್ಞೆಯಲ್ಲೇ ಪ್ರತಿಯೊಂದು ಕ್ಷಣವನ್ನೂ ಕಳೆಯಬೇಕು. ದೈವೀ ಪ್ರಜ್ಞೆಯೊಂದಿಗೆ ಒಂದಾಗುವ ಉತ್ಕಟ ಬಯಕೆಯನ್ನು ಸದಾ ಹೊಂದಿರಬೇಕು. ಯಾವ ಮನೆಯಲ್ಲಿ ಹೆಣ್ಣು ಹಾಗಿರುತ್ತಾಳೆಯೋ ಪತಿಪತ್ನಿಯರು ಉನ್ನತ ಆದರ್ಶಗಳ ನೆರಳಿನಲ್ಲಿ ತಮ್ಮ ಬದುಕನ್ನು ಸಾಗಿಸುತ್ತಿದ್ದಾರೆಯೋ ಎಲ್ಲಿ ಅವರಿಬ್ಬರೂ ಒಟ್ಟಾಗಿ ಭಗವಂತನ ದಿವ್ಯ ನಾಮಗಳನ್ನು ಹಾಡುತ್ತಾರೆಯೋ ಸತ್ಕಾರ್ಯಗಳಲ್ಲಿ ನಿರತರಾಗಿರುತ್ತಾರೆಯೋ ಎಲ್ಲಿ ಸತ್ಯ, ಶಾಂತಿ ಪ್ರೇಮಗಳು ಅರಳುತ್ತಿವೆಯೋ ಪವಿತ್ರ ಗ್ರಂಥಗಳ ಅಧ್ಯಯನವು ಕ್ರಮ ತಪ್ಪದೆ ನಡೆಯುತ್ತಿದೆಯೋ ಎಲ್ಲಿ ಇಂದ್ರಿಯ ಭೋಗಗಳು ಹತೋಟಿಯಲ್ಲಿವೆಯೋ ಇಡೀ ಸೃಷ್ಟಿಯ ಏಕತೆಯ ಮೂಲಭೂತ ಭಾವನೆಯಿಂದ ಪ್ರೇರಿತವಾಗಿ ಯಾವ ಮನೆಯಲ್ಲಿ ಸಕಲ ಜೀವಿಗಳಿಗೆ ಸಮಾನವಾದ ವ್ಯವಹರಣೆ ಸಲ್ಲುತ್ತದೆಯೋ ಅಂಥ ಮನೆಯು ನಿಜವಾಗಿಯೂ ಭೂಮಿಯ ಮೇಲಿನ ಸ್ವರ್ಗ.

ಅಂತಹ ಸ್ವಭಾವವಿರುವ ಪತ್ನಿಯು ಆ ಹೆಸರಿಗೆ ಅರ್ಹಳಾದವಳು. ಪತಿಯನ್ನು ಕುರಿತು ಅವಳಿಗೆ ನಿಜವಾದ ಪ್ರೇಮವಿರಬೇಕು. ಆಗಲೇ ಅವಳಿಗೆ ಗೃಹಿಣಿ ಎಂಬ ಹೆಸರು ಸಲ್ಲುವುದು. ಆಗ ಮಾತ್ರವೇ ಅವಳು ಧರ್ಮಪತ್ನಿ, ಭಾರ್ಯೆ, ಧರ್ಮ

ಅರ್ಥ ಕಾಮಗಳಿಗೆ ಕಾರಣಳೂ ಸಹಚರಿಯೂ ಆದವಳು. ಪತಿಯ ಮನಸ್ಸನ್ನು ಅರಿತು ಮೃದುವಾಗಿಯೂ ಮಧುರವಾಗಿಯೂ ಮಾತನಾಡುವವಳೇ ನಿಜವಾದ ಗೆಳತಿ. ಅಷ್ಟೇಕೆ, ಎಷ್ಟೋ ಸಾರಿ ಪತಿಗೆ ಧರ್ಮದ ಪಥವನ್ನು ತೋರಿಸಿಕೊಡಬೇಕಾಗಿ ಬಂದಾಗ ಅವಳು ತಂದೆಯ ಸ್ಥಾನವನ್ನೂ ಪಡೆಯುತ್ತಾಳೆ. ಪತಿಯು ಅನಾರೋಗ್ಯ ದಿಂದ ಮಲಗಿರುವಾಗ ಅವಳು ತಾಯಿಯಂತೆ ಶುಶ್ರೂಷೆ ಮಾಡುತ್ತಾಳೆ.

ಸ್ತ್ರೀಯು ತನ್ನ ಪತಿಯ ಸೇವೆಗೆ ಮೊತ್ತ ಮೊದಲನೆಯ ಸ್ಥಾನವನ್ನು ಕೊಡಬೇಕು. ಅವಳಿಗೆ ಅದೇ ನಿಜವಾದ ಪೂಜೆ. ಅವಳಿಗೆ ಪ್ರಾರ್ಥನೆಯಾಗಲಿ, ಪೂಜೆಯಾಗಲಿ ಕಾಯಬಹುದು, ಏನೂ ಬಾಧಕವಿಲ್ಲ. ಪತಿ ಸೇವೆ ಮಾಡದೆ ಯಾವ ಪೂಜೆಯಲ್ಲೇ ಆಗಲಿ, ಧ್ಯಾನದಲ್ಲೇ ಆಗಲಿ ಅವಳು ಆನಂದವನ್ನು ಪಡೆಯಲು ಸಾಧ್ಯವಿಲ್ಲ.

ವಾಸ್ತವವಾಗಿ ಪತಿಯ ರೂಪದಲ್ಲಿಯೇ ಭಗವಂತನಿದ್ದಾನೆಂಬುದನ್ನು ತಿಳಿದು ಅವಳು ಸ್ವಾಗತಿಸಿ, ಅವನಿಗೆ ಮಾಡುವ ಸೇವೆಯನ್ನು ಭಕ್ತಿಯ ಹಂತಕ್ಕೆ ಒಯ್ದು ಮಾಡಬೇಕು. ಅದೇ ಅವಳ ನಿಜವಾದ ಧರ್ಮ. ಪ್ರತಿಯೊಂದು ಕೆಲಸವನ್ನೂ ಆತ್ಮಕ್ಕಾಗಿ, ಆತ್ಮ ಪರಮಾತ್ಮರ ವಿಲೀನಕ್ಕಾಗಿ ಎಂಬಂತೆ ಮಾಡುತ್ತಾ ಹೋದರೆ ಆ ಕಾರ್ಯವು ಭಗವದರ್ಪಿತವಾಗುತ್ತದೆ. ಅಂತಹ ಚಟುವಟಿಕೆಗಳು ಮನುಷ್ಯನನ್ನು ರಕ್ಷಿಸುತ್ತವೆ, ಕಟ್ಟಿಹಾಕುವುದಿಲ್ಲ.

ಪತಿಯು ಎಷ್ಟೇ ಕೆಟ್ಟವನಾಗಿರಲಿ, ಎಂತಹ ನೀಚನೇ ಆಗಿರಲಿ ಅದು ಮುಖ್ಯವಲ್ಲ. ಪತ್ನಿಯು ಪ್ರೇಮದ ಮೂಲಕ ಅವನನನ್ನು ಸರಿದಾರಿಗೆ ತರುತ್ತಾಳೆ, ತಿದ್ದುತ್ತಾಳೆ. ಅವನೂ ಭಗವಂತನ ಅನುಗ್ರಹವನ್ನು ಪಡೆಯಲು ಸಹಾಯ ಮಾಡುತ್ತಾಳೆ. ಅವಳ ಉದ್ಧಾರ ಮಾತ್ರ ಮುಖ್ಯ. ಅವನ ಸುಧಾರಣೆಯಾಗಲಿ ಉದ್ಧಾರವಾಗಲಿ ಅವಳಿಗೆ ಮುಖ್ಯವಲ್ಲ ಎನ್ನುವುದು ಸುತರಾಂ ಸರಿಯಲ್ಲ. ಬದಲು ಅವಳು ಪತಿಯ ಯೋಗಕ್ಷೇಮ, ಪತಿಯ ಉದ್ಧಾರ ಇವೇ ತನಗೂ ಉದ್ಧಾರ ಮಾರ್ಗಗಳು ಎಂದು ತಿಳಿಯಬೇಕು. ಅಂತಹ ಸ್ತ್ರೀಯು ತಂತಾನೆ ವಿಶೇಷ ಪರಿಶ್ರಮವೇನೂ ಇಲ್ಲದೆಯೇ ಭಗವಂತನ ಕೃಪೆಯನ್ನು ಪಡೆಯುತ್ತಾಳೆ. ಅದು ಅವಳ ಮೇಲೆ ತಾನಾಗಿ ಸುರಿಯುತ್ತದೆ. ಭಗವಂತನು ಸದಾ ಕಾಲವೂ ಅವಳ ಪಕ್ಕದಲ್ಲೇ ಇರುತ್ತಾ ಕೃಪೆ ಮಾಡುತ್ತಿರುತ್ತಾನೆ. ತನ್ನ ಪುಣ್ಯದಿಂದ ಅವಳು ತನ್ನ ಪತಿಯ ಮೋಕ್ಷವನ್ನು ಖಚಿತಪಡಿಸುತ್ತಾಳೆ.

ಅಧ್ಯಾಯ ೫

# ಸ್ತ್ರೀಯರಿಗೆ ಶಿಕ್ಷಣ

ಪುರುಷರಿಗೂ ಸ್ತ್ರೀಯರಿಗೂ ಶಿಕ್ಷಣವು ಅತ್ಯವಶ್ಯಕ. ಆದರೆ ಮಹಿಳೆಯರ ಶಿಕ್ಷಣವು ಅವರ ವಿಶೇಷ ಅಗತ್ಯಗಳಿಗೆ ಅನುಗುಣವಾಗಿರಬೇಕು. ವಿದ್ಯಾವತಿಯರಾದ ಮಹಿಳೆಯರೇ ನಿಜವಾಗಿ ಇಡೀ ಜಗತ್ತಿನಲ್ಲಿ ಧರ್ಮಪ್ರಸಾರ ಮಾಡುವವರು. ಅವರಿಗೆ ಸೂಕ್ತವಾದ ವಿದ್ಯಾಭ್ಯಾಸ ಕೊಡಿಸಲು ತಂದೆ ತಾಯಿಗಳೂ ಸಹಕರಿಸಬೇಕು. ಕೆಲವು ವಿಚಾರಗಳಲ್ಲಿ ಮಹಿಳೆಯರಿಗೆ ಸ್ವಾತಂತ್ರ್ಯವಿರಬಾರದು. ಹಾಗೆ ಸ್ವಾತಂತ್ರ್ಯ ಕೊಡುವುದನ್ನು ನಾನು ಒಪ್ಪುವುದಿಲ್ಲ. ಅವರನ್ನು ಆದರ್ಶ ಮಹಿಳೆಯರನ್ನಾಗಿ ಮಾಡಬೇಕು; ಅವರ ಶಿಕ್ಷಣವೂ ಅದಕ್ಕೆ ತಕ್ಕ ಹಾಗೆಯೇ ರೂಪುಗೊಳ್ಳಬೇಕು.

ಕಡಿವಾಣವಿಲ್ಲದ ಸ್ವಾತಂತ್ರ್ಯವು ಧರ್ಮನಾಶಕವಾದದ್ದು; ಜೊತೆಗೆ ಸ್ತ್ರೀಯರು ಅದರಿಂದ ತಮಗೆ ತಾವೇ ಹಾನಿ ಮಾಡಿಕೊಳ್ಳುತ್ತಾರೆ. ವಿವೇಚನೆಯೇ ಇಲ್ಲದೆ ಜನರೊಂದಿಗೆ ಬೆರೆಯುವುದು ವಿನಾಶಕಾರಕವಾಗುತ್ತದೆ. ನಿಜ, ಹಿಂದೆ ವಿದ್ಯಾವತಿಯರಾದ ಮಹಿಳೆಯರಿದ್ದರು. ಆದರೆ ಅವರು ಎಂದೂ ತಮ್ಮ ಧರ್ಮವನ್ನು ತೊರೆಯಲಿಲ್ಲ, ಆತ್ಮ ಧರ್ಮದ ಗುರಿಯನ್ನು ಮರೆಯಲಿಲ್ಲ. ವಿದ್ಯೆ ಅಥವಾ ಶಿಕ್ಷಣವನ್ನು ವಿವೇಕ ಅಥವಾ ವಿವೇಚನೆಯ ತಳಹದಿಯ ಮೇಲೆ ಕಟ್ಟಬೇಕು. ಸುಲಭಾ, ಸಾವಿತ್ರಿ, ಅನಸೂಯೆ, ಗಾರ್ಗಿ, ನಳಾಯಿನಿ ಮತ್ತಿತರ ಸಚ್ಚಾರಿತ್ರ್ಯದ ಮಾದರಿಗಳಾದ ಆದರ್ಶ ಮಹಿಳೆಯರು, ಮೀರೆಯಂತಹ ಭಕ್ತೆಯರು, ಚೂಡಾಲೆಯಂತಹ ಯೋಗಿನಿಯರು ಭಾರತ ದೇಶದಲ್ಲಿ ಹುಟ್ಟಿದರು; ತಮ್ಮ ಧರ್ಮಾಚರಣೆಯಿಂದ ಧರ್ಮವನ್ನೇ ಬಲಪಡಿಸಿದರು. ಒಮ್ಮೆ ಸುಲಭಾ ಆತ್ಮವನ್ನು ಕುರಿತು ಪಾಂಡಿತ್ಯಪೂರ್ಣವಾಗಿ ಉಪನ್ಯಾಸ ಮಾಡುತ್ತಿದ್ದರೆ, ಜನಕ ಮಹಾರಾಜನೂ ನಿಬ್ಬೆರಗಾದನು. ಅಂತಹ ಶ್ರೇಷ್ಠರೂ ಪವಿತ್ರರೂ ಆದ ಮಹಿಳೆಯರ ಉದಾಹರಣೆಯ ಮೂಲಕ, ಭಕ್ತಿ ಜ್ಞಾನಗಳಿಂದ ಪ್ರೇರಿತವಾದ ಅವರ ಗುಣ ಶೀಲಗಳ ಮೂಲಕ ಇಂದಿಗೂ ಸರಳತೆ, ವಿನಯ ಮತ್ತು ಭಕ್ತಿಗಳು ಭಾರತ ದೇಶದ ಮಹಿಳೆಯರ ಹೃದಯಗಳಲ್ಲಿ ಶೋಭಿಸುತ್ತಿವೆ.

ಇಂದು ಮಹಿಳೆಯರು ಅವರಿಂದ ಸ್ಫೂರ್ತಿಯನ್ನು ಪಡೆಯಬೇಕು; ಅಂದಿನ ದಿನಗಳಲ್ಲಿ ಅವರು ಹೇಗೆ ಬದುಕಿದರೋ ಹಾಗೆಯೇ ಬದುಕಲು ಪ್ರಯತ್ನಿಸಬೇಕು.

ಭಾರತೀಯ ನಾರಿಯು ಎಂದೆಂದಿಗೂ ತನ್ನ ಕಣ್ಣೆದುರಿಗೆ ಧರ್ಮವನ್ನೂ ಅಧ್ಯಾತ್ಮ ಸಾಧನೆಯ ಪ್ರಗತಿಯನ್ನೂ ಮಾರ್ಗದರ್ಶಕ ಆದರ್ಶವಾಗಿಟ್ಟುಕೊಳ್ಳಬೇಕು. ಇಂದು ಜಗತ್ತಿನಲ್ಲಿ ಪ್ರಾಧಾನ್ಯವನ್ನು ಪಡೆದಿರುವ ಯಾವುದೇ ವಿಷಯದ ಮೇಲೆ ಅವಳು ಪ್ರಭುತ್ವವನ್ನು ಸಾಧಿಸಬಹುದು, ಆದರೆ ಆತ್ಮ ಕಲ್ಯಾಣವನ್ನು ಅವಳು ಮರೆಯ ಕೂಡದು. ಅಂತರ್ದೃಷ್ಟಿಯನ್ನು ಬೆಳೆಸುವ ವೇದಾಂತಾಧ್ಯಯನದಲ್ಲಿ ಅವಳು ಆಸಕ್ತಿ ಯನ್ನು ವಹಿಸಬೇಕು. ಈ ತರಬೇತಿಯಿಲ್ಲದ ಸ್ತ್ರೀಯು ಆಧಾರವಿಲ್ಲದ ಬಂಡೆಯ ಹಾಗೆ. ಸಮತೋಲನವೇ ಇಲ್ಲದ ವ್ಯಕ್ತಿಯಾಗಿ ತನಗೂ ಇತರರಿಗೂ ಗಂಡಾಂತರ. ವೇದಾಂತಾಧ್ಯಯನವನ್ನು ಮಾಡಿದ ಸುಲಭಾ ಮತ್ತು ಇತರರು ಬ್ರಹ್ಮವಾದಿನಿ ಯರಾಗಿ ಬಹು ಪ್ರಸಿದ್ಧಿ ಪಡೆದರು. ಭಾರತವು ಅಂತಹ ಅನೇಕ ಸುಪ್ರಸಿದ್ಧ ಸಂತೆಯರನ್ನು, ವಿದ್ಯಾವತಿಯರನ್ನು ರೂಪಿಸಿಕೊಟ್ಟಿದೆ. ಮಾರ್ಗದರ್ಶನವನ್ನೂ ಸ್ಫೂರ್ತಿಯನ್ನೂ ಪಡೆಯಲು ಎಷ್ಟೆಷ್ಟೋ ಜನ ಪಂಡಿತರು ಮತ್ತು ವಿದ್ವಾಂಸರು ಅಂತಹ ಮಹಿಳೆಯರ ಬಳಿಗೆ ಹೋಗುತ್ತಿದ್ದರು.

ಪ್ರಗತಿಯು ಯಾವುದರ ಮೇಲೆ ನಿಂತಿದೆ? ದೇಶದ, ಸಮುದಾಯದ ಮತ್ತು ಕುಟುಂಬದ ಪ್ರಗತಿಯು ಮಹಿಳೆಯರಿಗೆ ಸೂಕ್ತವಾದ ಶಿಕ್ಷಣ ಕೊಡುವುದರ ಮೇಲೆ ನಿಂತಿದೆ. ಸತ್ಯ ಸಾಕ್ಷಾತ್ಕಾರ ವಿಜ್ಞಾನವಾದ ಆತ್ಮವಿದ್ಯೆಯಲ್ಲಿ ಪ್ರಭುತ್ವ ಸಂಪಾದಿಸಿರುವ ಸ್ತ್ರೀಯರ ಮೂಲಕ ಮಾತ್ರವೇ ದೇಶವನ್ನು ಅದರ ಹಿಂದಿನ ಉಜ್ವಲ ಭವ್ಯ ಸ್ಥಿತಿಗೆ ಏರಿಸುವುದು ಸಾಧ್ಯವಾಗುತ್ತದೆ. ದೇಶದಲ್ಲಿ ಶಾಶ್ವತವಾದ ಸಮೃದ್ಧಿಯೂ ಶಾಂತಿಯೂ ನೆಲೆಸಬೇಕಾದ ಪಕ್ಷದಲ್ಲಿ, ನೀತಿಯುತ ನಡವಳಿಕೆ ಹಾಗೂ ಸದ್ಗು ಣಗಳಿಗೆ ಒತ್ತು ಕೊಡುವ ಒಂದು ಶಿಕ್ಷಣ ವ್ಯವಸ್ಥೆಯ ಮೂಲಕ ಮಹಿಳೆಯರಿಗೆ ತರಬೇತಿ ಕೊಡಬೇಕು. ಇಂದು ನೈತಿಕ ಮಟ್ಟದಲ್ಲಿ ಕುಸಿತ ಉಂಟಾಗಿದೆ, ಸಾಮಾಜಿಕ ಶಾಂತಿಯು ಗೈರುಹಾಜರಾಗಿದೆ. ಅದಕ್ಕೆ ಕಾರಣ ಮಹಿಳಾ ಶಿಕ್ಷಣದಲ್ಲಿ ಈ ಅಂಶ ವನ್ನು ಅಲಕ್ಷಿಸಿರುವುದೇ ಆಗಿದೆ. ಭೂಮಿ ಮತ್ತು ಆಕಾಶ ಇಂದಿಗೂ ಹಾಗೆಯೇ ಇವೆ; ಬದಲಾವಣೆ ಉಂಟಾಗಿರುವುದು ಶಿಕ್ಷಣದ ಆದರ್ಶದಲ್ಲಿ, ಧರ್ಮವಾಗಿದ್ದದ್ದು ಅಧರ್ಮವಾಗಿರುವುದರಲ್ಲಿ.

ಇಂದಿನ ಶಿಕ್ಷಣವನ್ನು ವಿದ್ಯೆ ಎಂದು ಕರೆಯುತ್ತಾರೆ, ಆದರೆ ಅದು ಹೆಸರಿಸುವ ಒಂದು ರೀತಿ ಅಷ್ಟೆ. ವಿದ್ಯಾವಂತರೆನಿಸಿಕೊಂಡವರು ನಡೆದುಕೊಳ್ಳುತ್ತಿರುವ ರೀತಿಯನ್ನೂ ಅವರ ವೈಯಕ್ತಿಕ ಗುಣಲಕ್ಷಣಗಳನ್ನೂ ಪರಿಗಣಿಸಿದಾಗ ವಿದ್ಯೆಯೆಂಬ ಹೆಸರಿಗೆ ಅದು ಯೋಗ್ಯವೆನಿಸುವುದಿಲ್ಲ. ಹೊರಗಿನ ಪರಿಸ್ಥಿತಿಗಳು ಏನೇ ಇರಲಿ, ವಿದ್ಯಾವಂತ ನಾದ ವ್ಯಕ್ತಿಯು ಆತ್ಮದ ಅಂತರಂಗಿಕವಾದ ಆನಂದವನ್ನು ಪಡೆಯಲು ಸಮರ್ಥ ನಾಗಿರಬೇಕು. ಅವನು ಜೀವನದ ಉದ್ದೇಶವನ್ನು ಗ್ರಹಿಸಿರಬೇಕು. ಸಾಕ್ಷಾತ್ಕಾರದ

ಸಾಧನೆ ಅವನಿಗೆ ತಿಳಿದಿರಬೇಕು. ಹಿಂದಿನ ದಿನಗಳಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯೂ ಪಡೆಯಲು ಬಯಸುತ್ತಿದ್ದ ಪದವಿ ಭಗವಂತನ ಕೃಪೆ ಮಾತ್ರವೇ. ನೈತಿಕತೆ, ಆತ್ಮಜ್ಞಾನ, ಉದಾತ್ತ ಪ್ರವೃತ್ತಿಗಳು, ಒಳ್ಳೆಯ ನಡವಳಿಕೆ, ಶುದ್ಧ ಅಭ್ಯಾಸಗಳು, ಇಂದ್ರಿಯಗಳ ನಿಯಂತ್ರಣ, ಮನೋನಿಗ್ರಹ ಮತ್ತು ದೈವಿಕ ಗುಣಗಳ ವಿಕಾಸ ಇವುಗಳಲ್ಲಿ ಪರಿಣತರಾದವರಿಗೆ ಆ ಪದವಿ ಪತ್ರವನ್ನು ನೀಡಲಾಗುತ್ತಿತ್ತು. ಇಂದಿನ ಪರಿಸ್ಥಿತಿಯೇ ಬೇರೆ. ಕೆಲವು ಪುಸ್ತಕಗಳನ್ನು ಉರು ಹಚ್ಚಿ ಪದವಿಗಳನ್ನು ಸಂಪಾದಿಸಿ ಬಿಡಬಹುದು. ಆಧುನಿಕ ಶಾಲಾ ಶಿಕ್ಷಣದ ಮೂಲಕ ವ್ಯಕ್ತಿಯು ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣವನ್ನು ಪಡೆಯಲು ಸಾಧ್ಯವೇ ಇಲ್ಲ.

ಪ್ರತಿಯೊಬ್ಬ ಮಹಿಳೆಗೂ ಉತ್ತಮವಾಗಿ ಯೋಜಿಸಿದ ರೀತಿಯಲ್ಲಿ ಶಿಕ್ಷಣವನ್ನು ಕೊಡಬೇಕು. ಆಕೆಗೆ ದೇಶದ ಸಮಸ್ಯೆಗಳ ಅರಿವಿರಬೇಕು. ತನ್ನ ವರಮಾನ ಮತ್ತು ಶಕ್ತಿಗಳ ಮಿತಿಯಲ್ಲಿ ದೇಶಕ್ಕೆ, ಸಮುದಾಯಕ್ಕೆ ಮತ್ತು ಕುಟುಂಬಕ್ಕೆ ಸೇವೆಯನ್ನೂ ಸಹಾಯವನ್ನೂ ಸಲ್ಲಿಸಬೇಕು. ಮಹಿಳೆಯರ ಸಂಸ್ಕೃತಿಯಿಲ್ಲದೆ ಯಾವುದೇ ರಾಷ್ಟ್ರವನ್ನು ನಿರ್ಮಿಸಲು ಸಾಧ್ಯವಿಲ್ಲ. ಬರಲಿರುವ ಪೀಳಿಗೆಯನ್ನು ಇಂದಿನ ತಾಯಿಯಂದಿರು ನಿರ್ಮಿಸುತ್ತಾರೆ. ಈ ಪೀಳಿಗೆಯಲ್ಲಿ ಅಧರ್ಮ ಮತ್ತು ಅನ್ಯಾಯಗಳು ಇಷ್ಟು ಹೆಚ್ಚಾಗಿರುವುದಕ್ಕೆ ಕಾರಣ ಅವರನ್ನು ಬೆಳೆಸಿದ ತಾಯಂದಿರು ಸಾಕಷ್ಟು ಜಾಗರೂಕರಾಗಿರದುದು; ಬುದ್ಧಿವಂತೆಯರಾಗಿರದುದು. ಆಯಿತು, ಕಳೆದುದು ಕಳೆದುಹೋಯಿತು. ಕೊನೆಯ ಪಕ್ಷ ಮುಂದಿನ ಪೀಳಿಗೆಯನ್ನು ರಕ್ಷಿಸಿಕೊಳ್ಳುವ ಸಲುವಾಗಿ ಈಗ ಮಹಿಳೆಯರಿಗೆ ಸಕಾಲಿಕ ಎಚ್ಚರಿಕೆ ಕೊಟ್ಟು ಪ್ರಾಚೀನರನ್ನು ಅವರು ತಮ್ಮ ಆದರ್ಶ ಮಾದರಿಯನ್ನಾಗಿ ಇರಿಸಿಕೊಳ್ಳುವಂತೆ ಕಲಿಸಬೇಕು.

ಹಿಂದೆ, ಇಂದು ಅಥವಾ ನಾಳೆ, ಎಲ್ಲ ಕಾಲಗಳಲ್ಲೂ ಸ್ತ್ರೀಯರೇ ಪ್ರಗತಿಯ ಬೆನ್ನು ಮೂಳೆ; ದೇಶದ ಹೃದಯ, ಜೀವದುಸಿರು. ಜೀವನ ಧರ್ಮದಲ್ಲಿ ಅವರು ಪವಿತ್ರತೆಯಿಂದ ಆವೇಶಿತವಾದ ಅತ್ಯಂತ ಪ್ರಮುಖವಾದ ಪಾತ್ರವನ್ನು ನಿರ್ವಹಿಸುವುದು ಅವಳ ಜೀವನಧ್ಯೇಯ. ಅವಳು ಮಕ್ಕಳಿಗೆ ನೈತಿಕ ಮತ್ತು ಆಧ್ಯಾತ್ಮಿಕ ತರಬೇತಿಯನ್ನು ನೀಡಬೇಕು. ತಾಯಿಯು ಧರ್ಮಪರಳಾದಾಗ, ಮಕ್ಕಳು ಅದರ ಲಾಭವನ್ನು ಪಡೆಯುತ್ತಾರೆ, ತಾವೂ ಹಾಗೆಯೇ ಧರ್ಮದಿಂದ ವರ್ತಿಸುತ್ತಾರೆ. ಅವಳು ನೀತಿ ನಿಯಮಗಳಲ್ಲಿ ಕುಶಲೆಯಾದರೆ, ಮಕ್ಕಳೂ ನೀತಿಯುತರಾಗಲು ಕಲಿಯುತ್ತವೆ. ಆದ್ದರಿಂದ ಒಂದು ದೇಶವು ಪುರೋಭಿವೃದ್ಧಿಯಾಗಬೇಕೋ ಅಥವಾ ಅವನತಿ ಹೊಂದಬೇಕೋ ಎನ್ನುವುದು ಅಲ್ಲಿನ ಮಹಿಳೆಯರು ಪಡೆಯುವ ಶಿಕ್ಷಣವು ನಿರ್ಧರಿಸುತ್ತದೆ. ಅವಳ ನಡವಳಿಕೆ ಮತ್ತು ಕಾರ್ಯ ಚಟುವಟಿಕೆಗಳು ಅತ್ಯಂತ ಮಹತ್ವಯುತವಾದವು.

ಇದರಲ್ಲಿ ಹಿರಿಯರ ಮತ್ತು ತಂದೆ ತಾಯಿಗಳ ಹೊಣೆಗಾರಿಕೆ ತುಂಬಾ ಹೆಚ್ಚು. ಇಂದಿನ ವಿದ್ಯಾರ್ಥಿಗಳನ್ನೇ ತೆಗೆದುಕೊಳ್ಳಿ. ಅವರಲ್ಲಿ ಸಂಸ್ಕೃತಿಯ ಕುರುಹು ಕೂಡ ಕಾಣಿಸುವುದಿಲ್ಲ. ಆತ್ಮ ಸಂಬಂಧವಾದ ವಿಚಾರಗಳು, ಆತ್ಮವನ್ನು ಕುರಿತ ಮಾತುಕತೆ ಅವರಲ್ಲಿ ನಗೆಯನ್ನು ಉಕ್ಕಿಸುತ್ತವೆ. ಮಾತಿನಲ್ಲಿ ಒಂದು ಗತ್ತು, ಬಟ್ಟೆ ಹೊಲಿಸಿಕೊಳ್ಳುವುದರ ಬಗೆಗೆ ಗುಲಾಮಗಿರಿ—ಇವು ಇಂದಿನ ಫ್ಯಾಷನ್ ಆಗಿವೆ. ಇದು ನಿಜವಾದ ಸಂಸ್ಕೃತಿಯಲ್ಲ. ಇಂದಿನ ವಿದ್ಯಾವಂತ ಮಹಿಳೆಯರು ಮನೆಯನ್ನು ನಿರ್ವಹಿಸಬೇಕಾದಾಗ ಅಸಹಾಯಕರಾಗುತ್ತಾರೆ. ಅವರಿಗೆ ಮನೆ ಯೆನ್ನುವುದು ಒಂದು ಹೋಟೆಲು; ಅಷ್ಟುಮಟ್ಟಿಗೆ ಅವರು ಅಡಿಗೆಯವರು ಮತ್ತು ಮನೆಗೆಲಸದವರನ್ನು ಅವಲಂಬಿಸಿರುತ್ತಾರೆ. ವಿದ್ಯಾವಂತ ಮಹಿಳೆಯು ಒಂದು ಬಣ್ಣದ ಬೊಂಬೆ, ಆಧುನಿಕವಾದ ಮನೆಗೆ ಅಲಂಕಾರ. ಅವಳು ಗಂಡನಿಗೆ ಒಂದು ತೊಂದರೆ, ವಿಕಲತೆ, ಅವನ ಕೊರಳಿಗೆ ಕಟ್ಟಿದ ಭಾರ. ಎಲ್ಲಾ ಬಗೆಯ ವಸ್ತುಗಳನ್ನು ಕೊಳ್ಳಬೇಕೆಂಬ ಕೊನೆಯೇ ಇಲ್ಲದ ಅವಳ ಆಸೆಯಿಂದ ಅವನು ಹಿಂಡಿ ಹಿಪ್ಪೆಯಾಗುತ್ತಾನೆ. ಮನೆಯ ನಿರ್ವಹಣೆಯಲ್ಲಿ ಅವಳು ಪಾಲುಗೊಳ್ಳುವುದಿಲ್ಲ. ಸೋಮಾರಿತನದಿಂದ ಯಾವುದೇ ವ್ಯಾಯಾಮವಿಲ್ಲದೆ ಸುಮ್ಮನೆ ತಿನ್ನುವುದು ಮತ್ತು ನಿದ್ರಿಸುವುದರಿಂದ ಅವಳು ರೋಗಗಳಿಗೆ ತುತ್ತಾಗಿ ಬಹುಬೇಗ ಮರಣದತ್ತ ಸಾಗುತ್ತಾಳೆ.

ಇಂದು ಸ್ತ್ರೀಯರ ಸ್ವಚ್ಛಂದ ವರ್ತನೆಯು ಜಗತ್ತನ್ನು ಧರ್ಮಕ್ಷಯದ ವಾತಾವರ ಣವು ಮುಸುಕುವಂತೆ ಮಾಡಿದೆ. ಸಚ್ಚಾರಿತ್ರವನ್ನೂ ಉದಾತ್ತ ಗುಣಗಳನ್ನೂ ಬೆಳೆಸಿಕೊಳ್ಳುವ ಅಗತ್ಯವನ್ನು ಅಲಕ್ಷಿಸಿ ಅವರು ಇಂದು ಚಂಚಲವಾದ ಸುಖ ಭೋಗಗಳ ಬೆನ್ನು ಹತ್ತಿ ತಮಗೇ ಕೇಡುಕು ಮಾಡಿಕೊಳ್ಳುತ್ತಿದ್ದಾರೆ. ಮಿಥ್ಯಾ ಸ್ವಾತಂತ್ರ್ಯ ದಿಂದ ಅವರು ಆಕರ್ಷಿತರಾಗಿದ್ದಾರೆ. ಅದು ಅವರ ಅಹಂಕಾರವನ್ನು ಪೋಷಿಸು ತ್ತದೆ. ಒಂದು ಉದ್ಯೋಗಕ್ಕೆ ಸೇರುವುದು, ಪದವಿಗಳನ್ನು ಸಂಪಾದಿಸುವುದು, ವಿವಕ್ಷೆ ವಿವೇಚನೆಗಳಿಲ್ಲದೆ ಮನಸ್ಸಿಗೆ ಬಂದವರ ಜೊತೆ ಸ್ವಚ್ಛಂದವಾಗಿ ಓಡಾಡುವುದು, ಹಿರಿಯರಿಗೆ ಗೌರವ ತೋರಿಸದಿರುವುದು, ಪಾಪ ಭಿತಿಯನ್ನು ತೊರೆಯುವುದು, ಸಜ್ಜನರ ಸಂತರ ಮಾತುಗಳನ್ನು ಅಲಕ್ಷಿಸುವುದು, ತನ್ನ ಇಷ್ಟಕ್ಕೆ ತಕ್ಕಂತೆ ಪತಿಯು ಕುಣಿಯುವಂತೆ ಬಲಾತ್ಕಾರಪಡಿಸುವುದು, ತನ್ನ ದೋಷಗಳಿಗೆ ಪಶ್ಚಾತ್ತಾಪಪಡದಿ ರುವುದು—ಇವು ವಿದ್ಯೆಯ ಕುರುಹುಗಳೇನು? ಅಲ್ಲ, ಅವು ಅವಿದ್ಯೆಯ ಕರಾಳ ರೂಪಗಳು. ನಿರಕ್ಷರ, ದುರಹಂಕಾರ ವರ್ತನೆಯ ಕುರುಹುಗಳು. ಅವು ವ್ಯಕ್ತಿಯನ್ನು ಕುರೂಪಿಯನ್ನಾಗಿ, ಹೇಸಿಗೆಯುಂಟು ಮಾಡುವವನನ್ನಾಗಿ ಮಾಡುತ್ತವೆ.

ಪತ್ನಿಯು ತನ್ನ ಪತಿಯ ಮನೆಯನ್ನು ಪವಿತ್ರವಾದ್ದೆಂದು ಭಾವಿಸಿದ ಪಕ್ಷದಲ್ಲಿ ಮನೆಯೇ ಅವಳಿಗೆ ಎಲ್ಲಾ ಬಗೆಯ ಕೌಶಲಗಳನ್ನೂ ಅರ್ಹತೆಗಳನ್ನೂ ನೀಡುತ್ತದೆ. ಅವಳಿಗೆ ಅಂತಹ ಮನೆ ಬೇರೆಲ್ಲೂ ದೊರಕುವುದಿಲ್ಲ. ಒಬ್ಬ ಸಂತ ಕವಿಯು ಮಹಿಳೆಗೆ ಅವಳ ಪತಿಗೃಹವೇ ದೇವಾಲಯ, ಅವಳ ಶಾಲೆ, ಅವಳ ಆಟದ ಬಯಲು, ಅವಳ ರಾಜಕೀಯ ರಂಗ, ಅವಳ ಯಜ್ಞಭೂಮಿ, ಅವಳ ಪರ್ಣ ಕುಟಿ ಎಂದು ಹಾಡಿದ್ದಾನೆ.

ಸುಶಿಕ್ಷಿತ ಮಹಿಳೆಯರು ತಮ್ಮ ಕೌಶಲ, ಅಭಿರುಚಿ, ಪ್ರವೃತ್ತಿ, ಬಯಕೆ, ಚಾರಿತ್ರ, ವಿದ್ಯೆಯ ಮಟ್ಟ, ಜೀವನ ವಿಧಾನ, ಶಿಸ್ತು ಸಂಯಮ ಅಥವಾ ವಿದ್ವತ್ತು ಇವುಗಳಿಗೆ ಅನುಗುಣವಾಗಿ ತಮ್ಮ ಸುತ್ತಲಿನ ಸಮುದಾಯಕ್ಕೆ ಅತ್ಯಂತ ಉಪಯುಕ್ತವಾದ ಸೇವೆಯನ್ನು ಮಾಡಬಲ್ಲರು. ಅವರು ತಮ್ಮ ತಂದೆ ತಾಯಿ, ಕುಟುಂಬಗಳ ಅಥವಾ ತಮ್ಮ ಗೌರವಕ್ಕೆ ಕುಂದುಂಟಾಗುವಂತೆ ವರ್ತಿಸಬಾರದು. ಒಳ್ಳೆಯ ಚಾರಿತ್ರ್ಯ ವಿಲ್ಲದ ಹೆಂಗಸು ಬದುಕಿದ್ದೂ ಸತ್ತ ಹಾಗೆಯೇ. ಆದ್ದರಿಂದ ಈ ಜಗತ್ತಿನಲ್ಲಿ ವ್ಯವ ಹರಿಸುವಾಗ ಸ್ತ್ರೀಯರು ಸದಾ ಜಾಗರೂಕರಾಗಿರಬೇಕು. ಕಾಡು ಹರಟೆಯನ್ನೂ ಸ್ವಚ್ಛಂದವಾಗಿ ಇತರರೊಂದಿಗೆ ಬೆರೆಯುವುದನ್ನೂ ನಿಲ್ಲಿಸಬೇಕು. ವಿವೇಚನೆ ಯಿರುವ ಸ್ತ್ರೀಯು ತನ್ನ ಪತಿಯ ಕೀರ್ತಿ ಗೌರವಗಳ ಕಾಂತಿಗೆ ಇನ್ನಷ್ಟು ಪೋಷಣೆ ಕೊಡುವಂತೆ ನಡೆದುಕೊಳ್ಳಬೇಕು, ಅದಕ್ಕೆ ಕಳಂಕ ತರುವಂತೆ ಎಂದೂ ಅಲ್ಲ. ಆದ್ದ ರಿಂದಲೆ, "ಸದ್ಗುಣವೇ ವಿದ್ಯಾವಂತನ ಲಕ್ಷಣ. ಅದೇ ವಿದ್ಯೆಗೆ ಬೆಲೆ ತರುವುದು," ಎಂದು ಹೇಳಲಾಗಿದೆ.

ಮಹಿಳೆಯರಿಗೆ ಶಿಕ್ಷಣ ಇರಬಾರದು ಎಂದಾಗಲಿ, ಅವರು ಸಮಾಜದಲ್ಲಿ ಬೆರೆಯ ಬಾರದು ಎಂದಾಗಲಿ ನಾನು ಹೇಳುತ್ತಿಲ್ಲ. ಅವರು ಎಲ್ಲೇ ಹೋಗಲಿ ಸದ್ಗುಣ ಗಳಿದ್ದರೆ, ಸದ್ಗುಣಗಳ ಜೊತೆಗೆ ಸತ್ಕಾರ್ಯಗಳು, ಸನ್ನಡವಳಿಕೆ ಇದ್ದರೆ ಸನಾತನ ಧರ್ಮ ಮತ್ತು ಸಾಧನೆಗಳಿಗೆ ಅವರು ಬದ್ಧರಾಗಿದ್ದರೆ ಆಗ ಅವರ ಶಿಕ್ಷಣ ಸಾರ್ಥಕ, ಅದರಿಂದ ಸಮಾಜಕ್ಕೆ ಲಾಭ. ಶಿಕ್ಷಣವಾಗಲಿ, ಸಮಾಜವಾಗಲಿ ತಮಗೆ ತಾವೇ ಕೆಟ್ಟವಲ್ಲ. ತಮ್ಮನ್ನು ಉಪಯೋಗಿಸುವ ವ್ಯಕ್ತಿಗಳ ಸ್ವಭಾವಕ್ಕೆ ತಕ್ಕಂತೆ ಪ್ರತಿಕ್ರಿಯಿಸಿ ಅವು ಒಳ್ಳೆಯ ಅಥವಾ ಕೆಟ್ಟ ಫಲಗಳನ್ನು ಕೊಡುತ್ತವೆ. ಬೆಕ್ಕು ತನ್ನ ಮರಿಯನ್ನು ಬಾಯಲ್ಲಿ ಕಚ್ಚಿಕೊಳ್ಳುತ್ತದೆ, ಅದೇ ಬಾಯಲ್ಲಿ ಇಲಿಯನ್ನು ಕಚ್ಚುತ್ತದೆ. ಎರಡು ಕಚ್ಚುವಿಕೆಯಲ್ಲಿ ಎಂತಹ ವ್ಯತ್ಯಾಸವಿದೆ! ಮರಿಯನ್ನು ಕಚ್ಚಿ ಮುದ್ದು ಮಾಡುತ್ತದೆ, ಇಲಿಯನ್ನು ಕಚ್ಚಿ ಕೊಲ್ಲುತ್ತದೆ. ಕಚ್ಚುವಿಕೆ ತಟಸ್ಥವಾದದ್ದು. ಅದು ಹೇಗೆ ವರ್ತಿಸಬೇಕೆಂಬುದನ್ನು ಮರಿಯೋ ಇಲ್ಲವೆ ಇಲಿಯೋ ಎನ್ನುವುದು ನಿರ್ಧರಿಸುತ್ತದೆ.

ಹಾಗೆಯೇ ಜ್ಞಾನವು ವಿವೇಚನೆಯನ್ನು ಬೆಳೆಸುತ್ತದೆ; ಸೇವಾ ಭಾವನೆಯ ಚಿಲುಮೆಗಳನ್ನು ಚಿಮ್ಮಿಸುತ್ತದೆ; ಸತ್ಯದ ಅನ್ವೇಷಣೆಗೆ ಪ್ರೇರಿಸುತ್ತದೆ; ಪರಸತ್ಯವನ್ನು ಅರಸಲು ಸಹಾಯ ಮಾಡುತ್ತದೆ ಮತ್ತು ಪರಮಹಂಸತ್ವವನ್ನು ಸಾಧಿಸಲು ದಾರಿ ಮಾಡಿ ಕೊಡುತ್ತದೆ ಕೂಡ. ಇದಕ್ಕೆ ಬದಲಾಗಿ ಅದು ಸುಳ್ಳು, ವಂಚನೆ, ಕ್ರೌರ್ಯ, ಅನ್ಯಾಯಗಳ ಬೇರುಗಳನ್ನು ಪೋಷಿಸಿ ಬಲಪಡಿಸಬಹುದು; ಮನುಷ್ಯನಿಗೆ ಹೊಸ ರೀತಿಯ ಮೋಸಗಾರಿಕೆಯನ್ನು ಕಲಿಸಿ ಅವನನ್ನು ನಾಶ ಮಾಡಬಹುದು; ಪ್ರೇಮವನ್ನು ವಿಷಪೂರಿತ ದ್ವೇಷವನ್ನಾಗಿ, ಸತ್ಯವನ್ನು ಮತ್ಸರದ ಆಧಾರವನ್ನಾಗಿ ಪರಿವರ್ತಿಸಿ ಬಿಡಬಹುದು.

ಆದ್ದರಿಂದ ಒಬ್ಬ ಸ್ತ್ರೀಯು ಯಾವುದೇ ವಿಷಯವನ್ನು ಕಲಿತು ಅದರಲ್ಲಿ ಪರಿಣತಿ ಸಂಪಾದಿಸಲಿ, ಯಾವುದೇ ಪದವಿಯನ್ನು ಪಡೆದಿರಲಿ, ಅವಳ ಅಥವಾ ಅವಳ ಪತಿಯ ಸ್ಥಾನಮಾನ ಯಾವುದೇ ಇರಲಿ, ಅವಳು ಈ ಸತ್ಯಗಳನ್ನು ಭದ್ರವಾಗಿ ಹಿಡಿದುಕೊಳ್ಳಬೇಕು. ನಿಜವಾದ ಸೌಂದರ್ಯವು ಸಚ್ಚಾರಿತ್ರ್ಯದಲ್ಲಿದೆ; ನೈತಿಕತೆ ಸ್ತ್ರೀಯ ಜೀವದುಸಿರಾಗಿದೆ; ಸತ್ಯವಂತಿಕೆ ಅವಳ ದೈನಂದಿನ ಕರ್ತವ್ಯವಾಗಿದೆ. ಅವಳು ತನ್ನ ಹೃದಯದಲ್ಲಿ ಭೀತಿಯ (ಪಾಪ ಭೀತಿ, ದೈವ ಪ್ರೀತಿ) ಸಸಿಗಳನ್ನು ನೆಟ್ಟು ವಿನಯದ ಸೌಂದರ್ಯವನ್ನು ಬೆಳೆಸಿಕೊಳ್ಳಬೇಕು. ಧಾರ್ಮಿಕ, ನೈತಿಕ ಮತ್ತು ದೈಹಿಕ ಕ್ಷೇತ್ರಗಳಲ್ಲಿ ಅವಳು ಅತ್ಯಂತ ಕಟ್ಟುನಿಟ್ಟಾಗಿ ಧರ್ಮ ನಿಯಮಗಳನ್ನು ಪಾಲಿಸಬೇಕು. ಅದೇ ಸಮಸ್ತ ವಿದ್ಯೆಯ ಸಾರ ಎಂದು ತಿಳಿದುಕೊಳ್ಳಬೇಕು. ಗೌರವವನ್ನು ಕಾಪಾಡಿಕೊಳ್ಳಲು ಅವಳು ಜೀವ ತೆರಲೂ ಸಿದ್ಧಳಾಗಿರಬೇಕು. ತನ್ನ ಶೀಲವನ್ನೂ ಪತಿ ಭಕ್ತಿಯನ್ನೂ ಉಳಿಸಿಕೊಂಡು ಬೆಳೆಸಬೇಕು. ಇದೇ ಸ್ತ್ರೀಯ ಮುಖ್ಯವಾದ ಧರ್ಮ. ಅವಳು ಸ್ತ್ರೀಯಾಗಿ ಹುಟ್ಟಿರುವುದೇ ಈ ಕಾರಣಕ್ಕಾಗಿ.

## ಅಧ್ಯಾಯ ೬

# ಧರ್ಮವನ್ನಾಚರಿಸಿ

ಧರ್ಮನಿಯಮಗಳು ಮನುಷ್ಯನ ಅನುಕೂಲತೆಗೆ ತಕ್ಕಂತೆ ಬದಲಾಗುವುದಿಲ್ಲ. ಧರ್ಮವು ಪರಿವರ್ತನರಹಿತ. ಅಂದು, ಇಂದು ಮತ್ತು ಮುಂದೆಯೂ ಅದು ಧರ್ಮವಾಗಿಯೇ ಉಳಿಯುತ್ತದೆ. ಬದಲಾದ ಕಾರಣಗಳಿಗೆ ತಕ್ಕಂತೆ ಆಚರಣೆಗಳು, ಅನ್ವಯಿಕ ಧರ್ಮದ ಕಟ್ಟಳೆಗಳು ಬದಲಾಗಬಹುದು. ಆದರೆ ಆಗಲೂ ಕೂಡ ಆ ಆಚರಣೆಗಳನ್ನು ಶಾಸ್ತ್ರಗಳ ಆಧಾರದಿಂದ ಪರೀಕ್ಷಿಸಬೇಕೇ ಹೊರತು ಅನುಕೂಲ ತೆಯ ಆಧಾರದಿಂದಲ್ಲ. ಅಂತಹ ಲೆಕ್ಕಾಚಾರವೇ ಸರಿಯಲ್ಲ. ಕಣ್ಣಿಗೆ ಕಾಣುವಂತಹ ಅನುಕೂಲಗಳನ್ನು ಕೊಡುವ ನಿಯಮಗಳನ್ನೇ ಶಾಸ್ತ್ರಗಳು ಯಾವಾಗಲೂ ಬೆಂಬಲಿ ಸುತ್ತವೆ ಎಂದು ಹೇಳಲು ಬರುವುದಿಲ್ಲ ಅಥವಾ ವೇದ ಮೊದಲಾದವು ಅಂತಹ ಕರ್ಮಗಳನ್ನೇ ಸೂಚಿಸುತ್ತವೆ ಎಂದು ನಿರೀಕ್ಷಿಸಲಾಗದು. ಧರ್ಮವನ್ನು ಆ ರೀತಿ ಯಾಗಿ ಪರೀಕ್ಷಿಸಲು ಸಾಧ್ಯವಿಲ್ಲ. ಅದಕ್ಕೆ ಪ್ರತ್ಯಕ್ಷ ಅಥವಾ ಪರೋಕ್ಷ ಸಮರ್ಥನೆ ಅಸಾಧ್ಯ. ಧರ್ಮವನ್ನು ಕೇವಲ ವೇದ ಮಂತ್ರಗಳಿಂದ ತಿಳಿದುಕೊಳ್ಳಬಹುದು. ಸ್ಪಷ್ಟ ಪ್ರಯೋಗಗಳಿಗೆ ಯಾವುದು ಅತೀತವಾಗಿದೆಯೋ ಅಂತಹ ಸತ್ಯಗಳನ್ನು ಮಾತ್ರವೆ ವೇದಗಳು ನಿರೂಪಿಸುತ್ತವೆ ಎಂದು ಮೀಮಾಂಸಕರು ಹೇಳುತ್ತಾರೆ.

ಫಲದ ಮೇಲೆ ಕಣ್ಣಿಟ್ಟು ಧರ್ಮವನ್ನು ಆಚರಿಸುವುದಾದ ಪಕ್ಷದಲ್ಲಿ, ಲಾಭವು ಸ್ಪಷ್ಟವಾಗಿಲ್ಲದಿದ್ದರೆ ಅಥವಾ ತಕ್ಷಣ ಆಗುವಂತಿಲ್ಲವಾದರೆ ಅದನ್ನು ಅಲಕ್ಷಿಸುವ ಸಂಭವವೂ ಉಂಟು. ಎಲ್ಲರಿಗೂ ಒಂದೇ ಉದ್ದೇಶವಿರುವುದಿಲ್ಲ. ಪ್ರತಿಯೊಬ್ಬನ ಮಟ್ಟವೂ ಬೇರೆ ಬೇರೆ. ಉದಾಹರಣೆಗೆ ಸ್ನಾನ, ಸಂಧ್ಯಾ, ಜಪ, ಧ್ಯಾನಗಳನ್ನು ಕುರಿತು ಪ್ರತಿಯೊಬ್ಬನಿಗೂ ಬೇರೆ ಬೇರೆಯೇ ಆದ ವಿಚಾರವಿರುತ್ತದೆ. ಕೆಲವರು ಸಂಜೆ ಹೊತ್ತು ಗಾಯತ್ರಿ ಕೈಬಿಟ್ಟು, ಅದರ ಬದಲಿಗೆ ವಿಷ್ಣು ಸಹಸ್ರನಾಮವನ್ನೋ ಶಿವ ಸಹಸ್ರನಾಮವನ್ನೋ ಪಠಿಸುತ್ತಾರೆ. "ಕಾಲೇ ಸಂಧ್ಯಾ ಸಮಾಚರೇತ್ (ಸಂಧ್ಯಾ ವಂದನೆಯನ್ನು ಸೂಕ್ತ ಕಾಲದಲ್ಲಿ ಮಾಡು)"; ಇದು ವಿಧಿ. ಹಾಗಿರುವಾಗ ಸಾಯಂಕಾಲದ ಸಂಧ್ಯಾವಂದನೆಯನ್ನು ಹಾಗೆ ವಜಾ ಮಾಡುವುದು ಧರ್ಮದ ಉಲ್ಲಂಘನೆಯಲ್ಲವೆ? ಹೀಗೆಯೇ ಪ್ರತಿಯೊಂದು ವರ್ಣಕ್ಕೂ ನಿರ್ದಿಷ್ಟವಾದ ವಿಧಿ ಗಳಿವೆ.

"ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣ ಕರ್ಮ ವಿಭಾಗಶಃ (ಗುಣ ಮತ್ತು ಚಟುವಟಿಕೆಗಳ ಆಧಾರದಿಂದ ವರ್ಗೀಕರಿಸಿ ನಾಲ್ಕು ವರ್ಣಗಳನ್ನು ನಾನು ಸೃಷ್ಟಿಸಿ ದ್ದೇನೆ)," ಎಂದು ಗೀತೆಯು ಹೇಳುತ್ತದೆ. ಅರ್ಥವು ಸ್ಪಷ್ಟವಾಗೇ ಇದೆ. ಆದರೆ ಬಗೆ ಬಗೆಯ ಪೊಳ್ಳು ವಾದಗಳು, ಶುಷ್ಕ ವಿಚಾರಗಳನ್ನು ಅವಲಂಬಿಸಿಕೊಂಡು ಅನೇಕ ಜನರು ತಮಗೆ ಯಾವುದು ಆಕರ್ಷಕವಾಗುತ್ತದೋ ಆ ಧರ್ಮವನ್ನು ಅನುಸರಿಸುತ್ತಾರೆ. ದೈವ ಭೀತಿಯಾಗಲಿ, ಪಾಪ ಭೀತಿಯಾಗಲಿ ಇಲ್ಲದೆ ವರ್ತಿಸುತ್ತಾ ಮುಗ್ಧರಾದ ಅಜ್ಞಾನಿಗಳಾದ ಸಾಮಾನ್ಯ ಜನರನ್ನೂ ತಪ್ಪುದಾರಿಗೆ ಎಳೆಯುತ್ತಾರೆ. ಆಗಾಗ ಭಗವಂತನು ಅವತರಿಸುವುದಕ್ಕೆ ಇದೇ ಕಾರಣ. ಸಜ್ಜನರನ್ನು ಉದ್ಧರಿಸಿ, ಧರ್ಮವನ್ನು ಮರಳಿ ಸ್ಥಾಪಿಸುವುದು ಅವನ ಉದ್ದೇಶ. ಇದೇ ಭಗವಂತನ ಅವತಾರಕ್ಕೆ ಕಾರಣ. ಇದನ್ನು ಭಗವದ್ಗೀತೆಯು ಮೊಳಗುವ ದನಿಯಲ್ಲಿ ಸಾರಿದೆ.

"ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ." ಇಲ್ಲಿ ಒಂದು ಅಂಶವನ್ನು ಸ್ಪಷ್ಟವಾಗಿ ಗ್ರಹಿಸಬೇಕು. ಧರ್ಮವು ನಾಶವಾದಾಗ ಮತ್ತು ಅಧಾರ್ಮಿಕ ಶಕ್ತಿಗಳು ತಲೆಯೆತ್ತಿದಾಗ ಭಗವಂತನು ಅವತರಿಸುತ್ತಾನೆ ಎಂದು ಗೀತೆಯನ್ನು ಓದುವ ಅನೇಕರು ಭಾವಿಸಿಕೊಳ್ಳುತ್ತಾರೆ. ಆದರೆ ಧರ್ಮವು ನಾಶವಾಗುತ್ತದೆ ಎಂದು ನಿರ್ಣಯಿಸಲು ಅಲ್ಲಿ ಯಾವ ಆಧಾರವೂ ಇಲ್ಲ. ಗೀತೆ ಹಾಗೆ ಹೇಳುವುದಿಲ್ಲ. ಅಲ್ಲಿ ಉಪಯೋಗಿಸಿರುವ ಪದ ಗ್ಲಾನಿ ಎಂಬುದು. ಅಂದರೆ ಧರ್ಮವು ವಿಪತ್ತಿನಲ್ಲಿದೆ ಎಂಬ ಸೂಚನೆಗಳು ಬಂದಾಗ, "ಅದನ್ನು ನಾಶವಾಗದಂತೆ ಕಾಪಾಡಲು ನಾನು ಬರುತ್ತೇನೆ." ಧರ್ಮವೇ ನಾಶವಾದ ಮೇಲೆ ತಾನು ಬಂದು ರಕ್ಷಿಸಿ ಪಾಲಿಸುವುದಾಗಿ ಅವನು ಹೇಳಲಿಲ್ಲ. ಜೀವ ಹೋದ ಮೇಲೆ ವೈದ್ಯನು ಬಂದು ಏನು ಪ್ರಯೋಜನ? ಹಾಗೆಯೇ ಮಾನವತೆಯ ಉಸಿರಾದ ಧರ್ಮವು ನಾಶವಾದ ಬಳಿಕ ಭವರೋಗ ವೈದ್ಯನ ಅವಶ್ಯಕತೆಯಿಲ್ಲ. ಭಗವಂತನು ಅಲ್ಲಿ ಏನನ್ನು ರಕ್ಷಿಸುವುದಿದೆ? ಆದ್ದರಿಂದಲೇ ಗ್ಲಾನಿ ಎಂಬ ಪದವನ್ನು ಪ್ರಯೋಗಿಸಿದೆ. ಅದು ನಾಶವನ್ನಲ್ಲ, ಅವನತಿಯನ್ನು ಸೂಚಿಸುತ್ತದೆ. ಧರ್ಮವು ದುರ್ಬಲವಾಗುವುದನ್ನು ಹೇಳುತ್ತದೆ. ಧರ್ಮವನ್ನು ರಕ್ಷಿಸುವುದು ಭಗವಂತನ ಕೆಲಸ, ಏಕೆಂದರೆ ಧರ್ಮವು ಜೀವಿಯ ಉಸಿರೇ ಆಗಿದೆ.

ಧರ್ಮವೆನ್ನುವುದು ಸಾಮಾನ್ಯವಾದ ವ್ಯವಹಾರವಲ್ಲ. ಧರ್ಮವನ್ನಾಚರಿಸದವನು ಮೃತನಾದ ಹಾಗೆಯೇ; ಆಚರಿಸುತ್ತಿದ್ದರೆ ಅವನು ದೈವೀ ಸ್ವಭಾವವುಳ್ಳವನು. ಒಳ್ಳೆಯ ಮಾತುಗಳನ್ನು ಹೇಳಿ, ಆ ಪಥವನ್ನು ಹಿಡಿದರೆ ಆಕರ್ಷಕವಾದ ಫಲಗಳು ದೊರಕುತ್ತವೆ ಎಂದು ಆಸೆಯನ್ನು ಒಡ್ಡಿ, ಆ ದಾರಿಯನ್ನು ಹಿಡಿಯದೆ ಹೋಗುವವರಿಗೆ ಆ ಉತ್ತಮ ಫಲಗಳು ಕೈತಪ್ಪಿಹೋಗುತ್ತವೆ ಎಂದು ಹೆದರಿಸಿ, ಕೊನೆಯದಾಗಿ

ಶಿಕ್ಷೆಯ ಭೀತಿಯನ್ನೂ ಒಡ್ಡಿ ಜನರನ್ನು ಧರ್ಮದ ದಾರಿಗೆ ತಿರುಗಿಸಬೇಕಾದ ಅಗತ್ಯವಿದೆ. ಇದೇ ಸಾಮ, ದಾನ, ಭೇದ ದಂಡಗಳೆಂಬ ಸಾಂಪ್ರದಾಯಿಕ ಕಾರ್ಯ ವಿಧಾನಗಳು. ಪ್ರಾಚೀನ ಕಾಲದಲ್ಲಿ ಜನರು ತಮ್ಮನ್ನು ಕತ್ತಿಯು ತಿವಿಯುತ್ತಿರುವಾಗಲೂ ಮರಣದ ದವಡೆಯೊಳಗಿರುವಾಗಲೂ ಧರ್ಮಾಚರಣೆಯನ್ನು ತೊರೆಯುತ್ತಿರಲಿಲ್ಲ. ಈಗಲಾದರೋ ಇತರರಿಂದ ಅತಿ ಸಣ್ಣ ಒತ್ತಡವೂ ಇಲ್ಲದೆ ಹೋದರೂ ಜನರು ಅಧರ್ಮಕ್ಕೆ ಜಾರಿ ಬೀಳುತ್ತಾರೆ. ಈಗ ಧರ್ಮವನ್ನು ಅನೇಕ ವಿಧಗಳಿಂದ ಗೊಂದಲಗೊಳಿಸುವಂತೆ ವಿವರಿಸಲಾಗುತ್ತದೆ. ನಿಜವಾಗಿ ಅತ್ಯಂತ ಕಟ್ಟುನಿಟ್ಟಾಗಿ ಧರ್ಮವನ್ನಾಚರಿಸುತ್ತಿರುವವರನ್ನು ಅವಹೇಳನ ಮಾಡಿ ಅವರಿಗೆ ಅಡ್ಡಿಯನ್ನುಂಟುಮಾಡಲಾಗುತ್ತದೆ. ಅವರು ಒಣ ಹುಲ್ಲಿಗಿಂತಲೂ ಕಡೆಯೆಂಬಂತೆ ಪರಿಗಣಿಸಲಾಗುತ್ತಿದೆ. ಧರ್ಮವನ್ನಾಚರಿಸುತ್ತಿರುವವರನ್ನು ಮೋಸಗಾರರು, ವಂಚಕರು, ಮಂದಬುದ್ಧಿಗಳು ಎಂದು ಹಣೆಪಟ್ಟಿ ಹಾಕಿ ಅಪಮಾನ ಪಡಿಸಲಾಗುತ್ತಿದೆ. ಇಂತಹ ಕಿಡಿಗೇಡಿಗಳಿಗೆ ಧರ್ಮವೆಂದರೇನೆಂದಾಗಲಿ, ಧರ್ಮದ ತತ್ತ್ವಗಳಾಗಲಿ ತಿಳಿದಿಲ್ಲ. ದುರ್ದೈವಿಗಳು! ಆ ಪದದ ಅರ್ಥವನ್ನು ಗ್ರಹಿಸುವ ಶಕ್ತಿ ಅವರಿಗಿಲ್ಲ. ಆ ಪದದ ಅಕ್ಷರಶಃ ಅರ್ಥವೂ ತಿಳಿಯದವರು ಹೇಗೆ ತಾನೆ ಅದರ ಸ್ವರೂಪವನ್ನು ತಿಳಿದುಕೊಳ್ಳಬಹುದು, ನೀವೇ ನಿರ್ಣಯಿಸಬಹುದು. ಹುಟ್ಟಿನಿಂದಲೇ ದೃಷ್ಟಿಯನ್ನು ಕಳೆದುಕೊಂಡಿರುವ ಕುರುಡನಿಗೆ ಸೂರ್ಯನಾಗಲಿ, ಸೂರ್ಯ ಕಿರಣಗಳಾಗಲಿ ಹೇಗೆ ಗೊತ್ತಾಗಲು ಸಾಧ್ಯ?

ಬಿಸಿಲು ಮೈಮೇಲೆ ಬಿದ್ದಾಗ ತಾಪವು ಅವನ ಅನುಭವಕ್ಕೆ ಬರುತ್ತದೇನೋ ನಿಜ. ಆದರೆ ಸೂರ್ಯನ ಸ್ವರೂಪ, ಆಕಾರ, ಉಜ್ವಲತೆ ಇತ್ಯಾದಿ ಯಾವ ವಿಚಾರವೂ ಅವನಿಗೆ ತಿಳಿದಿರುವುದಿಲ್ಲ. ಹಾಗೆಯೇ ಧರ್ಮದ ಪರಿಕಲ್ಪನೆಯೇ ಇಲ್ಲದ, ಧರ್ಮದಲ್ಲಿ ಶ್ರದ್ಧೆಯಿಲ್ಲದ ವ್ಯಕ್ತಿಯು ಅದರ ಆಚರಣೆಯಿಂದ ಒದಗುವ ಆನಂದವನ್ನು ಖಂಡಿತವಾಗಿ ಅರಿಯನು. ಅದು ಅವನ ಗ್ರಹಿಕೆಗೆ ಮೀರಿದ್ದಾಗಿರುತ್ತದೆ. ಅವನ ಮುಂದೆ ಧರ್ಮವನ್ನು ವಿವರಿಸುತ್ತಾ ಹೋಗುವುದು ಕಿವುಡನ ಮುಂದೆ ಶಂಖವನ್ನು ಊದುತ್ತಾ ನಿಂತ ಹಾಗೆ, ಅಷ್ಟೇ ವ್ಯರ್ಥವಾದ ಕೆಲಸ. ತನ್ನೆದುರಿಗೆ ನಿಂತಿರುವ ವ್ಯಕ್ತಿಯು ತುಟಿಗಳಿಗೆ ಶಂಖವನ್ನೂ ಒತ್ತಿ ಹಿಡಿದುಕೊಂಡಿರುವುದನ್ನು ಅವನು ನೋಡುವನು, ಆದರೆ ಅತಿ ಸಣ್ಣ ಶಬ್ದವನ್ನೂ ಅವನು ಆಲಿಸಲಾರನು. ಆದ್ದರಿಂದ ಒಬ್ಬ ವ್ಯಕ್ತಿಗೆ ಧರ್ಮವನ್ನು ಬೋಧಿಸುವಾಗ ಅಥವಾ ಅವನೆದುರಿಗೆ ಧರ್ಮವನ್ನು ಕೊಂಡಾಡುವಾಗ ಅವನಿಗೆ ಅದರಲ್ಲಿ ಶ್ರದ್ಧೆಯಿದೆಯೆ, ಆಚರಿಸಲು ಆಸಕ್ತಿಯಿದೆಯೆ ಎಂಬುದನ್ನು ಗಮನಿಸಬೇಕು. ಅದಿರುವವರೊಂದಿಗೆ ವ್ಯವಹರಿಸಬೇಕು, ಅವರನ್ನು ತಿದ್ದಲೆತ್ನಿಸಬೇಕು. ಆಮೇಲೆ ತಮ್ಮದೇ ಅನುಭವಗಳ ಪ್ರೇರಣೆ

ಯಿಂದ, ಅವುಗಳನ್ನು ಆಚರಿಸಿದ್ದರಿಂದ ಒದಗಿದ ಆನಂದದಿಂದ ಅಜ್ಞಾನಿಗಳ ಹೃದಯದಲ್ಲೂ ಧರ್ಮದ ಸಸಿ ಮೊಳೆತು ಬೆಳೆಯುತ್ತದೆ.

ಇಂದು ವೈದಿಕ ಮತ್ತು ಶಾಸ್ತ್ರ ಸಾಹಿತ್ಯದಲ್ಲೂ ಪ್ರಾಚೀನ ಗ್ರಂಥಗಳ ಅಧ್ಯಯನದಲ್ಲೂ ಮುಳುಗಿಹೋಗಿರುವ ಅನೇಕ ವಿದ್ಯಾವಂತ ಜನರು, ತಾವು ತಜ್ಞತೆ ಸಂಪಾದಿಸಿ ಕೊಂಡಿರುವ ಗ್ರಂಥಗಳಲ್ಲಿ ನಂಬಿಕೆಯನ್ನು ಕಳೆದುಕೊಂಡು ಬಿಟ್ಟಿದ್ದಾರೆ. ಅವರು ಧರ್ಮವನ್ನು ಗಟ್ಟಿಯಾಗಿ ಹಿಡಿಯಲು ಹೆದರುತ್ತಾರೆ. ಏಕೆಂದರೆ ನಾಸ್ತಿಕರಾದವರು ತಮ್ಮನ್ನು ನೋಡಿ ನಗಬಹುದೆಂದು ಇವರಿಗೆ ಹೆದರಿಕೆ! ಟೀಕಾಕಾರರ ಕುಟಿಲ ವಾದಗಳಿಗೆ ಅವರು ಬಲಿಯಾಗಿ, ಅತ್ಯಲ್ಪ ಪ್ರಯೋಜನಕ್ಕಾಗಿ ತಮ್ಮ ಪರಂಪರೆ ಯನ್ನು ಮಾರಿಬಿಟ್ಟಿದ್ದಾರೆ. ಅವರು ಏಕಾದಶಿ ಉಪವಾಸವನ್ನು ಆರೋಗ್ಯವನ್ನು ಸರಿಯಾಗಿಟ್ಟುಕೊಳ್ಳುವ ಸಾಧನ ಎಂದೂ ಕರ್ಪೂರದಾರತಿಯನ್ನು ಆಸ್ತಮಾ ರೋಗಿಗಳಿಗೆ ಚಿಕಿತ್ಸೆ ಎಂದೂ ಪ್ರಾಣಾಯಾಮವನ್ನು ಜೀರ್ಣಕ್ರಮಕ್ಕೆ ಸಹಾಯಕ ಸಾಧನವೆಂದೂ ತೀರ್ಥಯಾತ್ರೆಗಳನ್ನು ಶೈಕ್ಷಣಿಕ ಪ್ರವಾಸಗಳೆಂದೂ ದಾನವನ್ನು ಸ್ವಪ್ರಚಾರಕ್ಕೆ ಸಾಧನವೆಂದೂ ವ್ಯಾಖ್ಯಾನಿಸುತ್ತಾರೆ. ಹೀಗೆ ಧರ್ಮ ಆದೇಶಗಳ ಅರ್ಥವನ್ನು ವಿಕೃತಗೊಳಿಸಿ ಅಪವಿತ್ರಗೊಳಿಸುತ್ತಾರೆ. ಇಂಥವರು ಜನತೆಗೆ ಮೋಸ ಮಾಡುತ್ತಾರೆ. ಧರ್ಮ ತತ್ತ್ವಗಳನ್ನು ತಿಳಿದುಕೊಳ್ಳದ ಅಥವಾ ಅವಕ್ಕೆ ಬೆಲೆ ಕೊಡದ ವ್ಯಕ್ತಿಗಳು ಅನಾಗರಿಕರು, ಬರ್ಬರರು. ಮನುಧರ್ಮವನ್ನು ಓದುವುದ ರಿಂದ ಅವರು ಕಲಿತುಕೊಳ್ಳುವುದು ತುಂಬಾ ಇದೆ.

ಆರ್ಷಂ ಧರ್ಮೋಪದೇಶಂ ಚ
ವೇದ ಶಾಸ್ತ್ರ ಅವಿರೋಧನಾ ।
ಯಸ್ತರ್ಕೇ ನಾನು ಸಂಧತ್ತೇ
ಸಧರ್ಮಂ ವೇದ ನೇತರಃ ॥

ಧರ್ಮವನ್ನು ತಿಳಿದುಕೊಳ್ಳಲು ಬಯಸುವವನು ವೇದಕ್ಕೂ ಶಾಸ್ತ್ರಕ್ಕೂ ವಿರುದ್ಧವಲ್ಲದ ತರ್ಕವನ್ನು ಅನುಸರಿಸುವುದರಿಂದ ಮಾತ್ರ ಅದನ್ನು ತಿಳಿದುಕೊಳ್ಳಬಲ್ಲನು.

ವೇದಕ್ಕೆ ವಿರುದ್ಧವಾದ ಯಾವುದೇ ನಿರ್ಣಯವು ತರ್ಕಸಮ್ಮತವಾಗಿರುವುದಿಲ್ಲ. ಒಣ ತರ್ಕದಿಂದಲೂ ಪ್ರಯೋಜನವಿಲ್ಲ. ವೇದಾದಿಗಳ ಅಧ್ಯಯನ ಮಾಡ ಬಯಸುವವರಿಗೆ ಮನುವು ಅದನ್ನು ವಿಧಿಸುವುದಿಲ್ಲ. ಆದರೂ ಈ ತಾರ್ಕಿಕ

ಬದ್ಧರಾಗಿ ತಾವು ಅಧರ್ಮದಲ್ಲಿ ನಡೆಯುತ್ತಾ ತಮ್ಮ ಜೊತೆಗೆ ಇತರರನ್ನೂ ತಪ್ಪು ಹಾದಿಗೆ ಎಳೆಯುತ್ತಾರೆ. ಆದ್ದರಿಂದಲೇ ವೇದವ್ಯಾಸರು ಬಹಳ ಹಿಂದೆಯೇ ಹೀಗೆ ಘೋಷಿಸಿದರು:

> ನಯಕ್ಷ್ಯಂತಿ ನ ಹೋಷ್ಯಂತಿ ಹೇತುವಾದ ವಿಮೋಹಿತಾಃ ।
> ನಿರ್ಮೋಕ್ಷ್ಯಹಂ ಕರಿಷ್ಯಂತಿ ಹೇತುವಾದ ವಿಮೋಹಿತಾಃ ॥

> ಕಾರಣವಾದವನ್ನೂ ತರ್ಕವನ್ನೂ ಅನುಸರಿಸುತ್ತಾ ಕಾರಣ ಕಾರ್ಯ ಸಂಬಂಧವನ್ನರಸುವವರು ಅಗ್ನಿಯಲ್ಲಿ ಹೋಮ ಮಾಡುವುದಿಲ್ಲ, ಕೆಳಮಟ್ಟದ, ಗೌರವಹೀನವಾದ ಕಾರ್ಯಗಳಲ್ಲಿ ತೊಡಗುತ್ತಾರೆ.

ವೇದವ್ಯಾಸರು ಮಹಾಭಾರತದ ಅರಣ್ಯ ಪರ್ವದಲ್ಲಿ ಕಲಿಯುಗದಲ್ಲಿ ನಿರೀಕ್ಷಿಸ ಬಹುದಾದ ಪರಿಸ್ಥಿತಿಗಳನ್ನು ವರ್ಣಿಸುತ್ತಾ ಈ ಮಾತನ್ನು ಹೇಳಿದ್ದಾರೆ: "ಧರ್ಮದ ದಾರಿಯನ್ನು ಅನುಸರಿಸುತ್ತಿರುವುದರಿಂದಲೇ ಸೂರ್ಯ ಚಂದ್ರರು ಸ್ವಲ್ಪವೂ ತಪ್ಪದೆ ತಮ್ಮ ಕಕ್ಷೆಯಲ್ಲಿ ಸುತ್ತುತ್ತಿದ್ದಾರೆ. ಸಕಲ ದೈವೀ ಶಕ್ತಿಗಳು ತಂತಮ್ಮ ವಿವಿಧ ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳಿಗೆ ಬದ್ಧರಾಗುವಂತೆ ಕರೆ ಕೊಡುವುದು ಧರ್ಮವೇ. ಧರ್ಮವೊಂದೇ ಪಂಚಭೂತಗಳೂ ತಮ್ಮ ಸ್ವರೂಪದ ತತ್ತ್ವಗಳಿಗೆ ಒಳಗಾಗಿರುವಂತೆ ಮಾಡಲು ಸಮರ್ಥವಾಗಿರುವುದು."

ಧರ್ಮದಿಂದ ಸಾಧ್ಯವಿರುವ ಅತಿ ಹೆಚ್ಚು ಲಾಭವನ್ನು ಪಡೆಯಬೇಕು. ಅದನ್ನು ಅನುಸರಿಸುವಾಗ ತನಗಾಗಲಿ ಇತರರಿಗಾಗಲಿ ಯಾವುದೇ ಹಾನಿಯಾಗದಂತೆ ನೋಡಿಕೊಳ್ಳಬೇಕು. ಧರ್ಮವು ಕೊಡುವ ಶಾಂತಿ ಮತ್ತು ಸಂತೋಷಗಳಿಗೆ ಉತ್ತಮವಾದ ಉದಾಹರಣೆಯಾಗಿ, ಅದರ ಮಹಿಮೆಯನ್ನು ನೀವು ಪ್ರಸಾರ ಮಾಡಬೇಕು. ಒಣ ತರ್ಕದ ಬೆನ್ನು ಹತ್ತಬೇಡಿ. ನಾಸ್ತಿಕತೆಯಿಂದಲೂ ಪೂರ್ವ ಗ್ರಹದಿಂದಲೂ ಗೊಂದಲಗೊಳ್ಳಬೇಡಿ. ಇತರರು ಏನನ್ನು ನಂಬುತ್ತಾರೆ ಅಥವಾ ಮಾಡುತ್ತಾರೆ, ಅದರಲ್ಲಿ ಆಸಕ್ತಿ ವಹಿಸಬೇಡಿ; ಅವರನ್ನು ಸುಧಾರಿಸಲು, ಅವರ ಕ್ರಮವನ್ನು ತಿದ್ದಲು ಪ್ರಯತ್ನಿಸಬೇಡಿ. ನಿಮ್ಮ ಮೂಲ ಸ್ವರೂಪವಾದ, ಸತ್ಯವಾದ ಆತ್ಮದಲ್ಲಿ ನಂಬಿಕೆಯಿರಿಸಿಕೊಳ್ಳಿರಿ. ನಿಮ್ಮ ನಡವಳಿಕೆಯನ್ನು ಆ ಆಧಾರದಿಂದ ಪರೀ ಕ್ಷಿಸಿಕೊಳ್ಳಿ. ಅದು ಆತ್ಮಸಾಕ್ಷಾತ್ಕಾರವನ್ನು ಪಡೆಯಲು ತಡೆಯನ್ನು ಒಡ್ಡುತ್ತಿದೆಯೆ ಅಥವಾ ಇಲ್ಲವೆ ಎಂದು ನೋಡಿ. ಆ ನಂಬಿಕೆ, ಆ ಪರೀಕ್ಷೆಗಳ ಬೆಳಕಿನಲ್ಲಿ ನಿಮ್ಮ

ದಿನನಿತ್ಯದ ಕರ್ತವ್ಯಗಳನ್ನೂ ಆಚರಣೆಗಳನ್ನೂ ಮಾಡುತ್ತಾ ಹೋಗಿ. ಆಗ ನೀವು ಎಂದೂ ಜಾರುವುದಿಲ್ಲ, ಅಪಾರವಾದ ಆನಂದವೂ ನಿಮಗೆ ದೊರಕುತ್ತದೆ.

'ಉದ್ಯೋಗಂ ಪುರಷ ಲಕ್ಷಣಂ' ಅಥವಾ 'ಕರ್ಮಂ ಪುರುಷ ಲಕ್ಷಣಂ' ಎಂಬಂತಹ ಕೆಲವು ಪ್ರಾಪಂಚಿಕ ಸೂಕ್ತಿಗಳಿವೆ. ಯಾವುದಾದರೂ ಒಂದು ವೃತ್ತಿಯಲ್ಲಿ ನಿರತನಾಗಿರುವುದೇ ಪುರುಷನ ಅಥವಾ ಪೌರುಷದ ಕುರುಹು ಇತ್ಯಾದಿ. ಆದರೆ ನಿಜವಾದ ಸೂಕ್ತಿ 'ಧರ್ಮಂ ಪುರುಷ ಲಕ್ಷಣಂ' ಎಂದಾಗಬೇಕು. ಧರ್ಮವನ್ನು ಪಾಲಿಸುವುದೇ ಪುರುಷತ್ವದ ಕುರುಹು. ಪ್ರತಿಯೊಬ್ಬನೂ ಧರ್ಮ ಕರ್ಮದಲ್ಲಿ ಅಂದರೆ ಧರ್ಮವು ತುಂಬಿರುವ ಕಾರ್ಯದಲ್ಲಿ ನಿರತನಾಗಬೇಕು. ಧರ್ಮ, ಅರ್ಥ, ಕಾಮ, ಮೋಕ್ಷ, ಈ ಪುರುಷಾರ್ಥಗಳನ್ನು ಕಾರ್ಯರೂಪದಲ್ಲಿ ತರಬೇಕು.

ಪತಿವ್ರತಾ ಧರ್ಮವು ಸ್ತ್ರೀಯರಿಗೆ ಹೇಗೋ ಪುರುಷರಿಗೆ ಬ್ರಹ್ಮಚರ್ಯವು ಹಾಗೆ. ಸ್ತ್ರೀಯು ಒಬ್ಬನೇ ಒಬ್ಬ ವ್ಯಕ್ತಿಯನ್ನು ತನ್ನ ಪತಿ ಮತ್ತು ಒಡೆಯನೆಂದು ಪರಿಗಣಿಸಬೇಕು. ಹಾಗೆಯೇ ಪುರುಷನು ಒಬ್ಬ ಸ್ತ್ರೀಗೆ, ಒಬ್ಬಳಿಗೆ ಮಾತ್ರವೇ ನಿಷ್ಠನಾಗಬೇಕು. ಅವಳನ್ನು ತನ್ನ ಪತ್ನಿಯಾಗಿ, ಬಾಳಸಂಗಾತಿಯಾಗಿ ಭಾವಿಸಬೇಕು. ಅವಳು ಪತಿಯನ್ನು ದೇವರೆಂದು ಪರಿಗಣಿಸಿ ಪೂಜಿಸಬೇಕು. ಅವನ ಬಯಕೆಗಳನ್ನು ಪೂರೈಸುತ್ತಾ ಪತಿವ್ರತೆಯಾಗಿ ತನ್ನ ಕರ್ತವ್ಯವನ್ನು ನಿರ್ವಹಿಸಬೇಕು. ಹಾಗೆಯೇ ಪುರುಷನು ತನ್ನ ಪತ್ನಿಯನ್ನು ಮನೆಯೊಡತಿಯನ್ನಾಗಿ ಪರಿಗಣಿಸಿ, ಅವಳ ಇಚ್ಛಾನುಸಾರ ವರ್ತಿಸಬೇಕು. ಅವಳು ಗೃಹಲಕ್ಷ್ಮಿ. ಆಗಲೇ ಅವನು ಪುರುಷ ಎನಿಸಿಕೊಳ್ಳುತ್ತಾನೆ. ಹೆಸರು ಮತ್ತು ಕೀರ್ತಿ, ಗೌರವ ಅಗೌರವ, ಒಳಿತು ಕೆಡುಕು, ಸಜ್ಜನಿಕೆ ಕುಟಿಲತೆ—ಇವೆಲ್ಲ ಪುರುಷರಿಗೂ ಸ್ತ್ರೀಯರಿಗೂ ಸಮಾನವಾದವು. ಮಹಿಳೆಯರು ಮಾತ್ರವೇ ನಿಯಮಗಳಿಗೆ ಬದ್ಧರು, ಪುರುಷರು ಸ್ವತಂತ್ರರು ಎಂಬ ವಿಚಾರವೇ ತಪ್ಪು. ಇಬ್ಬರೂ ಧರ್ಮನಿಯಮಗಳಿಗೆ ಸಮಾನವಾಗಿ ಬದ್ಧರು. ಮೇಲೆ ಹೇಳಿದ ನಾಲ್ಕು ಜೊತೆ ಗುಣಗಳಲ್ಲಿ ವಿವೇಚನೆಯಿಲ್ಲದೆ ವರ್ತಿಸಿದರೆ ಇಬ್ಬರೂ ಅಧರ್ಮಕ್ಕೆ ಬೀಳುತ್ತಾರೆ. ಮಹಿಳೆಯರಂತೆಯೇ ಪುರುಷರೂ ಕೆಲವೊಂದು ವಿಚಾರಗಳಲ್ಲಿ ಬದ್ಧರಾಗಿರುತ್ತಾರೆ. ಕೆಲವು ಕೆಲಸಗಳನ್ನು ಮಾಡಲು ಪುರುಷರಿಗೆ ಹಕ್ಕಿಲ್ಲ. ಪತಿ ಪತ್ನಿಯರ ನಡುವೆ ಒಪ್ಪಂದ ಮಾಡಿಕೊಳ್ಳಬೇಕಾದ ಎಷ್ಟೋ ಮುಖ್ಯವಾದ ಅಂಶಗಳಿವೆ.

ಅಧ್ಯಾಯ ೭

# ಮಂತ್ರಗಳ ಮಾತೆ ಗಾಯತ್ರಿ

ಗೋಚರವಾಗುವುದೆಲ್ಲವೂ ಗಾಯತ್ರಿಯಾಗಿ ಪ್ರಕಾಶಿಸುತ್ತದೆ. ಏಕೆಂದರೆ ವಾಕ್ಕೇ ಗಾಯತ್ರಿ ಮತ್ತು ಸಮಸ್ತ ಭೂತಗಳೂ ವಾಕ್. ಅವು ವಾಕ್ಕಿನಿಂದಲೇ ಸೂಚಿತವಾಗುತ್ತವೆ, ವಾಕ್ಕಿನಲ್ಲೇ ಲೀನವಾಗುತ್ತವೆ. ವಾಕ್ ಎಂದರೆ ಮಾತು ಅಥವಾ ಶಬ್ದ. ಅವುಗಳನ್ನು ವರ್ಣಿಸುವುದು ವಾಕ್, ಅವುಗಳನ್ನು ಅವು ಎಂದು ಘೋಷಿಸುವುದು ವಾಕ್, ಅವುಗಳನ್ನು ಗುರುತಿಸುವುದೂ ವಾಕ್. ಸಮಸ್ತ ವಸ್ತುಗಳೂ ಸೇರಿ ಈ ಜಗತ್ತು ಅಥವಾ ಪೃಥ್ವಿ. ಅದನ್ನು ಮೀರಿ ಬೇರೆ ಯಾವುದೂ ಹೋಗಲಾರದು. ಜಗತ್ತೇ ಮನುಷ್ಯನ ದೇಹದಲ್ಲಿದೆ; ಅವನು ತನ್ನ ದೇಹದಿಂದ ಆಚೆಗೆ ನೆಗೆದು ಹೋಗಿಬಿಡಲಾರನು. ಅವನನ್ನು ಪೋಷಿಸುತ್ತಿರುವ ಪ್ರಾಣವು ಹೃದಯದ ಹೊರಗೆ ಅದಕ್ಕೆ ಅತೀತವಾಗಿ ಹೋಗಲಾರದು.

ಗಾಯತ್ರಿಗೆ ನಾಲ್ಕು ಪಾದಗಳು, ಆರು ಬಗೆಗಳು ಇವೆ. ಅವು ವಾಕ್, ಭೂತ, ಪೃಥ್ವಿ, ಶರೀರ, ಪ್ರಾಣ ಮತ್ತು ಹೃದಯ. ಗಾಯತ್ರಿಯಿಂದ ಶೋಭಿತನಾದ ಮನುಷ್ಯನು ನಿಜವಾಗಿ ಬಹು ಮೇಲು ಮಟ್ಟದವನು, ಪ್ರಶಂಸಾರ್ಹನು, ಪವಿತ್ರನು. ಈ ಸಮಸ್ತ ವಸ್ತು ವೈವಿಧ್ಯವೂ ಭಗವಂತನ ದೇಹದ ಒಂದು ತುಣುಕು ಮಾತ್ರ. ಭೂತಗಳ ಸಂಖ್ಯೆ ಮತ್ತು ಸ್ವರೂಪ, ಪ್ರಮಾಣ ಮತ್ತು ಅರ್ಥ ಇವು ಅರಿವಿಗೆ ಮೀರಿದುವಾಗಿವೆ. ಆದರೂ ಇವೆಲ್ಲ ಸೇರಿ ಅವನ ಭವ್ಯ ಸ್ವರೂಪದ ಒಂದು ಪಾದ ಮಾತ್ರ. ಉಳಿದ ಮೂರು ಪಾದಗಳು ಅವನ ಶಾಂತಿಯುಕ್ತ ಅಮೃತ ದಿವ್ಯ ಸ್ವರೂಪವಾಗಿವೆ.

ಆ ಪರಮ ಶಾಂತಿಯುಕ್ತವಾದ ದಿವ್ಯ ಸ್ವರೂಪದ ರಹಸ್ಯವನ್ನು ಗ್ರಹಿಸುವುದು ಅಸಾಧ್ಯವಾಗಿದೆ. ಗಾಯತ್ರಿಯು ಸೂಚಿಸುವ ಈ ಪುರುಷನನ್ನು ಬ್ರಹ್ಮನ್ ಎಂದು ಕರೆಯಲಾಗುತ್ತದೆ. ಅವನು ಮನುಷ್ಯನ ಗ್ರಹಿಕೆಗೆ ನಿಲುಕದ ಆಕಾಶ. ಅವನನ್ನು ಬಹಿರ್ಧಾ ಪುರುಷಾಕಾಶಃ ಎಂದು ಹೇಳುತ್ತಾರೆ. ಇದು ಜಾಗ್ರತ ಸ್ಥಿತಿ. ಆ ಪುರುಷನೇ ಮಾನವನ ದೇಹದೊಳಗಡೆ ಆಕಾಶವಾಗಿದ್ದಾನೆ. ಅವನು ಅಂತಃಪುರುಷಾಕಾಶಃ ಆಗಿದ್ದಾನೆ. ಇದು ಸ್ವಪ್ನ ಸ್ಥಿತಿ. ಅವನು ಮಾನವನ ಹೃದಯದೊಳಗಿರುವ ಆಕಾಶವಾಗಿದ್ದಾನೆ. ಅದನ್ನು ತುಂಬಿಕೊಂಡು ಅದನ್ನು ಪರಿಪೂರ್ಣವಾಗಿಸಿದ್ದಾನೆ. ಅದು ಸುಷುಪ್ತಿಯ (ಗಾಢ ನಿದ್ರೆ) ಸ್ಥಿತಿ. ಈ ಸತ್ಯವನ್ನು ಯಾರು ತಿಳಿಯುವರೋ

ಅವರು ಪೂಜ್ಯತೆಯನ್ನೂ ಬ್ರಹ್ಮವನ್ನೂ ಪಡೆಯುತ್ತಾರೆ. ಅಂದರೆ ಜಾಗೃತ್, ಸ್ವಪ್ನ, ಸುಷುಪ್ತಿ ಈ ಮೂರು ಅವಸ್ಥೆಗಳನ್ನು ತಿಳಿದುಕೊಂಡವನೇ ಬ್ರಹ್ಮನು. ಈ ಆತ್ಮ ಸ್ವರೂಪದ ಪುರುಷ ಎಂಬ ಹೆಸರನ್ನು ಹೊತ್ತ ಮನುಷ್ಯನು ಅಹಂಕಾರದ ಮೂಟೆಯಾಗಿ, ತತ್ಪರಿಣಾಮವಾದ ಅಶುದ್ಧಿಗಳಿಗೆಲ್ಲ ಆಗರವಾಗಿ, ಅನ್ಯಾಯ, ಅಕ್ರಮಗಳಲ್ಲಿ ನಿರತನಾಗಿರುವುದು ಎಷ್ಟು ಹಾಸ್ಯಾಸ್ಪದ! ಎಂಥ ವಂಚನೆ! ಎಷ್ಟು ಅಪಾಯಕಾರಿ! ಕೊನೆಯ ಪಕ್ಷ ಇಂದಿಗೂ ಪುರುಷನೆಂಬ ಹೆಸರಿನಿಂದ ಕರೆಯಲ್ಪಡುವ ಮನುಷ್ಯನು ಆ ಮಹಿಮಾ ಸ್ಥಿತಿಯ ಕಣ ಮಾತ್ರವನ್ನಾದರೂ ಪಡೆಯಲು ಅನುವು ಮಾಡಿಕೊಡುವ ದಾರಿಯನ್ನು ಹಿಡಿಯಬೇಕು.

ಇನ್ನು ಪುರುಷ ಧರ್ಮದ ವಿಷಯವಾಗಿ ಹೇಳುವುದೇನು? ಆದಿಪುರುಷನ ಅನಂತ ವೈಭವದ ಕಣ ಮಾತ್ರವನ್ನಾದರೂ ಸಂಪಾದಿಸಲು ಗಮನ ಕೊಡದ ಪುರುಷರು ಪುರುಷ ಧರ್ಮವನ್ನು ಆಚರಿಸುತ್ತಾರೆಂದು ಹೇಗೆ ತಾನೆ ನಿರೀಕ್ಷಿಸಬಹುದು? ಕಣ್ಣಲ್ಲಿ ಕಣ್ಣಿಟ್ಟು ಎಷ್ಟು ಹುಡುಕಿದರೂ ಅದರ ಲವಲೇಶವೂ ಕಾಣಿಸುವುದಿಲ್ಲ. ಪ್ರಾಚೀನ ಋಷಿಯು ಹೇಳಿದಂತೆ:

> ಸಂಧ್ಯಾಹೀನೋ ಶುಚಿರ್ನಿತ್ಯಮನತಸ್ಸರ್ವ ಕರ್ಮಸು ।
> ಯದನ್ಯತ್ ಕುರುತೇ ಕರ್ಮೋ ನ ತಸ್ಯ ಫಲ ಭಾಗ್ ಭವೇತ್॥

ಅಂದರೆ, ದ್ವಿಜನು ಸಂಧ್ಯಾವಂದನೆಯನ್ನು ತೊರೆದಾಗ ನರಕಕ್ಕೆ ಬೀಳುತ್ತಾನೆ ಎಂದು ಎಲ್ಲಾ ಸ್ಮೃತಿಗಳೂ ಹೇಳುತ್ತವೆ. ಸಂಧ್ಯೋಪಾಸನೆಯನ್ನು ಅಲಕ್ಷಿಸುವವರಿಗೆ ಬೇರೆ ಯಾವ ಧಾರ್ಮಿಕ ಆಚರಣೆಗೂ ಹಕ್ಕಿಲ್ಲ. ಪ್ರಾಚೀನ ಕಾಲದ ಋಷಿಗಳು ಹಲವು ವರ್ಷಗಳ ಕಾಲ ಸಂಧ್ಯೋಪಾಸನೆ ಮಾಡುತ್ತಿದ್ದುದರಿಂದಲೇ ದೀರ್ಘಾಯುಷ್ಯ, ಕೀರ್ತಿ, ಮಹಿಮೆ, ಬುದ್ಧಿ ಶಕ್ತಿ ಮತ್ತು ದೈವಿಕತೆಯ ಕಾಂತಿಗಳನ್ನು ಗಳಿಸಿದರು. ಇದನ್ನು ಮನುವೂ ಹೇಳುತ್ತಾನೆ. ಆದ್ದರಿಂದ ಹೇಗೆ ನೋಡಿದರೂ ಗಾಯತ್ರಿಯನ್ನು ಧ್ಯಾನ ಮಾಡದೆ ಹೋದರೆ ಯಾವ ಬ್ರಾಹ್ಮಣನಿಗೂ ಆ ಸ್ಥಾನಕ್ಕೆ ಅರ್ಹತೆ ಬರುವುದಿಲ್ಲ.

ಈ ಸಂದರ್ಭದಲ್ಲಿ ಬ್ರಾಹ್ಮಣ ಎಂದರೆ ಅರ್ಥ ಬ್ರಹ್ಮ ತತ್ತ್ವವನ್ನು ಸಾಕ್ಷಾತ್ಕರಿಸಿಕೊಂಡಿರುವವನು, ಬ್ರಹ್ಮೋಪಾಸನೆಯಿಂದ ಮತ್ತು ಅವಿರತ ಬ್ರಹ್ಮಧ್ಯಾನದಿಂದ ತನ್ನನ್ನು ಶುದ್ಧೀಕರಿಸಿಕೊಂಡವನು. ಜಾತಿ ಮತಗಳಿಗೂ ಇದಕ್ಕೂ ಯಾವ ಸಂಬಂಧವೂ ಇಲ್ಲ. ಆದರೆ ಬ್ರಾಹ್ಮಣ ಎಂಬ ಹೆಸರು ಹೊತ್ತವರಿಗೆ ಇಲ್ಲಿ ಒಂದು ಹೆಚ್ಚಿನ ಹೊಣೆಗಾರಿಕೆಯಿದೆ. ಅವರು ಸಂಧ್ಯೋಪಾಸನೆ ಮತ್ತು ಗಾಯತ್ರಿಗಳಲ್ಲಿ ಸದಾ

ನಿರತರಾಗಿರಬೇಕು. ಸಂಧ್ಯಾ ಎಂದರೆ ಏನು? ಸಂ ಎಂದರೆ ಚೆನ್ನಾಗಿ ಎಂದರ್ಥ. ಧ್ಯಾ ಎನ್ನುವುದು ಧ್ಯಾನದಿಂದ ಬಂದದ್ದು. ಆದ್ದರಿಂದ ಸರಿಯಾದ ಧ್ಯಾನವನ್ನು ಅದು ಸೂಚಿಸುತ್ತದೆ. ಭಗವತ್ ಶಕ್ತಿಯ ಮೇಲೆ ಮನಸ್ಸನ್ನು ಏಕಾಗ್ರಗೊಳಿಸುವುದು ಎಂದು ಅದರ ಅರ್ಥ. ಮನಸ್ಸನ್ನು ಭಗವಂತನ ಮೇಲೆ ನೆಡಬೇಕಾದರೆ ಅದರ ಚಟುವಟಿಕೆಗಳನ್ನು ನಿಯಂತ್ರಿಸಬೇಕು. ಆ ನಿಯಂತ್ರಣವನ್ನು ಸಾಧಿಸಬೇಕಾದರೆ, ಸತ್ವ, ರಜಸ್ಸು, ತಮಸ್ಸು ಈ ಮೂರು ಗುಣಗಳನ್ನು ಗೆಲ್ಲಬೇಕು. ಈ ಪ್ರಕೃತಿ ಗುಣತ್ರಯಗಳು ಪ್ರಾಧಾನ್ಯ ಪಡೆದು ತಮ್ಮ ಪ್ರವಾಹದಲ್ಲಿ ವ್ಯಕ್ತಿಯನ್ನು ಕೊಚ್ಚಿಕೊಂಡು ಹೋಗುತ್ತಿರುವಾಗ ಅವುಗಳ ಸೆಳೆತವನ್ನು ತಪ್ಪಿಸು ಎಂದು ಭಗವಂತನಿಗೆ ಮೊರೆ ಯಿಡಬೇಕು. ಭಗವಂತನ ಕಡೆಗೆ ಹೋಗುವವನ ಮೊದಲನೆಯ ಕರ್ತವ್ಯವೇ ಇದು. ಪ್ರಕೃತಿಯ ನಿಯಮದಂತೆ ಬೆಳಗ್ಗೆ ಸಾತ್ವಿಕ ಗುಣದ ಕಾಲ, ಮಧ್ಯಾಹ್ನ ರಾಜಸಿಕ ಗುಣದ ಕಾಲ ಮತ್ತು ಸಂಜೆ ತಾಮಸಿಕ ಗುಣದ ಕಾಲ. ರಾತ್ರಿಯ ಸುಖನಿದ್ರೆಯ ನಂತರ ಕಳವಳಗಳಾಗಲಿ, ಕುಸಿತವಾಗಲಿ ಇಲ್ಲದೆ ಮನಸ್ಸು ಶಾಂತ ವಾಗಿ, ನಿರ್ಮಲವಾಗಿ ಇರುವ ಸಮಯ ಬೆಳಗಿನ ಜಾವ. ಆ ಸಮಯದಲ್ಲಿ ಮತ್ತು ಮಾನಸಿಕ ಪರಿಸ್ಥಿತಿಯಲ್ಲಿ ಭಗವಂತನನ್ನು ಧ್ಯಾನಿಸುವುದು ಅತ್ಯಂತ ಫಲಪ್ರದ ವಾದದ್ದು. ಇದು ಎಲ್ಲರಿಗೂ ತಿಳಿದೇ ಇದೆ. ಪ್ರಾತಃ ಸಂಧ್ಯೆಯನ್ನು ವಿಧಿಸಿರುವುದಕ್ಕೆ ಇದೇ ಕಾರಣ. ಮಹತ್ವವನ್ನು ತಿಳಿಯದೆ, ಹಿಂದಿನವರು ನಿಯಮವನ್ನು ಮಾಡಿ ದ್ದಾರೆ ಎಂಬಷ್ಟರಿಂದ ಕೇವಲ ಯಾಂತ್ರಿಕವಾಗಿ ಅಜ್ಞಾನಿಗಳು ಅದನ್ನು ಆಚರಿಸುತ್ತಾ ಹೋಗುತ್ತಾರೆ. ಆದ್ದರಿಂದ ಮನುಷ್ಯನ ಎರಡನೆಯ ಕರ್ತವ್ಯ ಅಂತರಾರ್ಥವನ್ನು ಚೆನ್ನಾಗಿ ಅರಿತು ಸಂಧ್ಯಾವಂದನೆಯನ್ನು ಮಾಡುವುದು.

ಹಗಲು ಉರುಳುತ್ತಾ ಹೋದಂತೆ ಮನುಷ್ಯನಲ್ಲಿ ರಜೋ ಗುಣವು ವೃದ್ಧಿಯಾಗು ತ್ತದೆ. ಕ್ರಿಯಾಪರವಾದ ಪರಿಶ್ರಮದ ಪ್ರವೃತ್ತಿಯು ಪ್ರಧಾನವಾಗುತ್ತದೆ. ದಿನದಿನದ ದುಡಿಮೆಯ ಕ್ಷೇತ್ರಕ್ಕೆ ಅವನು ಕಾಲಿರಿಸುತ್ತಾನೆ. ಮಧ್ಯಾಹ್ನದ ಆಹಾರವನ್ನು ಸೇವಿಸು ವುದಕ್ಕೆ ಮೊದಲು ಅವನು ಮತ್ತೆ ಭಗವಂತನ ಧ್ಯಾನ ಮಾಡಬೇಕು, ತಾನು ಮಾಡುವ ಕೆಲಸವನ್ನೂ ಅದರ ಮೂಲಕ ಪಡೆದ ಫಲವನ್ನೂ ಅವನಿಗೆ ಅರ್ಪಿಸ ಬೇಕು ಎಂದು ವಿಧಿಸಲಾಗಿದೆ. ಈ ಭಕ್ತಿ ಪೂರ್ವಕವಾದ, ಕೃತಜ್ಞತಾ ಸಮರ್ಪಣೆಯ ನಂತರ ಮಾತ್ರ ಅವನು ಆಹಾರವನ್ನು ಸೇವಿಸತೊಡಗಬಹುದು. ಮಾಧ್ಯಾಹ್ನಿಕದ ಅರ್ಥ ಇದು. ಈ ಆಚರಣೆಯಿಂದ ರಜೋ ಗುಣವನ್ನು ತಡೆಗಟ್ಟಲಾಗುತ್ತದೆ ಮತ್ತು ಸತ್ವಗುಣವು ಅದನ್ನು ಗೆಲ್ಲಬಹುದು. ಇದು ಮನುಷ್ಯನ ಮೂರನೆಯ ಕರ್ತವ್ಯ.

ಆಮೇಲೆ ಮೂರನೆಯ ಗುಣವಾದ ತಮಸ್ ಮನುಷ್ಯನನ್ನು ಆವರಿಸಿಕೊಳ್ಳುತ್ತದೆ. ಸಂಜೆಯಾಗುತ್ತಿದ್ದಂತೆ ಅವನು ಮನೆಗೆ ಧಾವಿಸಿ ಬರುತ್ತಾನೆ, ಹೊಟ್ಟೆ ತುಂಬಾ

ಊಟ ಮಾಡುತ್ತಾನೆ, ನಿದ್ದೆ ಅವನನ್ನು ಆಕ್ರಮಿಸಿಕೊಳ್ಳುತ್ತದೆ. ಆದರೆ ಅವನು ಮಾಡಲೇಬೇಕಾದ ಇನ್ನೊಂದು ಕರ್ತವ್ಯ ಕಾದಿದೆ. ತಿನ್ನುವುದು, ನಿದ್ರಿಸುವುದು, ಸೋಮಾರಿಗಳ, ಆಲಸಿಗಳ ವಿಧಿ. ತಮೋ ಗುಣವು ಆಳುವುದಾಗಿ ಹೆದರಿಸುತ್ತಿರುವಾಗ ಮನುಷ್ಯನು ಅದರ ಸುಳಿಗಳಿಂದ ತಪ್ಪಿಸಿಕೊಳ್ಳಲು ವಿಶೇಷವಾಗಿ ಶ್ರಮಿಸಬೇಕು. ಪ್ರಾರ್ಥನೆ, ಭಗವಂತನನ್ನು ಕೊಂಡಾಡುವವರ ಸಹವಾಸ, ಭಗವನ್ಮಹಿಮೆಯನ್ನು ಕುರಿತು ಓದುವುದು, ಸದ್ಗುಣಗಳನ್ನು ಬೆಳೆಸಿಕೊಳ್ಳುವುದು, ಉದ್ದೇಶಪೂರ್ವಕವಾಗಿಯೇ ಒಳ್ಳೆಯ ನೀತಿಯುತ ನಡವಳಿಕೆಗಳನ್ನು ಪೋಷಿಸುವುದು; ಇದು ಸಂಜೆಯ ಸಂಧ್ಯಾವಂದನೆ.

ಆದ್ದರಿಂದ ನಿದ್ರೆಯ ಶೂನ್ಯಸ್ಥಿತಿಯಿಂದ ಉದಿಸಿ ಬರುವ ಮನಸ್ಸಿಗೆ ಸೂಕ್ತವಾಗಿ ತರಬೇತಿ ಕೊಡಬೇಕು, ದಾರಿ ತೋರಿಸಬೇಕು; ಧ್ಯಾನದ ಆನಂದವು, ಹೊರ ಜಗತ್ತಿನ ಅರಿವಿಲ್ಲದಿರುವಿಕೆಯಿಂದ ಒದಗುವ ಆನಂದವು, ದಿನನಿತ್ಯದ ನಿದ್ರೆಯಿಂದ ದೊರಕುವುದಕ್ಕಿಂತ ಹೆಚ್ಚು ಭವ್ಯವಾದದ್ದು, ಹೆಚ್ಚು ಶಾಶ್ವತವಾದದ್ದು. ಈ ಆನಂದವನ್ನೂ ಸಂತೋಷವನ್ನೂ ಎಲ್ಲರೂ ಸವಿಯಬಹುದು; ಸ್ವಲ್ಪ ವಿವೇಚಿಸಿ ನೋಡಿದರೆ ಇದು ನಿಮಗೆ ಅರ್ಥವಾಗುತ್ತದೆ. ಇದು ಮನುಷ್ಯನ ನಾಲ್ಕನೆಯ ಕರ್ತವ್ಯ.

ಯಾವ ಮನುಷ್ಯನು ಜೀವವಿರುವವರೆಗೂ ಹೀಗೆ ತ್ರಿಸಂಧ್ಯೆಗಳನ್ನು ಆಚರಿಸುವನೋ ಅವನು ತುಂಬ ಉನ್ನತನಾದವನು, ಎಂದೆಂದೂ ಮಹಿಮಾನ್ವಿತನು; ಬಯಸಿದುದೆಲ್ಲವನ್ನೂ ಅವನು ಸಾಧಿಸುತ್ತಾನೆ. ಎಲ್ಲಕ್ಕಿಂತ ಮಿಗಿಲಾಗಿ ಅವನು ಬದುಕಿರುವಾಗಲೇ ಬಿಡುಗಡೆ ಪಡೆದವನು; ಜೀವನ್ಮುಕ್ತ. ಸಂಧ್ಯೆಯನ್ನು ಒಂದು ಮಾಮೂಲು ಕಾರ್ಯಕ್ರಮದ ಹಾಗೆ ಕಾಟಾಚಾರಕ್ಕೆ ಮಾಡದಂತೆ ಜಾಗ್ರತರಾಗಿರಬೇಕು. ಅದರ ಮಹತ್ವವನ್ನು ಅರಿತು, ಒಳ ಅರ್ಥವನ್ನು ಪರಿಭಾವಿಸಿ ಶ್ರದ್ಧೆಯಿಂದ ಆಚರಿಸಬೇಕು. ಗಾಯತ್ರೀ ಮಂತ್ರದ ಅರ್ಥವನ್ನು ಸ್ಪಷ್ಟವಾಗಿ ಗ್ರಹಿಸಬೇಕು. ಅಲ್ಲಿ ಉಲ್ಲೇಖವಾಗುವ ನಿತ್ಯ ಕಾಂತಿಯುಕ್ತ ಆತ್ಮಸ್ವರೂಪಕ್ಕೂ ತನಗೂ ಇರುವ ಸಂವಾದಿತ್ವವನ್ನು ತಿಳಿದುಕೊಳ್ಳಬೇಕು. ಅರ್ಥವನ್ನು ತಿಳಿಯದವರು ಮಾತ್ರವೇ ಗಾಯತ್ರಿಯನ್ನು ಅಲಕ್ಷಿಸುತ್ತಾರೆ.

ಮನುವು ಈ ವಿಷಯದ ಮೇಲೆ ಹಚ್ಚಿನ ಒತ್ತು ಕೊಡುತ್ತಾನೆ. ಗಾಯತ್ರಿಯೇ ಬ್ರಾಹ್ಮಣನ ಜೀವದುಸಿರು ಎಂದು ಅವನು ಘೋಷಿಸುತ್ತಾನೆ. ಅದು ಬರೀ ಘೋಷಣೆಯಲ್ಲ, ಅದೇ ಸತ್ಯ. ಮನುಷ್ಯನ ಬುದ್ಧಿಯನ್ನು ಬೆಳಗಿ, ಪೋಷಿಸುವ ದಿವ್ಯಕಾಂತಿಯನ್ನು ಕುರಿತು ಮಾಡುವ ಧ್ಯಾನವೇ ನಿಜವಾಗಿ ಆಧ್ಯಾತ್ಮಿಕ ಮುನ್ನಡೆಗೆ

ಪರಿಣಾಮಕಾರಿಯಾದ ಸಾಧನೆ. ಮನಸ್ಸನ್ನು ಪಾಪಪ್ರವೃತ್ತಿಗಳಿಂದ ರಕ್ಷಿಸಬೇಕೆಂದು ಬೇಡುವುದಕ್ಕಿಂತ ಹೆಚ್ಚಿನ ಪ್ರಾರ್ಥನೆ ಬೇರೆ ಯಾವುದಿದೆ?

ಮನುಷ್ಯನಿಗೆ ಮೌಲ್ಯಗಳನ್ನು ಬೆಳೆಸಿಕೊಳ್ಳುವುದಕ್ಕಿಂತ ಬೇರೆ ರಕ್ಷಾ ಕವಚ ಇನ್ನೊಂದಿಲ್ಲ. ಎಲ್ಲಿಯವರೆಗೆ ಅವನು ಗಾಯತ್ರೀ ಮಂತ್ರವನ್ನು ಅವಲಂಬಿಸಿಕೊಂಡಿರುತ್ತಾನೋ ಅದರ ಅರ್ಥದಿಂದ ಪ್ರಚೋದಿತನಾಗಿರುತ್ತಾನೋ ಅಲ್ಲಿಯವರೆಗೆ ಜಾರಿಬೀಳುವುದಿಲ್ಲ. ವೇದಾಧ್ಯಯನ ಮಾಡುವಷ್ಟು ಸಾಮರ್ಥ್ಯವಿಲ್ಲದೆ ಹೋದರೆ ಕೊನೆಯ ಪಕ್ಷ ದೇಹಾಂತ್ಯದವರೆಗೂ ಗಾಯತ್ರೀ ಮಂತ್ರವನ್ನು ಜಪಿಸುತ್ತಾ ಅದನ್ನು ಅವಲಂಬಿಸಿಕೊಂಡಿರಬೇಕು ಎಂದು ಮನುವು ಹೇಳುತ್ತಾನೆ. ಗಾಯತ್ರಿಗಿಂತ ದೊಡ್ಡ ಸಂಪತ್ತಿಲ್ಲವೆಂದು ಸ್ಮೃತಿಯೂ ಹೇಳುತ್ತದೆ.

ಆತ್ಮಶಕ್ತಿಯು ಜಗತ್ತಿನ ಯಾವುದೇ ಮಹಾಕಾರ್ಯವನ್ನು ನಿರ್ವಹಿಸಬಲ್ಲುದು. ಗಾಯತ್ರಿಯು ಅಂತಹ ಶಕ್ತಿಯನ್ನು ನೀಡುವುದರಿಂದ, ಅದನ್ನು ಸರಿಯಾದ ಗಳಿಗೆಯಲ್ಲಿ, ಅಲಕ್ಷ್ಯಮಾಡದೆ, ಬಹು ಜಾಗರೂಕತೆಯಿಂದ ಪೋಷಿಸಬೇಕು. ದೇಹದ ಬೆಳವಣಿಗೆಗೆ ಸಾತ್ವಿಕ ಆಹಾರ ತುಂಬಾ ಅಗತ್ಯವಲ್ಲವೆ? ಹಾಗೆಯೇ ನಮ್ಮೊಳಗಿನ ಶಾಂತಿಯನ್ನು ಬಲಪಡಿಸಲು ಸೂರ್ಯನ ಕಾಂತಿಯನ್ನು ಭಾವನಾ ರೂಪದಲ್ಲಿ ಸೆಳೆದುಕೊಳ್ಳಬೇಕು.

ಆತ್ಮ ಶಕ್ತಿಯು ಕಳೆಯೇರಿದಾಗ ಇಂದ್ರಿಯಗಳೂ ಪಟುಗೊಂಡು ಫಲಪ್ರದವಾದ ದಾರಿಯಲ್ಲಿ ಸಾಗುತ್ತವೆ; ಅದು ಕಳೆಗುಂದಿದಾಗ ಇಂದ್ರಿಯಗಳು ವಿಫಲಗೊಂಡು ನಿಮ್ಮನ್ನು ವಿಫಲಗೊಳಿಸುತ್ತವೆ. ಆದ್ದರಿಂದ ಆ ಸಂಧಿಕಾಲದಲ್ಲಿ ಸೌರ ಶಕ್ತಿಯನ್ನು ಸೆಳೆದುಕೊಂಡರೆ, ಅದು ಸಕಾಲಕ್ಕೆ ಬಿತ್ತಿದ ಬೀಜಗಳಂತೆ, ಉತ್ತಮವಾದ ಫಸಲು ಖಚಿತವಾಗುತ್ತದೆ. ಸೂರ್ಯನು ಉದಿಸಿ ಭೂಮಿಯನ್ನು ಪ್ರಜ್ವಲ ಕಾಂತಿಯಲ್ಲಿ ಮುಳುಗಿಸಿರುವಾಗ ಕತ್ತಲು ಅವಿತುಕೊಂಡು ಗೊಂದಲಗೊಳಿಸಲು ಸಾಧ್ಯವಿದೆಯೇನು? ಆ ಕಾಂತಿಯನ್ನು ನಮ್ಮೊಳಕ್ಕೆ ಸೆಳೆದುಕೊಂಡಾಗ ದುಃಖವು ಅಲ್ಲಿ ಉಳಿಯಲು ಸಾಧ್ಯವೇನು? ಬ್ರಹ್ಮದ ಮೂಲಸೆಲೆಯಿಂದ ಮೂಡಿ ಬರುವ ಶಕ್ತಿ ನಮಗೆ ಬರದಿರುವುದೇನು? ಈ ಪ್ರಕ್ರಿಯೆಯ ತಂತ್ರವನ್ನು ನಮ್ಮ ಪ್ರಾಚೀನರು ಹಾಕಿಕೊಟ್ಟಿದ್ದಾರೆ, ಎಲ್ಲ ಸಾಧಕರ ಪ್ರಯೋಜನಕ್ಕಾಗಿ. ಅದನ್ನು ಕಲಿತುಕೊಳ್ಳಿರಿ, ಆಚರಿಸಿರಿ; ಅವರು ಹೋದ ದಾರಿಯ ಸತ್ಯವೆಂಥವೆಂಬುದನ್ನು ಕಂಡುಕೊಳ್ಳಲು ನೀವು ಸಮರ್ಥರಾಗುವಿರಿ.

ಉಪನಯನ ಸಂಸ್ಕಾರವನ್ನು ಏತಕ್ಕಾಗಿ ನಡೆಸಲಾಗುತ್ತದೆ? ಅಂದು ನಿಮಗೆ ದೀಕ್ಷೆ ಕೊಡುವ ಮಂತ್ರ ಯಾವುದು? ಆ ಸಮಯದಲ್ಲಿ ಅದೊಂದು ಮಂತ್ರವನ್ನೇ ಏಕೆ

ಕಲಿಸಬೇಕು? ಇತರ ಬೀಜಮಂತ್ರಗಳಿಗೆ ಅಷ್ಟೇ ಮಟ್ಟಿಗೆ ಪ್ರಾಧಾನ್ಯ ಕೊಡುವುದೆಲ್ಲಿ? ಈ ವಿಚಾರಗಳನ್ನು ಸ್ವಲ್ಪ ಆಲೋಚನೆ ಮಾಡಿ ನೋಡಿದರೆ ಗಾಯತ್ರಿಯು ಮಂತ್ರ ಗಳ ಚಕ್ರವರ್ತಿಯಾಗಿದೆ ಎನ್ನುವುದು ನಿಮಗೆ ತಿಳಿಯುತ್ತದೆ. ಆಚರಣೆಗಳು ಹೊಸ ಅರ್ಥದಿಂದ ಹೊಳೆಯುತ್ತವೆ; ವಿಧಿ ನಿಷೇಧಗಳು ಉದ್ದೇಶದಿಂದ ತುಂಬಿರುವುದು ಕಾಣುತ್ತದೆ; ಪ್ರಾಚೀನರು ಮಾಡಿದುದು ವಿಹಿತವಾಗಿದೆ, ಯುಕ್ತವಾಗಿದೆ ಎಂಬುದು ಗೊತ್ತಾಗುತ್ತದೆ. ಈ ಮಹತ್ವವನ್ನರಿಯದೆ ಹೋದರೆ ಮನಸ್ಸಿಗೆ ಬಂದಂತೆ ವ್ಯಾಖ್ಯಾನ ಮಾಡುವಿರಿ, ಜೀವನದ ಕರ್ತವ್ಯ ಬದ್ಧತೆಗಳನ್ನು ತಪ್ಪಿಸಿಕೊಳ್ಳಲು ಉಪಾಯಗಳ, ಚಮತ್ಕಾರದ ವಿವರಣೆಯ ಬಗಲಿಗೆ ಬೀಳುತ್ತೀರಿ, ಅನ್ಯಾಯ, ಅಧರ್ಮಗಳ ಮುಷ್ಟಿಗೆ ಸಿಲುಕಿಕೊಳ್ಳುವಿರಿ.

ಒಳ್ಳೆಯದು, ಗಾಯತ್ರಿ ಎಂಬ ಪದದ ನಿಜವಾದ ಅರ್ಥವೇನು? ಅದನ್ನು ತಿಳಿದು ಕೊಳ್ಳಲು ಇಂದು ಯಾರಾದರೂ ಪ್ರಯತ್ನಿಸುತ್ತಾರೆಯೆ? ಆ ಪದವು ಒಬ್ಬ ದೇವಿ ಯನ್ನೋ ಒಂದು ಬೀಜ ಮಂತ್ರವನ್ನೋ ಅರ್ಥೈಸುತ್ತದೆ ಎಂದು ಭಾವಿಸುತ್ತಾರೆ. ಯಾವುದು ಗಾಯಗಳನ್ನು ಅಥವಾ ಪ್ರಾಣಗಳನ್ನು ಅಥವಾ ವಾಕ್ಕಿನಿಂದ ಮೊದಲಾ ಗುವ ಇಂದ್ರಿಯಗಳನ್ನು ರಕ್ಷಿಸುತ್ತದೋ ತ್ರ ಅದು ಗಾಯತ್ರಿ. ಗಾಯಂತಂ ತ್ರಾಯತೇ ಯಸ್ಮಾತ್ ಗಾಯತ್ರಿ ತೇನೇ ಕಥ್ಯತೇ (ಯಾರು ಅದನ್ನು ಹಾಡುತ್ತಾರೋ ಗೌರವಿಸುತ್ತಾರೋ ಜಪಿಸುತ್ತಾರೋ ಧ್ಯಾನಿಸುತ್ತಾರೋ ಅವರನ್ನು ರಕ್ಷಿಸುವಂಥ ದ್ದನ್ನು ಗಾಯತ್ರಿ ಎಂದು ಕರೆಯಲಾಗಿದೆ). ಅದು ರಾಜರ್ಷಿಯಾಗಿದ್ದ ವಿಶ್ವಾಮಿತ್ರ ನನ್ನು ಬ್ರಹ್ಮರ್ಷಿಯನ್ನಾಗಿ ಪರಿವರ್ತಿಸಿದ ಪವಿತ್ರ ಮಂತ್ರ. ವೇದಮಾತೆಯು ಆಕೆಯನ್ನು ಪೂಜಿಸುವವರಿಗೆ ಸಕಲ ಇಷ್ಟಾರ್ಥಗಳನ್ನು ಕರುಣಿಸುತ್ತಾಳೆ. ಬ್ರಾಹ್ಮ ಣಗಳಲ್ಲೂ ಧರ್ಮಸೂತ್ರಗಳಲ್ಲೂ ಈ ದೇವಿಯನ್ನು ಅಪಾರ ಮಹಿಮಾನ್ವಿತಳೆಂದು ಕೊಂಡಾಡಲಾಗಿದೆ. ಈ ವಿಚಾರಗಳನ್ನು ನೀವು ಚೆನ್ನಾಗಿ ತಿಳಿದುಕೊಂಡರೆ ಯಾರ ನೆರವೂ ಇಲ್ಲದೆಯೇ ಗಾಯತ್ರಿಯನ್ನು ಅರಿಯಬಹುದು.

ಧರ್ಮದಲ್ಲಿ ಗಹನವಾದ ವಿಚಾರಗಳು ತುಂಬಿವೆ. ಅದನ್ನು ತಿಳಿಯದೆ ಮನಸ್ವಿ ಯಾಗಿ, ಅತ್ಯಲ್ಪ ಅರ್ಥಗಳಲ್ಲಿ, ಹೀನ ಅರ್ಥಗಳಲ್ಲಿ ವಿವರಿಸುತ್ತಿದ್ದಾರೆ. ಇಂದು ಧರ್ಮವು ಅವನತಿಗೊಂಡಿರುವುದು ಇದರಿಂದಲೇ. ಆದ್ದರಿಂದ ಸನಾತನ ಧರ್ಮ ವನ್ನು ಪುನಃಶ್ಚೇತನಗೊಳಿಸಿ, ಅದರ ಆಧಾರವಾದ ಆತ್ಮ ಸತ್ಯಕ್ಕೆ ಸಂಗತವಾಗುವಂತೆ ಅದರ ತತ್ತ್ವಗಳನ್ನು ವಿವರಿಸಬೇಕಾದುದು ಅತ್ಯಗತ್ಯವಾಗಿದೆ. ಇಲ್ಲವಾದರೆ ಗುರುತೇ ಸಿಕ್ಕದಂತೆ ಅರ್ಥವು ಬದಲಾಗಿ ವ್ಯಕ್ತಿಗಳ ಮನಸ್ವೀ ವಿಚಾರಗಳೇ ನಿಂತುಬಿಡುತ್ತವೆ. ಸ್ವರೂಪ ಏನೇ ಇರಲಿ, ಎಲ್ಲದಕ್ಕೂ ಧರ್ಮ ಎಂದು ಮುದ್ರೆಯೊತ್ತುವ ಪರಿಪಾಟ ಬರುತ್ತದೆ.

ಅಧ್ಯಾಯ ೮

# ಗೃಹಸ್ಥಾಶ್ರಮ

ಮನುಷ್ಯನ ಬದುಕನ್ನು ಕ್ರಮಪಡಿಸುವ ಆಶ್ರಮಗಳು ನಾಲ್ಕು; ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಸನ್ಯಾಸ. ಎಲ್ಲವೂ ಗೃಹಸ್ಥಾಶ್ರಮವನ್ನೇ ಆಧರಿಸಿವೆ. ಅದೇ ಅತ್ಯಂತ ಮುಖ್ಯವಾದ ಆಶ್ರಮ. ಏಕೆಂದರೆ ಗೃಹಸ್ಥನು ಮಿಕ್ಕ ಮೂವರನ್ನೂ ಪಾಲಿಸುತ್ತಾನೆ. ಆದ್ದರಿಂದ ಗೃಹಸ್ಥನ ನೆಲೆ ತುಂಬ ಮುಖ್ಯ.

ಎಲ್ಲ ಜೀವಿಗಳೂ ಬದುಕಿರಲು ವಾಯುವನ್ನು ಅವಲಂಬಿಸುವಂತೆ ಇತರ ಮೂರು ಆಶ್ರಮಗಳು ಗೃಹಸ್ಥನನ್ನು ಅವಲಂಬಿಸಿವೆ. ಅವನು ಅವರಿಗೆ ಆಹಾರ, ಬಟ್ಟೆಬರೆಗಳನ್ನು ಕೊಡುವುದು ಮಾತ್ರವಲ್ಲದೆ ವೇದಾಧ್ಯಯನಕ್ಕೆ ಅನುಕೂಲ ಕಲ್ಪಿಸಿಕೊಡುತ್ತಾನೆ. ಮನುವು ಧರ್ಮಶಾಸ್ತ್ರದಲ್ಲಿ ಈ ವಿಷಯವನ್ನು ಒತ್ತಿ ಹೇಳಿದ್ದಾನೆ. ಗೃಹಸ್ಥನೂ ಮೋಕ್ಷವನ್ನು ಪಡೆಯುತ್ತಾನೆ; ಅವನು ತನಗೆ ವಿಧಿಸಲಾಗಿರುವ ಧರ್ಮವನ್ನು ಕರಾರುವಾಕ್ಕಾಗಿ ಅನುಸರಿಸಬೇಕಾಗುತ್ತದೆ ಎಂದು ಅವನು ಘೋಷಿಸಿದ್ದಾನೆ. ಪ್ರತಿಯೊಬ್ಬನೂ ತನ್ನ ಆಶ್ರಮಕ್ಕೆ ನಿಗದಿಪಡಿಸಿರುವ ಧರ್ಮಕ್ಕೆ ಬದ್ಧನಾಗಿ ಅದರಂತೆ ನಡೆಯುತ್ತಿದ್ದರೆ ಮೋಕ್ಷವನ್ನು ಪಡೆಯುವುದರಲ್ಲಿ ಸಂದೇಹವೇ ಇಲ್ಲ.

ಮನುಸ್ಮೃತಿಯಲ್ಲಿ, ನಾರದ ಪರಿವ್ರಾಜಕೋಪನಿಷತ್ತಿನಲ್ಲಿ ಮತ್ತಿತರ ಗ್ರಂಥಗಳಲ್ಲಿ ಧರ್ಮನಿಷ್ಠನಾಗಿರುವ ಗೃಹಸ್ಥನೇ ಅತ್ಯುನ್ನತನು ಎಂದು ಹೇಳಿದೆ. ಇನ್ನು ಕೆಲವು ಗ್ರಂಥಗಳಲ್ಲಿ ಸರ್ವಸ್ವವನ್ನೂ ಪರಿತ್ಯಾಗ ಮಾಡಿರುವ ಮುನಿಗಳೀಗ ಪೂಜಾರ್ಹರು ಎಂದು ಹೇಳಿದೆ. ಹಾಗಾಗಿ, ಒಂದು ಸಂದೇಹ ಮೂಡಬಹುದು, ಎಲ್ಲ ಆಶ್ರಮಗಳಿಗೂ ಆಧಾರವಾದ ಗೃಹಸ್ಥಾಶ್ರಮವನ್ನು ಅಳವಡಿಸಿಕೊಳ್ಳುವುದು ಒಳ್ಳೆಯದೇ. ಎಲ್ಲರೂ ಗೌರವಿಸುವ, ನಿವೃತ್ತಿ ಮಾನಕವಾದ ಸನ್ಯಾಸ ಆಶ್ರಮವನ್ನು ಹಿಡಿಯುವುದು ಒಳ್ಳೆಯದೇ ಎಂದು. ಪೂಜಾರ್ಹನಾದ ಗೃಹಸ್ಥನಿಗೂ ಸಂತನಾದ ಪರಮಹಂಸನಿಗೂ ಆತ್ಮೀಯ ಸಂಬಂಧವಿದೆ. ನೀವು ಯಾವುದೇ ಆಶ್ರಮದಲ್ಲಿದ್ದರೂ ತಪ್ಪೇನಿಲ್ಲ. ಅವುಗಳಿಗೆ ವಿಧಿಸಿರುವ ಧರ್ಮವನ್ನು ಕಟ್ಟುನಿಟ್ಟಾಗಿ ಆಚರಿಸುತ್ತಿದ್ದರೆ ಪ್ರತಿಯೊಂದು ಆಶ್ರಮವೂ ನಿಮ್ಮನ್ನು ಮೋಕ್ಷಕ್ಕೆ ಕರೆದೊಯ್ಯುತ್ತದೆ. ನಿಮ್ಮ ಉದ್ಧಾರಕ್ಕಾಗಿ ಶ್ರದ್ಧೆಯಿಂದ ನೀವು ಸಾಧನೆ ಮಾಡುತ್ತಿರಬೇಕು ಅಷ್ಟೆ. ಪ್ರತಿಯೊಂದು ಆಶ್ರಮವೂ ಬದುಕಿನ ಒಂದೊಂದು ಹಂತದಲ್ಲಿ ಮುಖ್ಯವಾಗುತ್ತದೆ. ವ್ಯಕ್ತಿಯ

ನಡವಳಿಕೆ, ಅವನ ಆಚಾರ ವಿಚಾರಗಳು ಇವು ನಿಜವಾದ ಪರೀಕ್ಷೆ. ಸದಾಚಾರ ಪ್ರವೃತ್ತನಾಗಿದ್ದರೆ ಪ್ರತಿಯೊಂದು ಆಶ್ರಮವೂ ಪವಿತ್ರವಾದದ್ದು, ಪ್ರತಿಯೊಂದೂ ಪ್ರಶಂಸಾರ್ಹ. ಶಾಸ್ತ್ರಗಳ ನಿರ್ಣಯ ಇದೇಯೆ.

ಆತ್ಮಜ್ಞಾನವನ್ನು ಹೊಂದಿರುವವನು ಜನನ ಮರಣಗಳ ಸಾಗರವನ್ನು ದಾಟಿ ಮೋಕ್ಷವನ್ನು ಪಡೆಯುವುದರಲ್ಲಿ ಸಂದೇಹವಿಲ್ಲ. ಅದಕ್ಕೆ ಬದಲಾಗಿ, ತಮಗೆ ವಿಧಿಸಲಾಗಿರುವ ನಿಯಮಗಳು, ಆಚರಣೆಗಳು ಇವುಗಳ ಪರಿಜ್ಞಾನವಿಲ್ಲದವರು, ವೇದಗಳು, ಉಪನಿಷತ್ತುಗಳು, ಗೀತೆ ಮೊದಲಾದವನ್ನು ಅಧ್ಯಯನ ಮಾಡಿರದ ವರು. ಆದರೆ ಕೇವಲ ಹೊರಗಿನ ಪರಿಶುದ್ಧತೆ ಮತ್ತು ಪ್ರದರ್ಶನಗಳಿಂದ ತೃಪ್ತರಾಗು ವವರು ಖಂಡಿತವಾಗಿಯೂ ದುಃಖವನ್ನನುಭವಿಸುತ್ತಾರೆ.

ಸಾಧನೆಯಲ್ಲಿ ನಿತ್ಯಾನುಷ್ಠಾನ, ಅಂದರೆ ಪ್ರತಿದಿನವೂ ಆಚರಿಸಬೇಕೆಂದು ವಿಧಿಸಿರುವ ಆಚರಣೆಗಳನ್ನು ತಪ್ಪದೆ ಮಾಡುವುದು ಬಹಳ ಮುಖ್ಯ. ಅದೇ ಅತ್ಯುನ್ನತವಾದ ತಪಸ್ಸು, ಉನ್ನತವಾದ ಧರ್ಮ. ಈ ವಿಷಯದಲ್ಲಿ ಸಕಲ ಉಪನಿಷತ್ತುಗಳ ಸಾರವಾದ ಗೀತೆಯು ಏನು ಹೇಳುತ್ತದೆ ಎನ್ನುವುದನ್ನು ಗಮನಿಸಿದ್ದೀರೇನು? ಆಧ್ಯಾತ್ಮಿಕ ಕ್ಷೇತ್ರದಲ್ಲಿ ಸಕ್ರಿಯರಾಗಿರುವವರು, ಯಾವುದೇ ಆಶ್ರಮದಲ್ಲಿರಲಿ, ಅವರ ಜಾತಿ ಯಾವುದೇ ಆಗಿರಲಿ, ಭಗವಂತನ ಬಳಿ ಸಾರುತ್ತಾರೆ. ಮನುವು ಹೇಳುವುದೂ ಅದನ್ನೇ. ಅವರಿಗೆ ವಿಜ್ಞಾನವು ದೊರಕುತ್ತದೆ. ಸಕಲ ಆಸೆಗಳಿಂದ ಮುಕ್ತನಾಗಿ, ಇಂದ್ರಿಯ ಭೋಗವನ್ನು ಪಡೆಯಲು ಅಥವಾ ಭೋಗಿಸಲು ಎಳ್ಳಷ್ಟಾದರೂ ಒಲವು ಹೊಂದಿಲ್ಲದೆ, ಅಹಂಕಾರ ಮಮಕಾರಗಳ ಗುರುತೂ ಇಲ್ಲದೆ, ಸದಾ ಕಾಲವೂ ಬ್ರಹ್ಮ ಪ್ರಜ್ಞೆಯ ಆನಂದದಲ್ಲಿರುವವನು ದುಃಖದ ಲೇಪವೇ ಇಲ್ಲದಾಗುತ್ತಾನೆ, ಪರಮೋನ್ನತವಾದ ಆನಂದ ಮತ್ತು ಶಾಂತಿಯನ್ನು ಪಡೆಯುತ್ತಾನೆ. ಕೊನೆ ಪಕ್ಷ ತನ್ನ ಕೊನೆಯ ಗಳಿಗೆಗಳಲ್ಲಿ ಮನುಷ್ಯನು ಬ್ರಹ್ಮವೇ ಆದ ತನ್ನ ಮೂಲ ಸ್ವಭಾವದಲ್ಲಿ ನೆಲೆಗೊಂಡಿದ್ದರೆ, ಅವನು ಅದರಲ್ಲೇ ಲೀನನಾಗುತ್ತಾನೆ ಎನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ.

ಅಂತಹ ವ್ಯಕ್ತಿಗಳಿಗೆ ಸ್ಥಿತಪ್ರಜ್ಞ ಹಂತವು ಅತ್ಯಂತ ಸಹಜವಾಗಿದೆ. ಸದಾ ನಾನು ಬ್ರಹ್ಮ ಎಂಬ ಅರಿವು ಇರುವುದೇ ಮನುಷ್ಯನ ಸರ್ವರೋಗಗಳಿಗೆ ರಾಮಬಾಣ. ಈ ಅಹಂ ಬ್ರಹ್ಮಾಸ್ಮಿ ವಿಚಾರದಿಂದಲೇ ಮೋಕ್ಷವು ಮೂಡಿಬರುತ್ತದೆ. ಅದೇ ಮನುಷ್ಯನ ನಿಜವಾದ ಕರ್ತವ್ಯ. ಈ ವಿಚಾರವನ್ನು ಬೆಳೆಸಿಕೊಂಡು ಆ ಅನುಭವವನ್ನು ಪಡೆಯುವುದು. ಅಜ್ಞಾನಿಯು ಜಡ ತತ್ತ್ವದಿಂದ ಪ್ರೇರಿತನಾದವನು. ಅವನು ದೇಹವೇ ತಾನು ಎಂದುಕೊಳ್ಳುತ್ತಾನೆ! ಸ್ವಲ್ಪ ವಿಚಾರ ಮಾಡುವ ಶಕ್ತಿಯಿರುವ

ಪಂಡಿತನಿಗೆ ದೇಹದೊಳಗಿರುವ ಜೀವಿಯೇ ನಾನು ಎನ್ನುವುದು ಅರ್ಥವಾಗುತ್ತದೆ. ಅನಾತ್ಮವೂ ಆತ್ಮವೂ ಬೇರೆ ಬೇರೆ ಎಂದು ನೋಡಬಲ್ಲವರು ಅಹಂ ಬ್ರಹ್ಮಾಸ್ಮಿ ಎನ್ನುವುದೇ ಸತ್ಯ ಎಂದು ಅರಿಯುತ್ತಾರೆ, ಅವರು ಆ ನಂಬಿಕೆಯಿಂದ ಅತ್ತಿತ್ತ ಸರಿಯುವುದಿಲ್ಲ.

ಬ್ರಾಹ್ಮಣ ಮೊದಲಾದ ಜಾತಿಗಳು, ಕಪ್ಪು ಬಿಳುಪು ಮೊದಲಾದ ಬಣ್ಣಗಳು, ಬ್ರಹ್ಮಚರ್ಯ ಇತ್ಯಾದಿ ಆಶ್ರಮಗಳು ದೈಹಿಕ ಪರಿಸ್ಥಿತಿಗಳೇ ಹೊರತು ಆತ್ಮದ ಲಕ್ಷಣಗಳಲ್ಲ. ಅವು ಕಾಲ ಮತ್ತು ದೇಶಗಳಿಗೆ ಬದ್ಧವಾಗಿವೆ. ಅವು ಬಂಧನದ ಈ ಜಗತ್ತಿಗೆ ಸೇರಿದವು, ಈ ಜಗತ್ತಿನ ಕಾರಣಗಳಿಂದ ನಿಯಂತ್ರಿತವಾದವು. ಜಗತ್ತು ಸುಸ್ಥಿತಿಯಲ್ಲಿ ನಡೆಯುತ್ತಿರಬೇಕೆಂಬ ಉದ್ದೇಶದಿಂದ ದೈವ ಸಂಕಲ್ಪವು ಅವುಗಳನ್ನು ಹಾಗೆ ನಿಯಮಿಸಿದೆ. ಪ್ರಾಪಂಚಿಕ ಸೀಮಿತಗಳಿಗೆ ಬದ್ಧನಾಗಿರುವ ಪ್ರತಿಯೊಬ್ಬನೂ ಅವುಗಳನ್ನು ಆಚರಿಸಬೇಕು. ಯಾರಿಗೆ ಸೀಮಿತಗಳ ಅಥವಾ ವಿಸ್ತರಣಗಳ ಸೋಂಕಿಲ್ಲವೋ ಅಂದರೆ, ಯಾರು ಪ್ರಾಪಂಚಿಕ ಬಂಧನಗಳಿಗೆ ಅತೀತರಾಗಿದ್ದಾರೋ ಅವರಿಗೆ ಅವು ಮುಖ್ಯವಲ್ಲ. ಆದ್ದರಿಂದಲೇ ಬ್ರಹ್ಮ ನಿಷ್ಠೆಯಲ್ಲಿ ಸದಾ ನಿರತರಾಗಿರುವವರು, ಮೂಲ ಸತ್ಯವೇನುಂಬುದನ್ನು ಅರಿತವರು ಅವುಗಳನ್ನು ಅಷ್ಟಾಗಿ ಆಚರಿಸುವುದಿಲ್ಲ! ಅವರು ಜಾತಿಗೆ ಬದ್ಧರಲ್ಲ. ಪ್ರತಿಯೊಂದನ್ನೂ ಅವರು ಮೂಲ ಸತ್ಯವೆಂದೇ ಕಾಣಬಲ್ಲರು. ಅಂದ ಮೇಲೆ ಜಾತಿ ಧರ್ಮ ಎನಿಸಿಕೊಳ್ಳುವುದರ ಕಡೆಗೆ ಅವರು ಹೇಗೆ ಗಮನಕೊಟ್ಟಾರು? ಆದರೂ ಆ ಹಂತ ತಲುಪುವವರೆಗೆ ವರ್ಣಾಶ್ರಮ ಧರ್ಮಗಳನ್ನು ತಪ್ಪದೆ ಪಾಲಿಸಲೇಬೇಕು. ದೇಹ ಪ್ರಜ್ಞೆಗೆ ಇದೇ ಧರ್ಮ, ದೇಹ ಧರ್ಮ.

ಆತ್ಮ ಧರ್ಮವನ್ನು ಗ್ರಹಿಸಿರುವ ಮಹರ್ಷಿಗಳು ಸತ್ ಚಿತ್ ಆನಂದ, ಇವು ಆತ್ಮದ ಲಕ್ಷಣಗಳು ಎಂದು ಸಾರಿದರು. ಆದ್ದರಿಂದ ಆ ಹಿರಿಯ ವಿಜ್ಞಾನಿಗಳು ಸತ್ ಚಿತ್ ಆನಂದವೇ ಆದ ಬ್ರಹ್ಮವನ್ನು ಪಡೆದಿದ್ದಾರೆ ಎಂದು ಹೇಳಬಹುದು. ಏಕೆಂದರೆ ಆತ್ಮವನ್ನು ದರ್ಶಿಸಲು ಬೇಕಾದ ಸ್ಪಷ್ಟ ದರ್ಶನವೊಂದೇ ಮೋಕ್ಷಕ್ಕೆ ಸಾಕು. ಅದೇ ಮೂಲಭೂತವಾದದ್ದು, ವರ್ಣವೂ ಅಲ್ಲ, ಆಶ್ರಮವೂ ಅಲ್ಲ. ಹಾಗಾದರೆ ಆ ನಿರ್ಮಲ ದರ್ಶನವನ್ನು ಪಡೆಯುವುದು ಹೇಗೆ? ಧರ್ಮದ ಆಚರಣೆಯಿಂದ, ವರ್ಣ ಮತ್ತು ಆಶ್ರಮದಿಂದ ಬದ್ಧವಾದ ಧರ್ಮದ ಅನುಸರಣೆಯಿಂದ! ಧರ್ಮವು ಆತ್ಮವನ್ನು ಸಾಕ್ಷಾತ್ಕರಿಸಿಕೊಳ್ಳುವಂತೆ ಮಾಡುತ್ತದೆ. ಯಾವುದೇ ಮಬ್ಬು, ಇಬ್ಬನಿ ಅದನ್ನು ನಿಮ್ಮ ದೃಷ್ಟಿಯಿಂದ ಮರೆಮಾಡಲು ಬಿಡುವುದಿಲ್ಲ. ಧರ್ಮಾಚರಣೆಯು ನಿಮ್ಮಲ್ಲಿ ಅನುಭವವನ್ನು ತುಂಬಿಕೊಡುತ್ತದೆ, ಆ ಅನುಭವದ ಮೂಲಕ ಸತ್ಯವು ಸ್ಥಾಪಿತವಾಗುತ್ತದೆ, ಸತ್ಯವು ಸ್ಪಷ್ಟವಾಗಿ ಗೋಚರಿಸುತ್ತದೆ, ಈ ದರ್ಶನವು ಮೋಕ್ಷ

ವನ್ನು ನೀಡುತ್ತದೆ. ಒಳ ತಡೆಗಳು ಆತ್ಮವನ್ನು ಯಾರಲ್ಲಿ ಮುಸುಕಿಲ್ಲವೋ ಅವರು ಯಾವುದೇ ವರ್ಣಕ್ಕೆ ಸೇರಿರಲಿ, ಆಶ್ರಮಕ್ಕೆ ಸೇರಿರಲಿ, ಅದು ಮುಖ್ಯವಾಗದೆ, ಮೋಕ್ಷವನ್ನು ಪಡೆಯುತ್ತಾರೆ. ಶಾಸ್ತ್ರಗಳು ಮೋಕ್ಷದ ವಿಷಯವಾಗಿ ಹೇಳುವಾಗ ಕೊಂಡಾಡುವುದು ಈ ಅಂತಃಕರಣ ಶುದ್ಧಿಯನ್ನೇ.

ಮೋಹ, ದ್ವೇಷಗಳುಳ್ಳವರು, ಕಾಡಿನಲ್ಲಿ ವಾಸಿಸುತ್ತಿದ್ದರೇನು, ಹಾನಿಯನ್ನು ತಪ್ಪಿಸಿ ಕೊಳ್ಳಲಾರರು; ಇಂದ್ರಿಯಗಳನ್ನು ಗೆದ್ದವರು ಗೃಹಸ್ಥರಾಗಿದ್ದರೇನು, ತಪಸ್ವಿಗಳಾಗಿ ರಬಲ್ಲರು; ಕೆಟ್ಟವಲ್ಲದ ಅಥವಾ ನಿಂದಾರ್ಹವಲ್ಲದ ಕಾರ್ಯಗಳಲ್ಲಿಯೇ ತೊಡಗಿ ದ್ದರೆ ಜ್ಞಾನಿಗಳೆಂದು ಕರೆಸಿಕೊಳ್ಳಲು ಅವರು ಅರ್ಹರಾಗುತ್ತಾರೆ. ನಿರ್ಮೋಹವನ್ನು ಬೆಳೆಸಿಕೊಳ್ಳಲು ಮನೆಯೇ ತಪೋವನ. ಸಂತಾನವಾಗುವುದರಿಂದಲಾಗಲಿ, ದಾನ ಧರ್ಮದಿಂದಾಗಲಿ, ಐಶ್ವರ್ಯದಿಂದಾಗಲಿ, ಯಜ್ಞದಿಂದಾಗಲಿ, ಯೋಗದಿಂದಾ ಗಲಿ ಮೋಕ್ಷವನ್ನು ಪಡೆಯಲು ಸಾಧ್ಯವಿಲ್ಲ, ಅದಕ್ಕೆ ಅಗತ್ಯವಾಗಿರುವುದು ಅಂತಃ ಕರಣ ಶುದ್ಧಿ.

ವೇದಗಳು ಹೇಳುವ ಈ ಪಾಠವನ್ನು ಕಲಿತು, ಬದುಕಿನ ತನ್ನ ನಿರ್ದಿಷ್ಟ ಹಂತಕ್ಕೆ ಹೇಳಿದ ಧರ್ಮತತ್ತ್ವಗಳನ್ನು ಆಚರಿಸುತ್ತಾ ಇರುವ ಯಾರೇ ಆಗಲಿ, ಯಾವ ವರ್ಣಕ್ಕೆ ಸೇರಿದವರೇ ಆಗಲಿ ಪರಮಪದ ಅಥವಾ ಅತ್ಯುನ್ನತ ಹಂತವನ್ನು ತಲುಪ ಬಹುದು. ಧರ್ಮಬದ್ಧನಾಗುತ್ತೇನೆಂಬ ಸಂಕಲ್ಪವೂ ಮನೋಬಲವೂ ಇದ್ದರೆ ಜ್ಞಾನವನ್ನು ಗಳಿಸಲು ಏನೂ ಕಷ್ಟವಿಲ್ಲ. ಸನ್ಯಾಸಾಶ್ರಮವನ್ನು ಪ್ರವೇಶಿಸದೆಯೇ ಗೃಹಸ್ಥನಾಗಿದ್ದುಕೊಂಡೇ ಮುಕ್ತನಾಗಬಹುದು.

ಜನಕ ಚಕ್ರವರ್ತಿ, ಅಶ್ವಪತಿ, ದಿಲೀಪ ಮೊದಲಾದ ರಾಜರ್ಷಿಗಳು ಗೃಹಸ್ಥರಾಗಿದ್ದು ಕೊಂಡೇ ಗುರಿಯನ್ನು ತಲುಪಿದರು. ಆ ಹಂತದಲ್ಲೇ ಅವರು ಹೋರಾಡಿ ಭಗ ವತ್ಕೃಪೆಯನ್ನು ಪಡೆಯಲು ಎದುರಾಗಿದ್ದ ಅಡ್ಡಿಗಳನ್ನು ಹೋಗಲಾಡಿಸಿಕೊಂಡರು, ತಾವು ಹೋಗಿ ಮುಟ್ಟಬೇಕೆಂದು ಬಯಸಿದ್ದ ಭಗವತ್ ಶಕ್ತಿಯನ್ನು ಏಕೈಕ ಲಕ್ಷ್ಯ ವಾಗಿ ಇರಿಸಿಕೊಂಡರು. ಆದ್ದರಿಂದ ಸಂದೇಹ ಇಟ್ಟುಕೊಳ್ಳಬೇಡಿ, ಗೃಹಸ್ಥಾಶ್ರಮವು ತಡೆಯಲ್ಲ.

ಸಂಸಾರ ಸಾಗರವನ್ನು ದಾಟಬೇಕೆಂಬ ಬಯಕೆಯಿಂದ ಪ್ರೇರಿತರಾಗಿ ಪತಿ ಪತ್ನಿ ಯರು ಮನಸ್ಸಿನ ಸಾಮರಸ್ಯವನ್ನು ಸಾಧಿಸಬೇಕು. ಗುರಿಯನ್ನು ಮುಟ್ಟಬೇಕೆಂಬ ಸಂಕಲ್ಪವು ಇಬ್ಬರಲ್ಲೂ ಸಮಾನವಾಗಿ ಬಲವಾಗಿರಬೇಕು, ಸ್ಥಿರವಾಗಿರಬೇಕು. ಇಲ್ಲವಾದರೆ ಸನ್ಯಾಸವೊಂದೇ ಆಶ್ರಯ! ಮಧ್ಯಾಹ್ನ ಸೂರ್ಯನೂ ತನ್ನ ಪತ್ನಿ

ಛಾಯಾದೇವಿಯೊಂದಿಗೇ ಇರುತ್ತಾನೆ, ಷೋಡಶ ಕಳೆಗಳ ಚಂದ್ರನೂ ಅಮೃತದಂತಿರುವ ತಂಪಾದ ಕಿರಣಗಳೊಂದಿಗೆ ಸಾಹಚರ್ಯದಲ್ಲಿದ್ದಾನೆ. ಮನೆಯ ಒಡತಿಯು ಬೆಳಕಿನಂತಿರಬೇಕು, ಸಹನಾಮಯಿಯೂ ಸಮಾಹಿತ ಚಿತ್ತೆಯೂ ಆಗಿರಬೇಕು. ಸಕಲ ಸದ್ಗುಣಭರಿತಳಾಗಿರಬೇಕು. ಆಗ ಮನೆಯು ಬೆಳಗುತ್ತದೆ, ಆಧ್ಯಾತ್ಮಿಕ ವಲಯದಲ್ಲಿ ಅದು ಗೆಲುವಿನ ಮನೆಯಾಗುತ್ತದೆ.

ಸಂಸಾರದಲ್ಲಿ ಏನಾದರೂ ಕಷ್ಟಗಳು ಕಾಣಿಸಕೊಂಡಾಗ ವ್ಯಕ್ತಿಯು ಎಲ್ಲವನ್ನೂ ತೊರೆದು ಸನ್ಯಾಸ ಸ್ವೀಕರಿಸಿ ಓಡಿಹೋಗಬೇಕೆಂಬ ನಿಯಮವಿಲ್ಲ. ಪತ್ನಿಯ ಪೂರ್ಣ ಸಮ್ಮತಿಯಿಲ್ಲದೆ ಪತಿಯು ಸನ್ಯಾಸ ಪಡೆದರೆ ಅದು ಎಂದಿಗೂ ಫಲಕಾರಿಯಾಗದು. ಅತ್ಯುತ್ತಮವಾದ ಮಾರ್ಗವೆಂದರೆ ಪತ್ನಿಯನ್ನೂ ಜೊತೆಯಲ್ಲಿ ಕರೆದುಕೊಂಡು ಮನೆಯನ್ನು ತೊರೆದು ವಾನಪ್ರಸ್ಥನಾಗಿ, ಆ ನೂತನ ಹಂತದ ಧರ್ಮನಿಯಮಗಳಿಗೆ ಬದ್ಧನಾಗಿ ಆಚರಿಸುವುದು. ಗಮನಕೊಟ್ಟು ಬೆಳೆಸಬೇಕಾದ ಮಕ್ಕಳಿದ್ದರೆ ಅಂತಹ ವ್ಯಕ್ತಿಗೆ ಶಾಸ್ತ್ರಗಳು ವಾನಪ್ರಸ್ಥ ಆಶ್ರಮವನ್ನೂ ಒಪ್ಪುವುದಿಲ್ಲ.

ಮಕ್ಕಳನ್ನು ಬೆಳೆಸಿ ಅವರು ಸ್ವತಂತ್ರವಾಗಿ ತಮ್ಮನ್ನು ನೋಡಿಕೊಳ್ಳುವಂತೆ ಮಾಡಿ ಆಮೇಲೆ ಅವರಷ್ಟಕ್ಕೆ ಅವರನ್ನು ಬಿಡಬಹುದು. ಆದ್ದರಿಂದಲೇ ವ್ಯಕ್ತಿಯು ೪೮ನೆಯ ವಯಸ್ಸಿನವರೆಗೂ ತನಗೆ ಹಿತವಾಗಿರಲಿ ಬಿಡಲಿ, ಗೃಹಸ್ಥನಾಗಿರಬೇಕು ಎಂದು ಹೇಳುತ್ತವೆ. ಅಲ್ಲೇ ಇದ್ದು, ಸ್ವಧರ್ಮವನ್ನು ಪಾಲಿಸುತ್ತಾ ಕಷ್ಟಗಳು ಎದುರಾದರೆ ಅವನ್ನು ಭಗವಂತನಿಗೇ ಅರ್ಪಿಸಿ, ಅದೂ ಅವನ ಲೀಲೆ, ಅವನ ಕಾರ್ಯಯೋಜನೆ ಎಂದು ಶಾಂತ ಮನಸ್ಕನಾಗಿ ಸ್ವೀಕರಿಸಬೇಕು. ಗೃಹಸ್ಥ ಧರ್ಮವನ್ನು ಆಚರಿಸುವ ರೀತಿ ಇದು. ಗಂಡಸರಿಗೆ, ಹೆಂಗಸರಿಗೆ ಇಬ್ಬರಿಗೂ ಇದೇ ಸರಿಯಾದ ಮಾರ್ಗ.

ಅಧ್ಯಾಯ ೯

# ಎಲ್ಲರೂ ಆಧ್ಯಾತ್ಮ ಜ್ಞಾನ ಪಡೆಯಬಹುದು

ದೊಡ್ಡವನಾಗಲಿ ಚಿಕ್ಕವನಾಲಿ, ಶ್ರೀಮಂತನಾಗಲಿ ಬಡವನಾಗಲಿ, ಗಂಡಸಾಗಲಿ ಹೆಂಗಸಾಗಲಿ ಎಲ್ಲರನ್ನೂ ರೋಗವು ಕಾಡುತ್ತದೆ. ರೋಗವನ್ನು ಹೋಗಲಾಡಿಸಿ ಕೊಳ್ಳಲು ಚಿಕಿತ್ಸೆ ಪಡೆಯುವ ಹಕ್ಕು ಎಲ್ಲರಿಗೂ ಇದೆ. ಹಾಗೆಯೇ ಮಾನವರೆಲ್ಲರೂ ಜನನ ಮರಣಗಳೆಂಬ ರೋಗಗ್ರಸ್ತರಾಗಿದ್ದಾರೆ. ಅವರೆಲ್ಲರಿಗೂ ಅವಕ್ಕೆ ಪರಿಣಾಮ ಕಾರಿ ಚಿಕಿತ್ಸೆಯಾದ ಬ್ರಹ್ಮವಿದ್ಯೆಯನ್ನು ಪಡೆಯುವ ಹಕ್ಕಿದೆ. ಅದು ಎಲ್ಲರಿಗೂ ಸೇರಿದ ಪರಂಪರೆ. ತಾನು ಮುಟ್ಟಿರುವ ಹಂತ, ಆಧ್ಯಾತ್ಮಿಕವಾಗಿ ಅವನು ಮಾಡಿರುವ ಸಾಧನೆ, ಔಷಧಿಯನ್ನು ಅರಗಿಸಿಕೊಂಡಿರುವ ಪ್ರಮಾಣ ಇವುಗಳಿಗನುಸಾರವಾಗಿ ಪ್ರತಿಯೊಬ್ಬನೂ ಆರೋಗ್ಯವನ್ನು ಸುಧಾರಿಸಿಕೊಳ್ಳುತ್ತಾನೆ, ಶಾಂತಿ ಮತ್ತು ಸಮಚಿತ್ತ ಗಳಲ್ಲಿ. ಆದರೆ ಇಲ್ಲಿ ಒಂದು ವಿಚಾರವನ್ನು ವಿಶೇಷವಾಗಿ ಹೇಳಬೇಕು. ಔಷಧಿಯ ಜೊತೆಗೆ ಜೀವನ ವಿಧಾನವನ್ನು ಕುರಿತು ವಿಧಿಸಿರುವ ನಿಯಮಾವಳಿಯನ್ನು ಕಟ್ಟುನಿಟ್ಟಾಗಿ ಆಚರಿಸಬೇಕು.

ಬ್ರಹ್ಮಜ್ಞಾನವೆಂಬ ಔಷಧಿಗೆ ಪೂರಕವಾಗಿ ಸೂಕ್ತವಾದ ಧರ್ಮಾಚರಣೆ, ಭಕ್ತಿ ಜ್ಞಾನ ವೈರಾಗ್ಯಗಳನ್ನು ಬೆಳೆಸಿಕೊಳ್ಳುವುದು ಅಗತ್ಯ. ರೋಗಚಿಕಿತ್ಸೆಯಲ್ಲಿ ಪಥ್ಯ ಮತ್ತು ಅನುಪಾನ ಕ್ರಮಗಳು ಅಗತ್ಯವಾದ ಅಂಶಗಳು. ಹಾಗೆಯೇ ಬ್ರಹ್ಮಜ್ಞಾನದ ದೀಕ್ಷೆ ಪಡೆದುಬಿಟ್ಟರೆ ಸಾಲದು, ಶಮ, ದಮ ಮತ್ತು ಇತರ ನೈತಿಕ ಹಾಗೂ ಆಧ್ಯಾತ್ಮಿಕ ಗುಣಗಳಿಲ್ಲದ ಯಾರೇ ಆದರೂ ಅವನು ಚಕ್ರವರ್ತಿಯಾಗಲಿ, ಗುಲಾಮನಾಗಲಿ, ಮೇಲು ಜಾತಿಯಲ್ಲಿ ಹುಟ್ಟಿದವನಾಗಲಿ, ಕೆಳಜಾತಿಯವನಾಗಲಿ ಗುರಿಯನ್ನು ಮುಟ್ಟುವುದು ಸಾಧ್ಯವಿಲ್ಲ. ಬ್ರಹ್ಮವಿದ್ಯೆಯ ಪರಂಪರೆಯು ಎಲ್ಲರಿಗೂ ಸೇರಿದ್ದೆ. ಆದರೂ ತಕ್ಕ ಅರ್ಹತೆಗಳಿಂದ ಸಜ್ಜುಗೊಂಡವರು ಮಾತ್ರ ಅದನ್ನು ಪಡೆಯ ಬಲ್ಲರು. ವ್ಯಕ್ತಿಗೆ ಚಿಕಿತ್ಸೆ ಪಡೆದುಕೊಳ್ಳುವಷ್ಟು, ಔಷಧಿಯನ್ನು ಅರಗಿಸಿಕೊಳ್ಳು ವಷ್ಟಾದರೂ ಶಕ್ತಿಯಿರಬೇಕಷ್ಟೆ. ಆ ಶಕ್ತಿಯೂ ಇಲ್ಲದಿದ್ದರೆ ಈ ರೋಗಿಯು ಚಿಕಿತ್ಸೆಯನ್ನು ತಡೆದುಕೊಳ್ಳಲಾರನು ಎಂದು ಪ್ರಮಾಣ ಪತ್ರ ಕೊಡುತ್ತಾನೆ. ಕೆಲವು ವೈದ್ಯರು ರೋಗಿಯ ಸ್ಥಿತಿಯನ್ನು ನೋಡಿ ತೀರಾ ಅಗತ್ಯವಿರುವವರಿಗೆ ಔಷಧಿ ಯನ್ನು ಉಚಿತವಾಗಿ ಕೊಡುತ್ತಾರೆ. ಹಾಗಿದ್ದ ಮೇಲೆ ಅತ್ಯಂತ ದೊಡ್ಡ ವೈದ್ಯನೂ

ಕರುಣೆಯ ಸಾಗರನೂ ಆದ ಭಗವಂತನ ವಿಷಯ ಹೇಳುವುದೇನು? ವ್ಯಕ್ತಿಯ ಶಕ್ತಿ ಮತ್ತು ಅಗತ್ಯಗಳನ್ನು ನೋಡಿ ಅವನು ಔಷಧಿಯನ್ನು ಒದಗಿಸುತ್ತಾನೆ.

ಇಲ್ಲೊಂದು ಸಮಸ್ಯೆಯಿದೆ. ಮಹಿಳೆಯರಿಗೆ ಬ್ರಹ್ಮ ವಿದ್ಯೆಯನ್ನು ಪಡೆಯಲು ಅರ್ಹತೆಯಿದೆಯೆ? ಈ ಪ್ರಶ್ನೆಗೆ ಆಗಲೆ ಉತ್ತರ ಕೊಟ್ಟಾಗಿದೆ. ಸ್ತ್ರೀಯರಿಗೆ ಈ ಜ್ಞಾನ ವನ್ನು ಪಡೆಯಲು ಅರ್ಹತೆಯಿರದಿದ್ದರೆ ವಿಷ್ಣು ಮೂರ್ತಿಯು ಹೇಗೆ ಭೂದೇವಿಗೆ ಗೀತೆಯ ರಹಸ್ಯವನ್ನು ಬೋಧಿಸಿದನು? ಪಾರ್ವತಿಗೆ ಪರಮೇಶ್ವರನು ಹೇಗೆ ಗುರು ಗೀತೆಯನ್ನು ಬೋಧಿಸಿದನು? 'ಧರೋವಾಚ', 'ಪಾರ್ವತ್ಯುವಾಚ' ಮೊದಲಾದ ಮಾತುಗಳು ಧರೆ ಮತ್ತು ಪಾರ್ವತಿ ಆಧ್ಯಾತ್ಮಿಕ ಚರ್ಚೆಗಳಲ್ಲಿ ಭಾಗವಹಿಸಿ ಸ್ಪಷ್ಟಪಡಿಸಿ ಕೊಳ್ಳಲು ಪ್ರಶ್ನೆಗಳನ್ನು ಕೇಳುತ್ತಿದ್ದರು ಎಂಬುದನ್ನು ಸೂಚಿಸುತ್ತದೆ. ಈಶ್ವರನು ಪಾರ್ವತಿಗೆ ಯೋಗಶಾಸ್ತ್ರ, ಮಂತ್ರ ಶಾಸ್ತ್ರಗಳೆರಡನ್ನೂ ಬೋಧಿಸಿದನು. ಆದ್ದ ರಿಂದ ಇದು ಸರಿ, ಶಾಸ್ತ್ರಗಳಿಗೆ ಸಮ್ಮತವಾದದ್ದು ಅಲ್ಲವೆ? ಬೃಹದಾರಣ್ಯಕ ಉಪನಿಷತ್ತಿನಲ್ಲಿ ಯಾಜ್ಞವಲ್ಕ್ಯನು ಮೈತ್ರೇಯಿಗೆ ಬ್ರಹ್ಮವಿದ್ಯೆಯನ್ನು ಕಲಿಸಿದನೆಂದು ಹೇಳಿದೆ. ವೇದಗಳಲ್ಲಿ ಎರಡು ಭಾಗಗಳಿವೆ—ಅಜ್ಞಾನಿಗಳಿಗಾಗಿ ಕರ್ಮಕಾಂಡ, ವಿಜ್ಞಾನಿಗಳಿಗಾಗಿ ಜ್ಞಾನ ಕಾಂಡ. ಶಾಸ್ತ್ರಗಳನ್ನೇ ತೆಗೆದುಕೊಂಡರೂ ಅವುಗಳಲ್ಲೂ ಎರಡು ವಿಭಾಗಗಳಿರುತ್ತವೆ, ವಿದ್ವಾಂಸರ ಮತ್ತು ಆತ್ಮಜ್ಞಾನದ ಅನುಭವದಿಂದ ಹೇಳುವ ವಿವೇಕಿಗಳ ಮಾತುಗಳು. ಇವುಗಳಲ್ಲಿ ಕರ್ತೃತ್ವ ವಿಚಾರವನ್ನೆಲ್ಲ ತೊರೆದು, ಬ್ರಹ್ಮ ಮತ್ತು ಆತ್ಮ ಸಾಕ್ಷಾತ್ಕಾರ ಪಡೆದುದರ ಫಲವಾಗಿ, ಜೀವನದ ವೈವಿಧ್ಯ ಸಮಸ್ತದಲ್ಲೂ ಅದೇ ಆತ್ಮವು ಅಂತರ್ಗತವಾಗಿದೆ ಎಂದು ತಿಳಿದು ಯಾರು ನಡೆ ಯುವರೋ ಯಾರು ನನ್ನದು ನಿನ್ನದು ಎಂಬ ಭೇದವನ್ನು ಸಂಪೂರ್ಣವಾಗಿ ಹೋಗಲಾಡಿಸಿಕೊಂಡಿರುವರೋ ಸಕಲಚರಾಚರಗಳ ಕಲ್ಯಾಣವನ್ನೇ ಸದಾ ಯಾರು ಚಿಂತಿಸುತ್ತಾರೋ ಅಂತಹ ಆತ್ಮ ಜ್ಞಾನಿಗಳ ಮಾತುಗಳೀಗ ಅಸಲಿ ಯಾದವು, ಬೆಲೆ ಬಾಳುವಂಥವು.

ಬೃಹದಾರಣ್ಯಕದಲ್ಲಿ ಗಾರ್ಗಿ, ಮೈತ್ರೇಯಿ ಮೊದಲಾದ ವಿದ್ವನ್ ಮಹಿಳೆಯರ ಉಲ್ಲೇಖವಿದೆ. ಮಹಾಭಾರತದಲ್ಲಿ ಸುಲಭಾ ಮತ್ತು ಯೋಗಿನಿಯರ ಹೆಸರುಗಳು ಬರುತ್ತವೆ. ಇಂದಿನ ಮಹಿಳೆಯರು ಅವರ ಚಾರಿತ್ರ್ಯ, ಸಾಧನೆಗಳಿಂದ ಸ್ಫೂರ್ತಿ ಪಡೆದು ಅವರ ದಾರಿಯಲ್ಲಿ ಮುಂದೆ ಸಾಗಬೇಕು. ಆಗ ಮಾತ್ರವೇ ಸಿದ್ಧಿಯ ಶಿಖರಕ್ಕೇರುವ ಪ್ರಶ್ನೆ ಬರುವುದು. ಚೂಡಾಲಾ ಮದಾಲಸಾ ಮೊದಲಾದ ಸ್ತ್ರೀಯರು ಗೃಹಸ್ಥಾಶ್ರಮದಲ್ಲಿದ್ದುಕೊಂಡೇ ಬ್ರಹ್ಮಜ್ಞಾನವನ್ನು ಪಡೆದರು. ಸ್ತ್ರೀಯರೂ ಸಾಧನೆ ಯಿಂದ ಆ ಅಚಂಚಲವೂ ಅಸಮಾನವೂ ಮಂಗಳಕರವೂ ಆದ ಬ್ರಹ್ಮವನ್ನು ಪಡೆಯಬಹುದು. ಯೋಗವಾಸಿಷ್ಠದಲ್ಲೂ ಪುರಾಣಗಳಲ್ಲೂ ಇದನ್ನು ಸ್ಪಷ್ಟಪಡಿಸ

ಲಾಗಿದೆ. ಸಂದೇಹಗಳು ಕಾಡುವುದು ಶಾಸ್ತ್ರಗಳನ್ನು ಸರಿಯಾಗಿ ಅಧ್ಯಯನ ಮಾಡದಿರುವವರನ್ನು ಮಾತ್ರವೇ. ಮಹಿಳೆಯರಲ್ಲೇ ಬ್ರಹ್ಮಚಾರಿಣಿಯರು, ಗೃಹಸ್ಥೆಯರು, ವಾನಪ್ರಸ್ಥೆಯರು ತಮ್ಮ ಪರಿಶುದ್ಧ ಹೃದಯದಿಂದಲೂ ಪವಿತ್ರ ನಡವಳಿಕೆಯಿಂದಲೂ ಗುರಿಯನ್ನು ಸಾಧಿಸಿದ್ದಾರೆ. ಈ ಎರಡು ಗುಣಗಳನ್ನು ಪಡೆಯಲು ಎಲ್ಲ ಮಹಿಳೆಯರೂ ಶ್ರಮಿಸಬೇಕು.

"ಕಲೆ ಮತ್ತು ವಿಜ್ಞಾನಗಳನ್ನು ಕಲಿಸುವ ಉಪಾಧ್ಯಾಯನಿಗಿಂತ ಆಧ್ಯಾತ್ಮಿಕ ವಿಚಾರಗಳನ್ನು ಬೋಧಿಸುವ ಆಚಾರ್ಯನು ಹತ್ತು ಪಾಲು ಮೊದಲಾದವನು; ತಂದೆಯು ಆಚಾರ್ಯನಿಗಿಂಗತ ಹತ್ತು ಪಟ್ಟು ಮೇಲಾದವನು; ತಾಯಿಯಾದರೋ ತಂದೆಗಿಂತ ಸಾವಿರ ಪಾಲು ಮೇಲಾದವಳು"—ಇದು ಮನುಸ್ಮೃತಿಯಲ್ಲಿ ಮನುವು ಹೇಳಿರುವ ಮಾತು. ಅದೇ ಎಲ್ಲಾ ಧರ್ಮಶಾಸ್ತ್ರಗಳಿಗೂ ಆಧಾರವಾದ ಕೃತಿ. ಅದು ತಾಯಿಗೆ ಎಂಥ ಗೌರವವನ್ನು ಕೊಡುತ್ತದೆ ನೋಡಿ! ಸಿರಿಯ ಆದಿದೇವಿ ಲಕ್ಷ್ಮಿಯು ಹೆಣ್ಣು. ಸ್ತ್ರೀಯರಿಗೆ ಪತ್ರ ಬರೆಯುವಾಗ, "ಲಕ್ಷ್ಮೀ ಸಮಾನಳಾದ ... ಗೆ," ಎಂದು ಬರೆಯುವುದು ಸಂಪ್ರದಾಯ. ಮಹಿಳೆಯರು ಸಾರ್ವತ್ರಿಕ ಗೌರವಕ್ಕೆ, ಮನ್ನಣೆಗೆ ಅರ್ಹರಾಗಿದ್ದಾರೆ. ರಾಮ ಮತ್ತು ಕೃಷ್ಣ ಮೊದಲಾದ ಭಗವತ್ ಶಕ್ತಿಯ ಕಾರಣಾವತಾರಗಳು; ಶಂಕರ, ರಾಮಾನುಜ, ಮಧ್ವ ಮೊದಲಾದ ಧರ್ಮಸ್ಥಾಪಕರು; ಬುದ್ಧ, ಜೀಸಸ್, ಮಹಮ್ಮದ್ ಮೊದಲಾದ ಜ್ಞಾನಿಗಳೆಲ್ಲ ಹುಟ್ಟಿ ಬಂದದ್ದು ಮಹಿಳೆಯರಿಂದಲೇ ಅಲ್ಲವೇನು? ಅವರ ತಾಯಂದಿರು ಪವಿತ್ರ ಮಹಿಮಾನ್ವಿತರಾಗಿದ್ದರು, ಜಗತ್ತನ್ನೇ ಪರಿವರ್ತಿಸಿದ ಸತ್ಪುತ್ರರನ್ನು ಅವರು ನೀಡಿದರು. ಅವರು ಹೋದ ದಾರಿಯನ್ನು ಅನುಸರಿಸಿ ಪರಿಶುದ್ಧ ಜೀವನ ನಡೆಸುವವರು ಖಂಡಿತವಾಗಿಯೂ ಬ್ರಹ್ಮಜ್ಞಾನಕ್ಕೆ ಅರ್ಹತೆ ಪಡೆಯುತ್ತಾರೆ, ಯಾರೂ ಅದನ್ನು ಅವರಿಗೆ ವಂಚಿಸಲು ಸಾಧ್ಯವಿಲ್ಲ.

ವಾಸ್ತವವಾಗಿ ಆತ್ಮಕ್ಕೆ ಹೆಣ್ಣು, ಗಂಡು ಮೊದಲಾದ ಯಾವ ಭೇದವೂ ಇಲ್ಲ. ಅದು ನಿತ್ಯ, ಶುದ್ಧ, ಬುದ್ಧ, ಸ್ವಯಂ ಜ್ಯೋತಿ. ಅದು ಶಾಶ್ವತವಾದ ಪರಿಶುದ್ಧ ಪ್ರಜ್ಞೆ, ಸ್ವಯಂ ಪ್ರಕಾಶಿತವಾದದ್ದು. ಮಹಿಳೆಯರು ಆತ್ಮದ ಸ್ವರೂಪವನ್ನು ಅರಿತಾಗ ಮಾತ್ರವೇ ಆ ಪವಿತ್ರ ಸ್ತ್ರೀಯರ ಮಟ್ಟವನ್ನು ತಲುಪುವುದು ಸಾಧ್ಯ.

ವಿದ್ಯೆ (ಸರಸ್ವತಿ), ಐಶ್ವರ್ಯ (ಲಕ್ಷ್ಮಿ), ಜ್ಞಾನಗಳ (ಪಾರ್ವತಿ) ಅಧಿದೇವತೆಗಳೆಲ್ಲ ಸ್ತ್ರೀಯರೇ. ಆದ್ದರಿಂದ ಆಧ್ಯಾತ್ಮಿಕ ಸಾಧನೆಗೆ, ಆ ಮೂಲಕ ಬ್ರಹ್ಮದಲ್ಲಿ ಐಕ್ಯ ಹೊಂದಿ, ಬಂಧನದಿಂದ ಬಿಡುಗಡೆ ಹೊಂದುವುದಕ್ಕೆ ಮಹಿಳೆಯರಿಗೆ ಹಕ್ಕಿಲ್ಲ ಎನ್ನುವುದನ್ನು ನಂಬುವುದು ಸಾಧ್ಯವೇ ಇಲ್ಲ. ಮಲಗಿರುವ ಸಿಂಹಕ್ಕೆ ತನ್ನ ಸ್ವಭಾವದ

ಅರಿವಿರುವುದಿಲ್ಲ. ಮಾಯೆಯ ಸುಳಿಗೆ ಸಿಕ್ಕಿ ನಿದ್ರಿಸುತ್ತಿರುವ ಮನುಷ್ಯನಿಗೆ ತಾನು ಭವ್ಯವಾದ ಆತ್ಮವೆಂಬ ಅರಿವು ಇರುವುದಿಲ್ಲ. ಅಜ್ಞಾನದ ಈ ನೆಲೆಯಲ್ಲಿ ಆತನು ತನ್ನ ಪೂರ್ವಗ್ರಹಗಳನ್ನೇ ಹೇಳುತ್ತಾನೆ, ಅದಕ್ಕೆ ಶಾಸ್ತ್ರದ ಮುದ್ರೆಯನ್ನೂ ಒತ್ತುತ್ತಾನೆ. ಆದರೆ ಯಾವ ಕಾಲದಲ್ಲೂ ಶಾಸ್ತ್ರಗಳು ಹಾಗೆ ಹೇಳುವುದಿಲ್ಲ.

ಶಾಸ್ತ್ರವು ಮನುಷ್ಯನ ನೇತ್ರ; ಅದು ದಾರಿ ತೋರಿಸುವ, ಬೆಳಗುವ ಕಣ್ಣು. ಅದರ ಸೂಚನೆಗಳನ್ನು ಅನುಸರಿಸಬೇಕು; ಅದೇ ಮನುಷ್ಯನ ಕರ್ತವ್ಯ. ಇಂದು ಜಗತ್ತಿನೆದುರಿಗಿರುವ ಬಹು ದೊಡ್ಡ ಕೆಲಸ ಇದೇಯೆ. ಶಾಸ್ತ್ರಗಳನ್ನು ಪೂರ್ತಿಯಾಗಿ ಅರ್ಥ ಮಾಡಿಕೊಂಡದ್ದೇ ಆದರೆ ಯಾವ ಸಂದೇಹವೂ ಏಳುವುದಿಲ್ಲ. ಯಾವ ಚರ್ಚೆಯ ಅವಶ್ಯಕತೆಯೂ ಬರುವುದಿಲ್ಲ.

ನಿಮಗೆ ಅನುಕೂಲಕರವಾಗಿರುವ ಅಂಶಗಳನ್ನು ಹೆಕ್ಕಿ ತೆಗೆದು ಅವನ್ನು ಶಾಸ್ತ್ರಗಳ ಮೇಲೆ ಹೇರುವುದು ಸರಿಯಲ್ಲ. ಹಾಗೆಯೇ ಶಾಸ್ತ್ರಗಳು ವಿಧಿಸಿರುವುದಕ್ಕೆ ವಿರುದ್ಧವಾಗಿ ಹೋಗುವುದೂ ಯುಕ್ತವಲ್ಲ. ಅವುಗಳನ್ನು ಪ್ರಶ್ನಿಸುವುದು, ಅವುಗಳ ವಿಧಿಗಳನ್ನು ಕುರಿತು ಲಘುವಾಗಿ ಮಾತನಾಡುವುದು ಇದೂ ತಪ್ಪು. ಜಗತ್ತು ಇಂದು ಈ ವಿಷಾದಕರ ಪರಿಸ್ಥಿತಿಗೆ ಬಂದಿರುವುದಕ್ಕೆ ಕಾರಣವೇ ಶಾಸ್ತ್ರಗಳನ್ನು ಆಚರಣೆಯಲ್ಲಿ ಅಲಕ್ಷಿಸಿರುವುದು. ಇದು ನಿಜವಾಗಿಯೂ ದುರಂತ, ನೈತಿಕ ಪತನ.

ಮೋಕ್ಷವನ್ನು ಅಪೇಕ್ಷಿಸುವವರು ಮೊದಲು ಚಾರಿತ್ರವನ್ನು ಉತ್ತಮಪಡಿಸಿಕೊಳ್ಳಲು ಹಾಗೂ ಭಾವನೆಗಳನ್ನು ಶುದ್ಧಪಡಿಸಿಕೊಳ್ಳಲು ಶಾಸ್ತ್ರಗಳು ವಿಧಿಸಿರುವ ನಿಯಮ ನಿಬಂಧನೆಗಳನ್ನು ಆಚರಿಸಬೇಕು. ಅದಿಲ್ಲದೆ ಸುಮ್ಮನೆ ಶಾಸ್ತ್ರಗಳನ್ನು ಕಷ್ಟಪಟ್ಟು ಅಧ್ಯಯನ ಮಾಡಿದರೆ ಅದು ಕೇವಲ ಹೊರೆ ಅಷ್ಟೆ. ಅಂತಹ ವಿದ್ವಾಂಸರು ಸಿಹಿ ತಿಂಡಿಗಳನ್ನು ಕಲಕುವ ಚಮಚೆಗಳಿದ್ದ ಹಾಗೆ. ಅದರ ರುಚಿಯನ್ನಂತೂ ಅವು ನೋಡುವುದಿಲ್ಲ. ಮುಂಡಕ ಉಪನಿಷತ್ತು ಶಾಸ್ತ್ರಗಳ ಸಾರವನ್ನು ಅರಗಿಸಿಕೊಂಡಿರದ ವಿದ್ವಾಂಸರನ್ನು, ತಮಗೇ ಅಜ್ಞಾನವಿದ್ದರೂ ಇತರರಿಗೆ ಮಾರ್ಗದರ್ಶನ ಮಾಡುವವರನ್ನು ಕುರುಡರಿಗೆ ಹೋಲಿಸುತ್ತದೆ. ಅದರ ಫಲವಾದರೂ ದಾರಿ ತೋರಿಸುವವನು, ತೋರಿಸಿಕೊಂಡವನು ಇಬ್ಬರೂ ಬಾವಿಗೆ ಬೀಳುವುದೇ!

ಶಾಸ್ತ್ರಗಳ ಜ್ಞಾನವಿಲ್ಲದೆಯೂ ಅನುಭವ ಮತ್ತು ಆಚರಣೆಗಳಿಂದ ಪಡೆದ ಜ್ಞಾನ ವಿದ್ದರೆ ಅದರಿಂದ ಗುರಿಯನ್ನು ಮುಟ್ಟಬಹುದು. ನಿಮಗೆ ತುಂಬಾ ಪರಿಚಯವಾಗಿರುವ ದಾರಿಯಲ್ಲಿ ಇತರರನ್ನು ಕರೆದೊಯ್ಯಬಹುದು. ಮಂದ ಬುದ್ಧಿಗೆ ಶಾಸ್ತ್ರಗಳ ಅಗತ್ಯ ತಿಳಿಯುವುದಿಲ್ಲ, ಹಾಗೆಯೇ ಸದಾ ಕಾಲವೂ ಸರ್ವಪರಿಸ್ಥಿತಿಗಳಲ್ಲೂ

ಬ್ರಹ್ಮ ಚಿಂತನೆಯಲ್ಲೇ ಮುಳುಗಿ, ಆ ಆನಂದವನ್ನು ಸವಿಯುತ್ತಿರುವವನಿಗೂ ಶಾಸ್ತ್ರಗಳ ಅವಶ್ಯಕತೆಯಿಲ್ಲ. ಕಟ್ಟುನಿಟ್ಟಾಗಿ ಸತ್ಯ ಮತ್ತು ಧರ್ಮಗಳಿಗೆ ಬದ್ಧನಾಗಿ ನಡೆಯುವುದು ಕಷ್ಟವಾಗಬಹುದು ಆದರೆ, ಕೊನೆಯಲ್ಲಿ ನಿಮಗೆ ಕಾದಿರುವ ಆನಂದವನ್ನು ದೃಷ್ಟಿಯಲ್ಲಿಟ್ಟುಕೊಂಡು ಆ ಕಷ್ಟಗಳನ್ನು ಸಂತೋಷವಾಗಿ ಸಹಿಸಿ ಕೊಳ್ಳಬೇಕು. ಬುದ್ಧಿವಂತರು ಮಾತ್ರವೇ ಸತ್ಯವನ್ನು ಅರಿತು ತಮ್ಮನ್ನು ರಕ್ಷಿಸಿಕೊಳ್ಳ ಬಲ್ಲರು, ಮಿಕ್ಕವರು ಬದ್ಧರಾಗಿಯೇ ಉಳಿಯುವರು.

ಯುಗಗಳನ್ನು ಆಗ ಪ್ರಧಾನವಾಗಿದ್ದ ಮನಸ್ಥಿತಿಯ ಆಧಾರದಿಂದ ವರ್ಗೀಕರಿಸಲಾ ಗಿದೆ. ಕೃತಯುಗದಲ್ಲಿ ಧರ್ಮವು ನಾಲ್ಕು ಕಾಲುಗಳಿಂದ ನಡೆಯುತ್ತಿದ್ದಿತು, ಸಂತೋ ಷವಾಗಿ ಸುಖವಾಗಿ ಇದ್ದಿತು ಎಂದು ಹೇಳಲಾಗಿದೆ. ತ್ರೇತಾಯುಗದಲ್ಲಿ ಅದಕ್ಕೆ ಮೂರೇ ಕಾಲುಗಳಾದುವು. ದ್ವಾಪರ ಯುಗದಲ್ಲಿ ಎರಡು ಕಾಲುಗಳ ಮೇಲೆ ತತ್ತರಿಸಬೇಕಾಯಿತು! ಈಗ ಕಲಿಯುಗದಲ್ಲಿ ಧರ್ಮಕ್ಕೆ ಒಂದೇ ಒಂದು ಕಾಲು ಉಳಿದಿದೆ. ಸತ್ಯ, ದಯೆ, ತಪಸ್ಸು ಮತ್ತು ದಾನಗಳೇ ಆ ನಾಲ್ಕು ಕಾಲುಗಳು. ಈ ನಾಲ್ಕೂ ಇರುವ ಮನುಷ್ಯನು ಕೃತಯುಗದಲ್ಲಿ ಇದ್ದಾನೆ ಎಂದು ಹೇಳಬಹುದು. ಪಂಚಾಂಗದ ರೀತ್ಯಾ ಅದು ಯಾವುದೇ ಯುಗವಾಗಿರಲಿ ವ್ಯಕ್ತಿಯಲ್ಲಿ ಸತ್ಯವೊಂದು ಸ್ಥಿರವಾಗಿಲ್ಲದೆ ಮಿಕ್ಕ ಮೂರು ಗುಣಗಳಿದ್ದರೆ ಅವನು ತ್ರೇತಾಯುಗದಲ್ಲಿ ಇದ್ದಾನೆ. ಸತ್ಯ, ದಯೆ ಎರಡೂ ಇಲ್ಲದೆ ತಪಸ್ಸು ಮತ್ತು ದಾನಗಳನ್ನು ಆಚರಿಸುತ್ತಿದ್ದರೆ ಆ ಸ್ಥಿತಿಯಲ್ಲಿರುವವರನ್ನು ದ್ವಾಪರ ಯುಗದಲ್ಲಿದ್ದಾನೆ ಎಂದು ಹೇಳಬೇಕಾಗುತ್ತದೆ. ನಾಲ್ಕರಲ್ಲಿ ದಾನವೊಂದೇ ಉಳಿದಿದ್ದರೆ, ಧರ್ಮವು ಒಂಟಿ ಕಾಲಿನ ಮೇಲೆ ನಿಂತ ಹಾಗೆ, ಆ ವ್ಯಕ್ತಿಯು ಕಲಿಯುಗದಲ್ಲಿ ಇರುತ್ತಾನೆ. ಧರ್ಮದಲ್ಲಾಗುವ ಬದಲಾವಣೆಯಿಂದ ಯುಗಗಳು ಬದಲಾಗುತ್ತವೆ, ಕೇವಲ ಕಾಲವು ಸರಿಯುವುದ ರಿಂದ ಅಲ್ಲ. ದುಷ್ಟನಾದ ಹಿರಣ್ಯಕಶಿಪು, ಶುದ್ಧಾತ್ಮನಾದ ಪ್ರಹ್ಲಾದ ಇಬ್ಬರೂ ಒಂದೇ ಕಾಲದಲ್ಲಿದ್ದರು. ಧರ್ಮ ಶಾಂತಿಗಳ ಮೂರ್ತಿರೂಪನಾದ ಧರ್ಮರಾಜನೂ ವಂಚಕ, ದುಷ್ಟ ದುರ್ಯೋಧನನೂ ಒಂದೇ ಕಾಲದಲ್ಲೇ ಇದ್ದರು. ಆದ್ದರಿಂದ ಪ್ರತಿಯೊಬ್ಬನಿಗೂ ಯುಗವನ್ನು ನಿರ್ಧರಿಸುವುದು ಧರ್ಮ. ಒಬ್ಬನು ಬೇಕಾದರೆ ಸದಾ ಕಾಲವೂ ಕೃತಯುಗದಲ್ಲಿಯೇ ಇರಬಹುದು. ಧರ್ಮದ ನಾಲ್ಕು ಗುಣ ಗಳನ್ನೂ ಅನುಸರಿಸುತ್ತಿದ್ದರೆ. ಇತಿಹಾಸವನ್ನು ಮಾಡುವುದು ಅಥವಾ ಅದಕ್ಕೆ ಮಾರಕನಾಗುವುದು, ಕಬ್ಬಿಣದ ಯುಗವನ್ನು ಚಿನ್ನದ ಯುಗವಾಗಿ ಪರಿವರ್ತಿಸು ವುದು ಮನುಷ್ಯನ ನಡವಳಿಕೆಯೇ.

ಅಧ್ಯಾಯ ೧೦

# ಭಗವನ್ನಿವಾಸ

ಇನ್ನು ಭಗವಂತನ ಮನೆಯನ್ನು, ಭಗವತ್ ಶಕ್ತಿಯ ಸಾಕಾರ ರೂಪವಿರುವ ಎಡೆಯನ್ನು ಕುರಿತು ಸ್ವಲ್ಪ ವಿಚಾರ ಮಾಡೋಣ. ದೇವಾಲಯ ಮತ್ತು ಅದಕ್ಕೆ ಸಂಬಂಧಿಸಿದ ಧರ್ಮ ನಿಯಮಗಳನ್ನು ನೋಡೋಣ. ವಿವಿಧ ಪ್ರಮಾಣಗಳ ಇಚ್ಛೆಗಳು ಮತ್ತು ಪೂರ್ವಗ್ರಹಗಳಿಂದಾಗಿ ಈ ಸಂಸ್ಥೆಗೆ ಸಂಬಂಧಿಸಿದ ನಿಯಮಗಳು ಅಡ್ಡಾದಿಡ್ಡಿ ಬೆಳೆದುಬಿಟ್ಟಿವೆ. ಅವು ಜನರನ್ನು ಧರ್ಮದಿಂದಲೂ ಬ್ರಹ್ಮದಿಂದಲೂ ಕೊನೆಗೆ ವಿಹಿತ ಕರ್ಮದಿಂದಲೂ ದೂರ ಸೆಳೆದುಬಿಟ್ಟಿವೆ. ತಮ್ಮ ವೈವಿಧ್ಯ ಹಾಗೂ ತರ್ಕಹೀನತೆಗಳಿಂದ ಭಕ್ತರು ದಿಗ್ಭ್ರಮೆಗೊಳ್ಳುವಂತೆ ಮಾಡಿವೆ. ಕುರುಡು ಕುರುಡಾಗಿ ತಾವು ಹೇಳುವುದು ಸರಿ ಎಂದು ಪಟ್ಟು ಹಿಡಿಯುವುದರಿಂದ ಅವು ಜಗತ್ತಿನ ಒಳಿತಿಗೆ ಹಾನಿಯನ್ನುಂಟುಮಾಡಿವೆ. ವಾಸ್ತವವಾಗಿ ಈ ನಿಯಮಾವಳಿಗಳು ಮತ್ತು ಔಪಚಾರಿಕತೆಗಳು ಭಗವಂತನಿಂದ ದೂರ ಹೋಗಲು ಮೊದಲ ಹೆಜ್ಜೆಯಾಗಿ ಪರಿಣಮಿಸಿವೆ. ಅಪಾರ ಪ್ರಮಾಣದಲ್ಲಿ ಅವು ನಾಸ್ತಿಕ್ಯವನ್ನು ಪೋಷಿಸಿವೆ.

ದೇವಾಲಯದ ಕರ್ತವ್ಯಗಳನ್ನು ಕುರಿತು ಆಳವಾಗಿ ಯೋಚನೆ ಮಾಡಿ. ಅವು ಸಾಧನೆಯ ಕೇಂದ್ರಗಳು. ಸಾಧಕನಿಗೆ ಅಲ್ಲಿ ಹಂತಹಂತವಾಗಿ ಮಾರ್ಗದರ್ಶನ ಮಾಡಿ ಅವನು ಸತ್ಯದ ದರ್ಶನ ಪಡೆಯುವಂತೆ ಮಾಡಬೇಕು. ಅವು ಆತ್ಮದ ತರಬೇತಿಗಾಗಿ ಇರುವ ಶಾಲೆಗಳು; ಶಾಸ್ತ್ರಾಧ್ಯಯನಕ್ಕಾಗಿ ಇರುವ ಅಕಾಡೆಮಿಗಳು; ಸರ್ವೋನ್ನತ ವಿಜ್ಞಾನ ಸಂಸ್ಥೆಗಳು; ಬದುಕಿನ ಮೌಲ್ಯಗಳನ್ನು ಪರೀಕ್ಷೆ ಮಾಡುವ ಪ್ರಯೋಗಶಾಲೆಗಳು; ಯುಗಾಂತರಗಳಿಂದ ವ್ಯಕ್ತಿಯನ್ನು ಕಾಡುತ್ತಿರುವ ಜನನ ಮರಣ ರೋಗಕ್ಕೆ ಚಿಕಿತ್ಸೆ ಮಾಡಿ ಗುಣಪಡಿಸುವ ಆಸ್ಪತ್ರೆಗಳು. ಅಷ್ಟು ಮಾತ್ರವಲ್ಲ, ಶಾಂತಿಯನ್ನು ಗಳಿಸುವ ಮಾರ್ಗದ ರಹಸ್ಯವನ್ನು ಅರಿಯಲಾರದವರನ್ನು ಕಾಡುವ ಮಾನಸಿಕ ವ್ಯಾಧಿಗಳಿಗೂ ಚಿಕಿತ್ಸೆ ನೀಡುವ ಸ್ಥಳಗಳು; ಮನುಷ್ಯನು ಪುನಶ್ಚೇತನಗೊಂಡು ಅವನ ಸಂದೇಹ, ಕ್ಷಯಿಸುತ್ತಿರುವ ಶ್ರದ್ಧೆ, ಬೆಳೆಯುತ್ತಿರುವ ಅಹಂಕಾರ ಇವುಗಳನ್ನು ಗುಣಪಡಿಸುವ ವ್ಯಾಯಮ ಶಾಲೆಗಳು. ಅವನ ಸೌಂದರ್ಯ ಸಾಧನೆಯ ಹಂತವನ್ನೂ ಸಿದ್ಧಿಗಳನ್ನೂ ಪ್ರತಿಬಿಂಬಿಸುವ ಕನ್ನಡಿಗಳು. ದೇವಾಲಯದ ಉದ್ದೇಶ ಮಾನವ ತತ್ತ್ವದಲ್ಲಿ ಮಾಧವ ತತ್ತ್ವವನ್ನು ಜಾಗೃತಗೊಳಿಸುವುದು, ಮಾನವತ್ವದಲ್ಲಿ

ದೈವತ್ವವನ್ನು ಅರಳಿಸುವುದು, ತನ್ನ ದೇಹವೇ ಭಗವಂತನು ವಾಸ ಮಾಡುವ ಮನೆ ಎಂದು ಅವನು ನಂಬುವಂತೆ ಪ್ರೇರಿಸುವುದು. ಆದ್ದರಿಂದ ದೇವಾಲಯದ ವಿಧಿ ವಿಧಾನಗಳು, ನಿಯಮಾವಳಿಗಳು, ಆಚರಣೆಗಳು ಎಲ್ಲವೂ ಜೀವಿಯು ಸಾಗರದ ಒಂದು ಅಲೆ ಮಾತ್ರ ಎಂಬ ಸತ್ಯವನ್ನು ಒತ್ತಾಯಪೂರ್ವಕವಾಗಿ ಹೇಳಿ ಬ್ರಹ್ಮಜ್ಞಾನವನ್ನು ಬೆಳೆಸುತ್ತಿವೆ.

ಶಾಸ್ತ್ರಗಳು ಮನುಷ್ಯನಿಗೆ ಅವನ ಎಲ್ಲಾ ಕಾರ್ಯಚಟುವಟಿಕೆಗಳು ಅಂತಿಮವಾಗಿ ನಿರ್ಮೋಹಕ್ಕೆ ಒಯ್ಯುತ್ತವೆ ಎಂದು ಹೇಳುತ್ತವೆ. ಏಕೆಂದರೆ ಬ್ರಹ್ಮಜ್ಞಾನದ ವಿಕಾಸಕ್ಕೆ ಅದೇ ಅತ್ಯುತ್ತಮ ಅರ್ಹತೆ. ಭಕ್ತಿ, ಜ್ಞಾನ, ವೈರಾಗ್ಯ ಈ ಮೂರರಲ್ಲಿ ಭಕ್ತಿಯು ರಾಣಿ ಇದ್ದ ಹಾಗೆ. ನಿಯಮಗಳು ಮತ್ತು ವಿಧಿಗಳು ಆಕೆಯ ದಾಸಿಯರು; ರಾಣಿಯು ದಾಸಿಯರನ್ನು ಬಹಳ ಸಹಾನುಭೂತಿಯಿಂದ, ಒಲುಮೆಯಿಂದ ನಡೆಸಿಕೊಳ್ಳುತ್ತಾಳೆ. ಆದರೆ ಸೇವಕಿಯರು, ದಾಸಿಯರು ಆದ ಆಚರಣೆಗಳು ರಾಣಿಗೆ ಅಗೌರವ ತೋರಿಸಿದರೆ ಒಡನೆಯೇ ನಿರ್ದಾಕ್ಷಿಣ್ಯವಾಗಿ ಅವರನ್ನು ವಜಾ ಮಾಡಬೇಕಾಗುತ್ತದೆ. ಆದ್ದರಿಂದ ದೇವಾಲಯದ ವಿಧಿಗಳೆಲ್ಲವೂ ಭಕ್ತಿಯೆಂಬ ರಾಣಿಯ ಸೇವೆ ಮಾಡಬೇಕು; ಇದೇ ಎಲ್ಲ ದೇವಾಲಯಗಳು ಹೊಂದಿರಬೇಕಾದ ಧರ್ಮ. ಆಗ ದೇವಾಲಯದ ಮೂಲಕ ಮನುಷ್ಯನು ಗುರಿಯನ್ನು ಮುಟ್ಟಬಹುದು.

ಮಾನಸಿಕ ತುಮುಲಗಳನ್ನು, ಇಂದ್ರಿಯಗಳ ಚಡಪಡಿಕೆಯನ್ನು, ಭಾವನಾ ಒತ್ತಡ ಗಳನ್ನು ಭಗವಂತನ ಕಡೆಗೆ ತಿರುಗಿಸಿ, ಮೂಲ ಬ್ರಹ್ಮದೊಂದಿಗೆ ವಿಲೀನವಾಗುವ ಆನಂದವನ್ನು ಸುಲಭವಾಗಿ ಸಾಧಿಸಲು ಭಕ್ತಿಯು ಸಹಾಯಮಾಡುತ್ತದೆ. ದೇವಾ ಲಯಗಳಲ್ಲಿ ಭಗವಂತನ ಪೂಜೆಗೆ ಸಂಬಂಧಿಸಿದ ಎಲ್ಲ ವಿವರಗಳೂ ರೂಪು ಗೊಂಡದ್ದು ಈ ದಿಕ್ಕಿನಲ್ಲಿಯೇ. ಬೆಳಗಿನ ಜಾವದ ಸುಪ್ರಭಾತದಿಂದ ರಾತ್ರಿ ಶಯ ನೋತ್ಸವದವರೆಗೆ ನಡೆಯುವ ಎಲ್ಲ ಆಚರಣೆಗಳ ಉದ್ದೇಶ ಮನಸ್ಸಿನಲ್ಲಿ ಭಕ್ತಿ ಭಾವವನ್ನು ಬೆಳೆಸುವುದು. ಪ್ರತಿಯೊಂದು ಆರಾಧನೆಯೂ ಅದಕ್ಕೆ ತಕ್ಕ ಭಾವವನ್ನು ರಮ್ಯವಾಗಿ ದೈವೀಕರಿಸುತ್ತದೆ. ಆ ಅನುಭವದ ಭವ್ಯತೆಯಲ್ಲಿ ಕೆಳಮಟ್ಟದ ಭಾವೋ ದ್ವೇಗಗಳು ಕ್ಷಯಿಸಿ ಮಾಯವಾಗುತ್ತವೆ. ಸಾಮಾನ್ಯ ಜೀವನದ ಅಲ್ಪ ಭಾವನೆಗಳು ಭಗವತ್ಸನ್ನಿಧಿಯಲ್ಲಿ ಪೂಜೆ ಮತ್ತು ಸಮರ್ಪಣೆಗಳ ಹಂತಕ್ಕೆ ಏರಿಬಿಡುತ್ತವೆ.

ವ್ಯಕ್ತಿಯು ಯಾವ ಭಾವದಿಂದ ತನ್ನೊಂದಿಗೆ ವ್ಯವಹರಿಸುತ್ತಾನೋ ಭಗವಂತನು ಅವನಲ್ಲಿ ಆ ಭಾವವನ್ನೇ ಉದ್ಬೋಧಿಸುತ್ತಾನೆ. ಅವನನ್ನು ಒಬ್ಬ ರಾಕ್ಷಸ ಭೂತ ಎಂದು ಕಲ್ಪಿಸಿಕೊಂಡರೆ ಭೂತವಾಗಿಯೇ ಹೆದರಿಸುತ್ತಾನೆ; ಅವನನ್ನು ಭೂತನಾಥ

ನೆಂದು ಚಿತ್ರಿಸಿಕೊಂಡು ನಂಬಿದ ಪಕ್ಷದಲ್ಲಿ (ಪಂಚ ಭೂತಗಳ ಒಡೆಯ) ಹಾಗೆಯೇ ಪ್ರಕಟವಾಗುತ್ತಾನೆ. ಅದು ಹೇಗೆ ಎಂದು ನೀವು ಕೇಳಬಹುದು.

ಸಲಹೆ ಕೊಡುವುದು ಈಗ ಒಂದು ಫ್ಯಾಷನ್ ಆಗಿದೆ. ತಿಳಿದವರು, ತಿಳಿಯದವರು ಎಲ್ಲರೂ ಸಲಹೆ ಕೊಡುತ್ತಾರೆ. ಅದನ್ನು ಪಾಲಿಸಲಾಗುತ್ತದೆಯೋ ಇಲ್ಲವೋ ಎಂಬ ಬಗೆಗೆ ಅವರು ಲಕ್ಷಿಸುವುದಿಲ್ಲ. ತಾವು ಮುಖ್ಯರಾದವರು ಎನಿಸಿಕೊಳ್ಳಲು, ತಮ್ಮ ಮೇಲ್ಮಟ್ಟವನ್ನು ಪ್ರದರ್ಶಿಸಲು ಹೀಗೆ ಸಲಹೆ ಕೊಡಲು ಅವರು ಮುಂದಾಗುತ್ತಾರೆ. ವಾಸ್ತವವಾಗಿ ಅವರು ಅಹಂಕಾರದಿಂದ ಕುರುಡಾಗಿದ್ದಾರೆ. ಇವರನ್ನು ನಿಂದಿಸ ಬಾರದು, ಅಯ್ಯೋ ಪಾಪ ಎನ್ನಬೇಕು. ಏಕೆಂದರೆ ಭಗವಂತನಿಗೆ ಸಂಬಂಧಿಸಿದಂತೆ ಯಾರೂ "ಹೀಗೆ, ಹೀಗೆ ಮಾತ್ರ ಮಾಡತಕ್ಕದ್ದು," ಎಂದು ವಿಧಿಸಲು ಸಾಧ್ಯವಿಲ್ಲ.

ಅಲ್ಲದೆ ಜ್ಞಾನಕ್ಕೆ ಮತ್ತು ವೈರಾಗ್ಯಕ್ಕೆ ಒಂದು ರೀತಿಯಲ್ಲಿ ಮಾನಕವಿರುವುದಾದರೂ ಭಕ್ತಿ ಮಾತ್ರ ಬೇರೆ. ಅದರ ಮಾನಕವೇ ಅದು ಭಕ್ತನ ಪ್ರವೃತ್ತಿಗೆ ತಕ್ಕ ಹಾಗೆ ಅನೇಕ ರೂಪಗಳನ್ನು ಧರಿಸಬಹುದು. ಕಂಸ, ಜರಾಸಂಧ, ಶಿಶುಪಾಲ, ಹಿರಣ್ಯಕಶಿಪು ಮೊದಲಾದವರು ಭಗವಂತನಲ್ಲಿ ವೈರಭಾವವನ್ನು ತಳೆದರು. ಆದ್ದರಿಂದ ಭಗ ವಂತನು ಅವರ ವೈರಿಯಾಗಿಯೇ ಪ್ರಕಟವಾಗಿ ಅವರ ಬದುಕನ್ನು, ಹೋರಾಟ ವನ್ನು ಮುಗಿಸಿದನು. ಜಯದೇವ, ಗೌರಾಂಗ, ತುಕಾರಾಮ, ರಾಮದಾಸ, ಸೂರ ದಾಸ, ರಾಧಾ, ಮೀರಾ, ಸಕ್ಕೂಬಾಯಿ, ಇವರು ಮಾಡಿದಂತೆ ಭಗವಂತನನ್ನು ಅತ್ಯಂತ ಪ್ರೀತಿಪಾತ್ರನೆಂದು ಕಲ್ಪಿಸಿಕೊಂಡದ್ದೇ ಆದರೆ, ಅವನು ಅತ್ಯಂತ ಪ್ರೀತಿಪಾತ್ರ ನಾಗಿ ಕಾಣಿಸಿಕೊಂಡು ಆನಂದದ ಮಳೆಗರೆಯುತ್ತಾನೆ. ಪುಟ್ಟ ಮಗುವು ಸೂರ್ಯ ಬಿಂಬವನ್ನು ತನ್ನ ತಾಯಿಯ ಹಣೆಯ ಮೇಲಿರುವ ಕುಂಕುಮದ ಬೊಟ್ಟು ಎಂದು ಭಾವಿಸುತ್ತದೆ; ಬೆಳೆದವನು ಅದೊಂದು ಕಾಂತಿಯುಕ್ತವಾದ ತಾಪದ ಉಂಡೆ ಎಂದು ತಿಳಿದುಕೊಳ್ಳುತ್ತಾನೆ. ಇದು ಗ್ರಹಿಕೆಯ ಪ್ರಕ್ರಿಯೆಯ ಮೇಲೆ ಮಾನಸಿಕ ಚಿತ್ರದ ಪರಿಣಾಮ ಎಂಥದು ಎನ್ನುವುದನ್ನು ತೋರಿಸುತ್ತದೆ. ದೇವಾಲಯ, ಭಗವತ್ ಶಕ್ತಿಗಳ ವಿಷಯದಲ್ಲೂ ಇದೇ ನಿಯಮ ಅನ್ವಯಿಸುತ್ತದೆ.

ಮನುಷ್ಯನು ದೇವರ ಮತ್ತು ಅವನ ವಾಸಸ್ಥಾನವಾದ ದೇವಾಲಯದ ಬಗೆಗೆ ಉನ್ನತವಾದ ಭಾವನೆಯನ್ನು ಹೊಂದಿರಬೇಕಾದದ್ದು ಸೂಕ್ತ. ಈ ಭಾವನೆಯಿಂದ ತುಂಬ ಪ್ರಯೋಜನವಿದೆ. ಮಾಧವನನ್ನು ಮಾನವ ಆಕಾರದಲ್ಲಿ ಚಿತ್ರಿಸಿಕೊಳ್ಳು ವುದು ಸೂಕ್ತ ಮತ್ತು ಸಹಜವಾದರೂ ಅವನು ಸಾಮಾನ್ಯ ಮಾನವ ಜೀವಿಯೆಂದು ಭಾವಿಸುವುದು ಸರಿಯಲ್ಲ. ಆತನನ್ನು ಅಸಾಧಾರಣ ಮಾನವನಂತೆ, ಭವ್ಯ ಮಹಿಮಾ ಪೂರ್ಣನೆಂಬಂತೆ ಕಲ್ಪಿಸಿಕೊಳ್ಳುವುದು ಸರಿ. ಅದು ಭಕ್ತಿಯ ತತ್ತ್ವ.

ಪೂಜೆಯ ಸಮಯದಲ್ಲಿ ಮನಸ್ಸಿನಲ್ಲಿರುವ ಭಾವನೆಯು ಮಧುರವಾಗಿರಬೇಕು, ಇಂಪಾಗಿರಬೇಕು, ಜಡವಸ್ತುಗಳಿಗೆ ಬದ್ಧನಾದ ಮಾನವನ ಅಲ್ಪ ಆಸೆಗಳನ್ನು ಹಂಬಲಗಳನ್ನು ಅರಿವಾಗದಂತೆಯೇ ಪರಿವರ್ತಿಸಬೇಕು. ಮಾನವನಲ್ಲಿ ಸುಪ್ತ ವಾಗಿರುವ ಪಾಶವೀ ಪ್ರವೃತ್ತಿಗಳನ್ನು ಅದು ಜಾಗ್ರತಗೊಳಿಸಬಾರದು ಅಥವಾ ಕೆರಳಿಸಬಾರದು. ಈ ಉದಾಹರಣೆಯನ್ನು ತೆಗೆದುಕೊಳ್ಳಿ. ತ್ಯಾಗರಾಜರು ಶ್ರೀರಾಮ ಚಂದ್ರನನ್ನು ಮಲಗಿಸುವ ಭರದಲ್ಲಿ ತಾವು ಮಲಗಬೇಕೆಂಬುದನ್ನೇ ಮರೆತರು. ಇಲ್ಲಿ ತ್ಯಾಗರಾಜರು ಒಂದು ಉಯ್ಯಾಲೆಯ ಮೇಲೆ ರಾಮನು ಮಲಗಿಕೊಳ್ಳುವಂತೆ ಮಾಡಿದರು ಎಂದು ನೀವು ಕಲ್ಪಿಸಬಾರದು. ರಾಮನು ತ್ಯಾಗರಾಜರನ್ನು ಭಕ್ತಿಯ ಉಯ್ಯಾಲೆಯ ಮೇಲೆ ಕೂರಿಸಿ ಮೃದುವಾಗಿ ತೂಗಿ ನಿದ್ರೆ ಮಾಡಿಸಿದನು (ಲೌಕಿಕ ವಾದ ಎಲ್ಲ ವಿಚಾರಗಳನ್ನೂ ಮರೆಯುವಂತೆ ಮಾಡಿದನು) ಎಂದು ಕಲ್ಪಿಸಿಕೊಳ್ಳ ಬೇಕು. ಬೆಳ್ಳಿ ಅಥವಾ ಚಿನ್ನದ ತೊಟ್ಟಿಲಲ್ಲಿ ನಿಮ್ಮ ಇಷ್ಟ ದೈವವನ್ನು ಮಲಗಿಸಿ ತೂಗುವಾಗ ನಿಮ್ಮ ಮಗುವೇ ತೊಟ್ಟಿಲಲ್ಲಿದೆ ಎಂದು ಭಾವಿಸುವುದಕ್ಕೆ ಬದಲಾಗಿ, ತೊಟ್ಟಿಲಲ್ಲಿ ನಿಮ್ಮ ಮಗುವನ್ನು ತೂಗುವಾಗ ರಾಮ, ಕೃಷ್ಣ ಅಥವಾ ನಿಮ್ಮ ಇಷ್ಟ ದೈವವೇ ಅಲ್ಲಿದ್ದಾನೆ ಎಂದು ಭಾವಿಸುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು. ಹಾಗೆಯೇ ದೇವಾಲಯದಲ್ಲಿ ಪ್ರತಿಷ್ಠೆಗೊಂಡಿರುವ ದೇವತಾ ವಿಗ್ರಹದ ಎದುರು ನಿಂತಾಗ, ನಿಮ್ಮ ಹೃದಯದಲ್ಲಿ ನಿಮ್ಮ ಸತ್ ಚಿತ್ ಆನಂದದ ಆಧಾರವಾಗಿ ಬ್ರಹ್ಮವನ್ನು ಪ್ರತಿಷ್ಠಿಸಿಕೊಂಡಿರುವಂತೆ ಸ್ಥಿರಪಡಿಸಿಕೊಳ್ಳಬೇಕು. ಈ ಭಾವನೆಯನ್ನು ಬಲಿಸಲಿಕ್ಕಾಗಿಯೇ ದೇವಾಲಯದ ವಿವಿಧ ಆಚರಣೆಗಳು ವಿಧಿಗಳು ರೂಪು ಗೊಂಡಿರುವುದು. ಆದ್ದರಿಂದ ನೀವು ಸೀತಾ ರಾಮ, ರಾಧಾ ಕೃಷ್ಣ, ಲಕ್ಷ್ಮೀ ನಾರಾಯಣ ಅಥವಾ ಪಾರ್ವತಿ ಪರಮೇಶ್ವರರನ್ನು ಕತ್ತಲಿಡಿದ ಅಂಗೈಯಗಲದ ಗರ್ಭಗುಡಿಯಲ್ಲಿ ನಿಂತು, ಅರ್ಚಕನು ಕೊಟ್ಟ ಆಹಾರ ತಿನ್ನುತ್ತಾ ಅವನು ಕೊಟ್ಟ ಪಾನೀಯಗಳಿಂದ ಬಾಯಾರಿಕೆ ಇಂಗಿಸಿಕೊಳ್ಳುತ್ತಿರುವ ಅನುಕಂಪಾರ್ಹರಾದ ದಂಪತಿ ಎಂದು ಭಾವಿಸಬಾರದು. ಅರ್ಚಕರು, "ದೇವರು ಮಲಗಿದ್ದಾನೆ," ಎಂದೋ, "ದೇವರು ಆಹಾರ ಸ್ವೀಕರಿಸುತ್ತಿದ್ದಾನೆ," ಎಂದೋ ಹೇಳಿ ಗರ್ಭ ಗುಡಿಯ ಬಾಗಿಲನ್ನು ಮುಚ್ಚುತ್ತಾರೆ. ಇದು ಹುಚ್ಚುತನ. "ದೇವರು ನಿದ್ರಿಸುತ್ತಿದ್ದಾನೆ, ಶಬ್ದ ಮಾಡಬೇಡಿ, ಅವನಿಗೆ ಎಚ್ಚರಾಗಿಬಿಡುತ್ತದೆ," ಎಂದೂ ಹೇಳುತ್ತಾರೆ. ಅಂತಹ ಸಮಯದಲ್ಲಿ ಎಷ್ಟೇ ತುರ್ತು ಪೂಜೆ ಸಲ್ಲಿಸಲೂ ಅವಕಾಶ ಕೊಡುವುದಿಲ್ಲ.

ಇಂತಹ ಮಾತುಗಳು ಜನರ ಮನಸ್ಸಿನಲ್ಲಿ ತಪ್ಪು ಭಾವನೆಗಳನ್ನುಂಟುಮಾಡುತ್ತವೆ. ಆ ಗರ್ಭಗುಡಿಯಲ್ಲಿ ನಿಂತುಬಿಟ್ಟಿರುವ ದೇವರು ಕಾಲ ಪ್ರವೃತ್ತಿಯನ್ನು ಪೂರೈಸಿಕೊಳ್ಳು ವುದು ಹೇಗೆ ಎಂಬಂತಹ ಅವಿವೇಕದ ಪ್ರಶ್ನೆ ಕೇಳಿ ಜನರ ಮನಸ್ಸಿನಲ್ಲಿ ನಾಸ್ತಿಕತೆ

ಯನ್ನು ಬೆಳೆಸುತ್ತಾರೆ. ಈ ಅರ್ಚಕರಿಗಾಗಲಿ, ಹರಟುವ ನಾಸ್ತಿಕರಿಗಾಗಲಿ ದೇವಾಲಯ ಆರಾಧನೆಯ ನಿಜವಾದ ತತ್ತ್ವಗಳು ತಿಳಿಯವು. ಆದ್ದರಿಂದಲೇ ಅವರು ಹಾಗೆ ನಡೆದುಕೊಳ್ಳುವುದು. ಕೆಳಮಟ್ಟದ ಪ್ರಾಪಂಚಿಕ ಮಾರ್ಗವನ್ನು ನಿವಾರಿಸಬೇಕಾದರೆ ನೀವು ಸುಸಂಸ್ಕೃತರಾಗಿರಬೇಕು. ದೇವಾಲಯವನ್ನು ಲೌಕಿಕ ಮಟ್ಟದಲ್ಲಿ ನೋಡಲೇಬಾರದು. ಭಕ್ತಿಯು ಮಾತ್ರ ಭಾವನೆಗಳನ್ನು ಉದಾತ್ತಗೊಳಿಸಿ ರಮಣೀಯವಾಗಿಸಬಲ್ಲುದು. ಇಲ್ಲವಾದರೆ ಭಾವನೆಗಳು ಅಲ್ಪವಾದ ಪ್ರಾಪಂಚಿಕ ಮಟ್ಟಕ್ಕೆ ನಿಮ್ಮನ್ನು ಸೆಳೆದುಬಿಡುವುವು.

ಇಂದು ನೂತನ ವಿಷಪೂರಿತ ದೃಷ್ಟಿಯಿಂದಾಗಿ ದೇವಾಲಯಗಳು ಅವಹೇಳನದ ವಸ್ತುಗಳಾಗಿವೆ. ಇದು ಬಹಳ ದುಃಖದ ವಿಚಾರ. ಆದ್ದರಿಂದ ದೇವಾಲಯ ಆರಾಧನೆಯ ನಿಜವಾದ ಉದ್ದೇಶವನ್ನು ಬಹಿರಂಗವಾಗಿ ಸಾರಿ, ದೇವಾಲಯಗಳನ್ನು ಅವುಗಳಿಗೆ ನ್ಯಾಯವಾಗಿ ಸಲ್ಲಬೇಕಾದ ಉನ್ನತ ಮಟ್ಟಕ್ಕೆ ಏರಿಸುವುದು ತುಂಬಾ ಅಗತ್ಯ. ದೇವಾಲಯವು ಮತ್ತೊಮ್ಮೆ ಏಳಿಗೆ ಹೊಂದಬೇಕು. ಈ ಲಾಲಿ ಪದ ಹಾಡಿದಾಗ ನೀವು ನಿದ್ದೆ ಮಾಡುವಂತೆ ಭಗವಂತನೂ ನಿದ್ದೆ ಮಾಡಿಬಿಡುತ್ತಾನೆ, ಯಾರಾದರೂ ಜೋರಾಗಿ ಕರೆದಾಗ ನೀವು ಎಚ್ಚರಗೊಳ್ಳುವಂತೆ ಅವನೂ ಎಚ್ಚರಾಗುತ್ತಾನೆ. ನೀವು ಮಾಡುವಂತೆ ಆಹಾರವನ್ನು ಎದುರಿಗಿಟ್ಟಾಗ ಅವನೂ ತಿನ್ನುತ್ತಾನೆ, ಕ್ರಮವಾಗಿ ನೈವೇದ್ಯ ಅರ್ಪಿಸದಿದ್ದರೆ ನಿಮ್ಮ ಹಾಗೆಯೇ ದುರ್ಬಲನಾಗುತ್ತಾ ಹೋಗುತ್ತಾನೆ ಎಂದು ಭಾವಿಸುವುದು ಎಂಥ ಅವಿವೇಕ! ಅದು ಮೂರ್ಖತನ. ಪರಮಾಣುವಿನ ಅತಿ ಕನಿಷ್ಠ ಭಾಗದಿಂದ ಹಿಡಿದು ಸಮಸ್ತ ವಿಶ್ವವನ್ನೂ ವ್ಯಾಪಿಸಿಕೊಂಡಿರುವವನು, ಕಾಲವು ಮುಟ್ಟಲಾಗದವನು, ಕಲ್ಪನಾತೀತ ಪ್ರಕಾಶನು, ಎಲ್ಲ ನಿರೀಕ್ಷೆಗಳನ್ನೂ ಮೀರಿದ ಅಪಾರ ಕರುಣಾಮಯನು. ಇಂತಹ ಭಗವಂತನನ್ನು ಸಮಸ್ತದ ಹೊರಗೂ ಒಳಗೂ ಇರುವ ಮೂಲ ಶಕ್ತಿಯಾಗಿ ಪರಿಭಾವಿಸಬೇಕು. ಅಂತಹ ಭಗವಂತನನ್ನು ಸಂದೇಹವಾದಿಗಳ ಗೊಡ್ಡು ಹರಟೆಗೆ, ಅಜ್ಞಾನಿಗಳ ಮಿಥ್ಯಾ ತತ್ತ್ವಗಳಿಗೆ ಒಳಗುಪಡಿಸುವುದೇ ಮೂರ್ಖತನ.

ಭಕ್ತನನ್ನು ಒಂದು ಕಾರ್ಯಕ್ರಮ ಪಟ್ಟಿಗೆ ಬದ್ಧಗೊಳಿಸುವಂತೆ ಭಗವಂತನನ್ನು ಒಳಪಡಿಸಬಲ್ಲಿರೇನು? ಭಕ್ತನಿಗೆ ಕಷ್ಟಗಳು ಯಾವುದೇ ನಿರ್ದಿಷ್ಟ ಸಮಯದಲ್ಲಿ ಮಾತ್ರ ಬರುವುದಿಲ್ಲ. ಹಾಗಾದರೆ ಭಗವಂತನು ನಿದ್ದೆಯಿಂದ ಎಚ್ಚರಗೊಳ್ಳುವವರೆಗೆ ಅವನು ಸುಮ್ಮನೆ ಕಾಯುತ್ತಿರಬೇಕೆ? ಎಂತಹ ಹುಚ್ಚುತನ! ಮಗುವು ತಾಯಿಯ ಹಾಲಿಗಾಗಿ ಯಾವಾಗಬೇಕಾದರೂ ಅಳಬಹುದು. ತಾಯಿಯೂ ಅಷ್ಟೆ, ನಿದ್ದೆ ಮಾಡುತ್ತಿದ್ದರೂ ಎದ್ದು ಮಗುವಿಗೆ ಹಾಲೂಡುತ್ತಾಳೆ. ತಾನು ಮಲಗಿರುವಾಗ ಕಿರಿಚಿತೊಂದರೆ ಕೊಟ್ಟಿತೆಂದು ಮಗುವನ್ನು ದೂರ ತಳ್ಳುವುದಿಲ್ಲ. ವಿಶ್ವಮಾತೆಯಾದ

ಭಗವಂತನು, ನಿಜವಾಗಿಯೂ ನಿದ್ದೆ ಮಾಡಿಬಿಟ್ಟಿದ್ದರೆ ಕೊನೆಯ ಪಕ್ಷ ಒಂದು ಕೋಟಿ ಸಾರಿಯಾದರೂ ತೊಂದರೆಪಟ್ಟು ಎಚ್ಚರಗೊಳ್ಳಬೇಕಾಗಿತ್ತು.

ಅದು ನಿಮ್ಮ ಮಾನಸಿಕ ಶಕ್ತಿಗಳ ಬೆಳವಣಿಗೆಯ ಮೇಲೆ ನಿಂತಿದೆ. ಅವು ಪರಮೋನ್ನತ ಹಂತವನ್ನು ಮುಟ್ಟಬೇಕು. ಭಗವಂತನು ಎಲ್ಲಾ ಕಡೆಯೂ ಅಂತರ್ಗತನಾಗಿದ್ದಾನೆ. ಅವನು ಸರ್ವ ಸಮರ್ಥನಾಗಿದ್ದಾನೆ. ಅವನು ವಿಶ್ವ ಸಾಕ್ಷಿ. ಅವನ ಅರಿವಿಗೆ ಬಾರದ್ದು ಏನೂ ಇಲ್ಲ. ಈ ಸತ್ಯಗಳನ್ನು ಸ್ವತಃ ಸಿದ್ಧನಿಯಮಗಳೆಂದು ಇಟ್ಟುಕೊಂಡು ಎಲ್ಲಾ ಆಚರಣೆ, ಸಾಧನೆಗಳನ್ನು ಆ ಸತ್ಯಗಳಿಗೆ ಹೊಂದಿಸಿ ಜೋಡಿಸಬೇಕು ಮತ್ತು ವಿವರಿಸಬೇಕು. ಅಲ್ಪವಾದ, ಕೆಳಮಟ್ಟದ ಭಾವನೆ ಭಗವದರಾಧನೆಯ ಅಥವಾ ಅವನ ನಾಮ ರೂಪಗಳ ಬಳಿಗೆ ಸುಳಿಯಲೂ ಕೂಡದು. ಆದ್ದರಿಂದ ಉನ್ನತ ಮಟ್ಟದ ಭಕ್ತಿ ಹಾಗೂ ಅದನ್ನು ಪೋಷಿಸುವ ಆಚರಣಾವಿಧಿಗಳು ತುಂಬಾ ಅಗತ್ಯವಾದವು. ಭಗವಂತನ ನಿದ್ರೆ ಕೆಡುತ್ತದೆ ಎಂದೋ ಆಹಾರ ಸೇವನೆಯ ಸಮಯದಲ್ಲಿ ಅಡ್ಡಿಪಡಿಸಬಾರದೆಂದೋ ಆದ್ದರಿಂದಲೇ ದೇವಲಯದ ಬಾಗಿಲು ಮುಚ್ಚಬೇಕೆಂದೋ ಹೇಳುವುದು ಕೇವಲ ಬಾಲಿಶ, ಅದು ಸರಿಯಾದ ಮನೋಧರ್ಮವೇ ಅಲ್ಲ. ಭಕ್ತಿ ಭಾವವು ಪಕ್ವವಾಗಿ, ಪೂರ್ತಿ ಅರಳಿದಾಗ ಈ ಅಲ್ಪ ಲೌಕಿಕ ಭಾವನೆಗಳು ಶೂನ್ಯವಾಗುತ್ತವೆ.

ಒಂದು ಸಣ್ಣ ಘಟನೆ ಮನಸ್ಸಿಗೆ ಬರುತ್ತಿದೆ. ಒಮ್ಮೆ ಕಲ್ಕತ್ತಾದಲ್ಲಿ ರಾಣಿ ರಾಸಮಣಿ ಕಟ್ಟಿಸಿದ ಕಾಳಿ ದೇವಾಲಯದಲ್ಲಿ, ಒಂದು ಗೋಪಾಲನ ವಿಗ್ರಹವು ಕೆಳಗೆ ಬಿದ್ದು ಅದರ ಒಂದು ಕಾಲು ಸ್ವಲ್ಪ ಮುರಿದುಹೋಯಿತು. ಶಾಸ್ತ್ರಗಳ ಪ್ರಕಾರ ಭಿನ್ನವಾದ ಅಂದರೆ ಮುರಿದ ವಿಗ್ರಹವನ್ನು ಪೂಜೆ ಮಾಡಕೂಡದೆಂದು ಹಿರಿಯರು ನಿರ್ಧರಿಸಿಬಿಟ್ಟರು. ಆಗ ರಾಣಿ ರಾಸಮಣಿಯು ಹೊಸ ವಿಗ್ರಹದ ತಯಾರಿಕೆಗೆ ಏರ್ಪಾಟು ಮಾಡಿದಳು. ರಾಮಕೃಷ್ಣರು ಇದನ್ನು ಕೇಳಿ ರಾಣಿಯನ್ನು ಬಯ್ದರು, "ಮಹಾರಾಣಿ, ನಿಮ್ಮ ಅಳಿಯ ಕಾಲು ಮುರಿದುಕೊಂಡರೆ ಏನು ಮಾಡುತ್ತೀರಿ? ಮಾಡಬೇಕಾದ ಸರಿಯಾದ ಕೆಲಸ ಏನು? ಕಾಲಿಗೆ ಪಟ್ಟಿ ಕಟ್ಟಿ ಸರಿಪಡಿಸುವುದೇ ಅಥವಾ ಅವನನ್ನು ತಿರಸ್ಕರಿಸಿ ಬೇರೊಬ್ಬ ಅಳಿಯನನ್ನು ತರುವುದೇ?" ಹಿರಿಯರು, ಪಂಡಿತರು ಮೂಕರಾದರು. ಗೋಪಾಲನ ಮುರಿದ ಕಾಲನ್ನು ಸರಿಪಡಿಸಿ, ಮತ್ತೆ ಎಂದಿನಂತೆ ಪೂಜಿಸಲಾಯಿತು. ಭಕ್ತಿಯು ಶುದ್ಧವಾಗಿದ್ದಾಗ ಮತ್ತು ಏರುಗತಿಯಲ್ಲಿದ್ದಾಗ ಭಗವಂತನು ಮುರಿದ ವಿಗ್ರಹದಲ್ಲೂ ಇರುತ್ತಾನೆ. ಈ ಧರ್ಮವನ್ನು ಶಾಸ್ತ್ರಗಳು ಘೋಷಿಸಿವೆ.

ಒಮ್ಮೆ ದೇವಾಲಯದ ಬಾಗಿಲನ್ನು ಮುಚ್ಚಿದ ಮೇಲೆ ಮರುದಿನದವರೆಗೂ ತೆರೆಯ ಬಾರದು ಎಂದು ನಿಯಮವು ಹೇಳಬಹುದು. ಅದೊಂದು ಸಾಮಾನ್ಯ ಸೂಚನೆ ಅಷ್ಟೆ. ಏಕೆಂದರೆ ಶಂಕರ, ಸನಂದ, ಜಯದೇವ, ಚೈತನ್ಯ, ಗೌರಾಂಗ ಮೊದಲಾದ ಭಕ್ತರು ಬಂದಾಗ ಆ ನಿಯಮವನ್ನು ಅನುಸರಿಸಲು ಸಾಧ್ಯವಾಗುವುದಿಲ್ಲ ಅಲ್ಲವೆ? ಉಡುಪಿಯಲ್ಲಿ ಭಗವಾನ್ ಕೃಷ್ಣನು ತನ್ನ ಭಕ್ತನಿಗೆ ದರ್ಶನ ಕೊಡುವ ಸಲುವಾಗಿ ತಿರುಗು ಮುರುಗಾಗಿ ನಿಂತನು; ನಂದನಾರನ ಭಕ್ತಿಯ ಉತ್ಕಟತೆಯೆದುರಿಗೆ ಶಿವನೂ ಬಿಟ್ಟುಕೊಟ್ಟನು. ದೇವಾಲಯದ ಬಾಗಿಲು ಮುಚ್ಚುವುದಕ್ಕೂ ಭಗವಂತ ನಿಗೂ ಯಾವ ಸಂಬಂಧವೂ ಇಲ್ಲ. ಬೇರೆ ಕಾರಣಗಳಿಗಾಗಿ ಹಿರಿಯರು ಆ ನಿಯಮವನ್ನು ಮಾಡಿಕೊಂಡಿದ್ದಾರೆ. ನೀವು ಹಾಕಿಕೊಳ್ಳುವ ನಿಯಮಗಳು ಭಕ್ತನ ಅತ್ಯುನ್ನತ ಪರಿಕಲ್ಪನೆಗಳೊಂದಿಗೆ ಘರ್ಷಿಸಬಾರದು. ದೇವಾಲಯದ ನೌಕರರಿಗೆ ನಿರ್ದಿಷ್ಟ ಸಮಯದ ನಿಗದಿಯಿಲ್ಲದೆ ಅವರ ಇಚ್ಛೆ ಬಂದಂತೆ ನಡೆದುಕೊಳ್ಳಲು ಬಿಟ್ಟರೆ, ಸಾಮಾನ್ಯ ಮನುಷ್ಯನ ಮನಸ್ಸಿನಲ್ಲಿ ದೇವಾಲಯವು ಭಕ್ತಿಯನ್ನು ಮೂಡಿ ಸಲು ಅಸಮರ್ಥವಾಗುತ್ತದೆ. ಭಕ್ತಿಯ ಬೇರುಗಳಾದ ಭೀತಿ ಮತ್ತು ಗೌರವಗಳನ್ನು ಪ್ರಚೋದಿಸುವುದಕ್ಕೂ ಕೂಡ ಕೆಲವು ಸೀಮಿತಗಳು ಮತ್ತು ನಿಬಂಧನೆಗಳು ಅಗತ್ಯ ವಾಗುತ್ತವೆ. ದೇವಾಲಯ ಪ್ರವೇಶಕ್ಕೆ, ಪೂಜೆಗಾಗಿ ಗರ್ಭಗುಡಿಯನ್ನು ತೆರೆಯುವು ದಕ್ಕೆ ನಿರ್ದಿಷ್ಟ ವೇಳೆಯನ್ನು ನಿಗದಿಪಡಿಸಿರುವುದಕ್ಕೆ ಇದೇ ಕಾರಣ.

ಇಂತಹ ನಿಯಮಗಳು ಮೂಲತತ್ತ್ವಕ್ಕೆ ವಿರುದ್ಧವಾದುವಲ್ಲ. ಏಕೆಂದರೆ ದೇವಾಲ ಯದ ಉದ್ದೇಶ ಧರ್ಮವನ್ನು ಬೆಳೆಸುವುದು, ಆಂತರಿಕ ಸಂಸ್ಕೃತಿಯನ್ನು, ಆಧ್ಯಾತ್ಮಿಕ ಸಾಧನೆಯನ್ನೂ ವಿಕಾಸಪಡಿಸುವುದು. ಮಾನವ ಪ್ರವೃತ್ತಿಗಳು, ನಡವಳಿಕೆಗಳು, ಮನೋಧರ್ಮ, ಎಲ್ಲವೂ ಭಗವತ್ ಪ್ರಜ್ಞೆಯನ್ನು ಬೆಳೆಸುವುದೆಂಬ ಮುಖ್ಯ ಅಗತ್ಯಕ್ಕೆ ಅಧೀನವಾಗಿರತಕ್ಕದ್ದು. ಆದ್ದರಿಂದ ದೇವಾಲಯ ವಿಧಿಗಳನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸಲು ಕೆಲವು ನಿಯಮಗಳು ಅಗತ್ಯ. ಇಲ್ಲವಾದರೆ ಸಾಮಾನ್ಯ ಜನರಲ್ಲಿ ಸ್ಥಿರಚಿತ್ತವಾಗಲಿ, ಶ್ರದ್ಧೆಯಾಗಲಿ, ನಂಬಿಕೆಯಾಗಲಿ ಬೆಳೆಯುವುದಿಲ್ಲ. ಅವರಲ್ಲಿ ಭಕ್ತಿ ಅರಳುವುದಿಲ್ಲ. ಅರ್ಚಕರು, ದೇವಾಲಯದ ಉಸ್ತುವಾರಿ ಹೊತ್ತ ಧರ್ಮಕರ್ತರು ಮತ್ತು ಪೂಜಿಸುವ ಸಾರ್ವಜನಿಕರು ಎಲ್ಲರ ಜವಾಬ್ದಾರಿಯೂ ನಿಜವಾಗಿ ದೊಡ್ಡದು. ಪ್ರತಿಯೊಬ್ಬರಿಗೂ ದೇವಾಲಯಗಳ ಉದ್ದೇಶ ಮತ್ತು

ದೇವಾಲಯ ವಿಧಿಗಳನ್ನು ನಿರ್ವಹಿಸುವ ಅಗತ್ಯ ತಿಳಿದಿರಬೇಕು. ಅವು ಎಲ್ಲಕ್ಕಿಂತ ಮಿಗಿಲಾಗಿ ಶ್ರದ್ಧೆ ಮತ್ತು ಭಕ್ತಿಗಳನ್ನು ಬೆಳೆಸುತ್ತವೆ. ಹಿರಿಯ ಭಕ್ತರು, ಸಂತರು ಪೂಜಿಸಲು ಬಂದರೆ ಯಾವಾಗ ಬೇಕಾದರೂ ದೇವಾಲಯದ ಬಾಗಿಲು ತೆರೆಯ ಬಹುದು. ದೇವಾಲಯವಿರುವುದು ಮಾನವನ ಪ್ರಗತಿಗಾಗಿ ಮತ್ತು ಕಲ್ಯಾಣಕ್ಕಾಗಿ ಎಂಬುದನ್ನು ಯಾರೂ ಮರೆಯಬಾರದು ಅಥವಾ ಅಲಕ್ಷಿಸಬಾರದು.

## ಅಧ್ಯಾಯ ೧೧

# ಯುಗತ್ರಯ

ಹಿಂದೂ ಧರ್ಮದಲ್ಲಿ ನಿರೂಪಿಸಿರುವ ಆಧ್ಯಾತ್ಮಿಕ ಸಾಧನೆಯ ತತ್ತ್ವಗಳು ಮತ್ತು ಆಚರಣೆಗಳ ಆಧಾರದಿಂದ ವರ್ಗೀಕರಿಸಿರುವ ಯುಗಗಳು ಮೂರು:

**ವೇದಯುಗ** : ಇಲ್ಲಿ ಕರ್ಮಕ್ಕೆ (ಆಚರಣೆ) ಹೆಚ್ಚಿನ ಪ್ರಾಮುಖ್ಯ ನೀಡಲಾಯಿತು.

**ಉಪನಿಷತ್ತುಗಳ ಯುಗ** : ಇಲ್ಲಿ ಬೇರೆಲ್ಲಕ್ಕಿಂತ ಜ್ಞಾನವು ಪ್ರಾಧಾನ್ಯ ಪಡೆಯಿತು.

**ಪುರಾಣ ಯುಗ** : ಇಲ್ಲಿ ಭಕ್ತಿಯು ಅತಿ ಮುಖ್ಯವಾದುದೆಂದು ಘೋಷಿಸಲಾಯಿತು.

ವೇದ ಸಾಹಿತ್ಯದಲ್ಲಿ ಸಂಹಿತೆಗಳು, ಬ್ರಾಹ್ಮಣಗಳು, ಆರಣ್ಯಕಗಳು ಮತ್ತು ಉಪನಿಷತ್ತುಗಳಿವೆ. ಇವುಗಳಲ್ಲಿ ಮೊದಲ ಮೂರು ಕರ್ಮಕ್ಕೆ ಸಂಬಂಧಪಟ್ಟಿರುವುದರಿಂದ ಅವು ಕರ್ಮಕಾಂಡವೆನಿಸುತ್ತವೆ; ಕೊನೆಯದಾದ ಉಪನಿಷತ್ತುಗಳು ಜ್ಞಾನಕ್ಕೆ ಸಂಬಂಧಿಸಿದುವಾದ್ದರಿಂದ ಅವು ಜ್ಞಾನಕಾಂಡ.

ವೇದ ಸಂಹಿತೆಯ ಮಂತ್ರಗುಚ್ಛಗಳಲ್ಲಿ ಇಂದ್ರ, ಅಗ್ನಿ, ವರುಣ, ಸೂರ್ಯ ಮತ್ತು ರುದ್ರ ಮೊದಲಾದ ದೇವತೆಗಳ ಮಹಿಮೆಯನ್ನು ಕೊಂಡಾಡುವ ಸ್ತೋತ್ರಗಳಿವೆ. ಪ್ರಾಚೀನ ಕಾಲದಲ್ಲಿ ಆರ್ಯರು ಈ ದೇವತೆಗಳನ್ನು ಈ ಮಂತ್ರಗಳಿಂದ ಸಂಬೋಧಿಸಿ ಯಜ್ಞಯಾಗಾದಿ ಆಚರಣೆಗಳ ಮೂಲಕ ತಮ್ಮ ಬಯಕೆಗಳನ್ನು ಪೂರೈಸಿಕೊಂಡು ಶಾಂತಿಯನ್ನೂ, ತೃಪ್ತಿಯನ್ನೂ ಪಡೆದಿದ್ದರು. ಅತ್ಯುನ್ನತ ಸಂಪೂರ್ಣ ತತ್ತ್ವವಾದ ಪರಮಾತ್ಮನು ಒಬ್ಬನೇ ಎಂದು ಅವರು ಅರಿತಿದ್ದರು. ಆ ತತ್ತ್ವವು ಬಗೆಬಗೆಯಾಗಿ, ಬಹುವಾಗಿ, ವಿವಿಧ ನಾಮರೂಪಗಳಲ್ಲಿ ಪ್ರಕಟವಾಗುತ್ತದೆ ಎಂದೂ ಅರಿತಿದ್ದರು.

ಋಗ್ವೇದ ಮಂತ್ರಗಳಲ್ಲಿ ಇದನ್ನು ಸ್ಪಷ್ಟವಾಗಿ ಸಾರಿ ಹೇಳಿದೆ:

> ಏಕಂ ಸತ್ ವಿಪ್ರಾ ಬಹುಧಾ ವದಂತಿ ।
> ಅಗ್ನಿಂ ಯಮಂ ಮಾತರಿಶ್ವಾನಮಾಹುಃ ॥

> ಇರುವವನು ಒಬ್ಬನೇ. ಸತ್ಯವನ್ನು ಕಂಡಿರುವವರು ಅವನನ್ನು ಬಗೆ ಬಗೆಯಾಗಿ ವರ್ಣಿಸುತ್ತಾರೆ: ಅಗ್ನಿ, ಯಮ, ಮಾತರಿಶ್ವ ಮುಂತಾಗಿ.

ಈ ಬ್ರಹ್ಮವನ್ನು ಎರಡನೆಯದಿಲ್ಲದ ಈ ಅಖಂಡವಾದ ಏಕವನ್ನು ಋಗ್ವೇದವು ಹಿರಣ್ಯಗರ್ಭ, ಪ್ರಜಾಪತಿ, ವಿಶ್ವಕರ್ಮ, ಪುರುಷ ಎಂದೆಲ್ಲ ವರ್ಣಿಸುತ್ತದೆ. ಈ ದರ್ಶನದ ಮಾದರಿಗಳು ಹಿರಣ್ಯಗರ್ಭ ಸೂಕ್ತ ಮತ್ತು ಪರುಷ ಸೂಕ್ತಗಳು.

ಪ್ರಾಚೀನ ಆರ್ಯರ ಜೀವನ ವಿಧಾನವನ್ನು ಧರ್ಮ ಎಂದು ಹೆಸರಿಸಲಾಗಿದೆ. ಅದನ್ನು ಯಜ್ಞ ಎಂದೂ ಕರೆಯಬಹುದು. ಅವರ ದಿನದಿನದ ಸಾಧನೆಯಲ್ಲಿ ಯಾಗಾಚರಣೆಗಳು, ಪೂಜೆ, ಸ್ತೋತ್ರ, ಶರಣಾಗತಿ ಮತ್ತು ಸಮರ್ಪಣೆ ಇದ್ದುವು. ಆದ್ದರಿಂದ ಅವರ ಜೀವನ ಭಕ್ತಿಯಿಂದ ತುಂಬಿತ್ತು. ಭಕ್ತಿ ಎಂಬ ಪದವನ್ನು ಸಂಹಿತೆಗಳಲ್ಲಿ ಬಳಸಿಲ್ಲ, ಆದರೆ ಶ್ರದ್ಧೆ ಎಂಬ ಪದ ಇಲ್ಲವೇನು?

> ಶ್ರದ್ಧಯಾಗ್ನಿಃ ಸಮಿಧ್ಯತೇ ಶ್ರದ್ಧಾ ಭೂಯತೇ ಹವಿಃ ।
> ಶ್ರದ್ಧಾಂ ಭಾಗಸ್ಯ ಮೂರ್ಧನಿ ವಚಸಾ ವೇದಯಾಮಸಿ ॥
>
> ಯಾಗಾಗ್ನಿಯು ಹೊತ್ತಿಕೊಳ್ಳುವುದು ಮತ್ತು ಉರಿಯುವುದು ಶ್ರದ್ಧೆ ಯಿಂದಲೇ. ಆಹ್ವಾನಿಸುವ ದೇವತೆಗಳಿಗೆ ಹವಿಸ್ಸು ತಲುಪುವುದು ಶ್ರದ್ಧೆಯ ಮೂಲಕವೇ. ಆರಾಧನೆಯ ಅತ್ಯುನ್ನತ ರೂಪವಾದ ಶ್ರದ್ಧೆ ಯನ್ನು ನಾವು ಕೊಂಡಾಡೋಣ.

ಶ್ರದ್ಧೆಯ ಶಕ್ತಿ ಎಷ್ಟು ಅಗಾಧವಾಗಿದೆ ನೋಡಿ!

ವೇದ ಯುಗದ ಸರಳವೂ ಸ್ವಯಂಪ್ರೇರಿತವೂ ಆದ ಸಾಧನೆಗಳು ಕ್ರಮೇಣ ತೊಡಕಾದವು. ಆಚರಣೆಗಳು ಮತ್ತು ನಿಯಮ ನಿಬಂಧನೆಗಳ ಅತಿರೇಕ ಬೆಳವಣಿಗೆ ಯಿಂದ ಗೊಂದಲಮಯವಾದುವು. ಕಾಲ ಕಳೆದಂತೆ ಧರ್ಮ ಎಂದರೆ ಯಜ್ಞ ಮತ್ತು ಹೋಮ ಎಂದೂ ಅವುಗಳನ್ನು ಆಚರಿಸುವುದರಿಂದ ಮಾತ್ರವೇ ಸ್ವರ್ಗವನ್ನು ಪಡೆಯಲು ಸಾಧ್ಯವೆಂದೂ ಸಾರಲಾಯಿತು. ದೇವತೆಗಳನ್ನು ಪೂಜಿಸಲು ಯಜ್ಞವೂ ಒಂದು ವಿಧಾನವೇನೊ ಹೌದು, ಆದರೆ ಇಲ್ಲಿ ಮೌಲ್ಯವು ದೇವತೆಗಿಂತ ಹೆಚ್ಚಾಗಿ ಯಜ್ಞಕ್ಕೇ ವರ್ಗಾವಣೆಗೊಂಡಿತು. ದೇವತೆಗಳು ಸಾಧನ ಮಾತ್ರರು; ಸ್ವರ್ಗವನ್ನು ಬಯಸುವವರು ಯಜ್ಞ ಮಾಡಲೇಬೇಕು. ಪರಿಸ್ಥಿತಿ ಹೀಗೆ ತಿರುವು ಪಡೆಯಿತು.

ಈ ಮಧ್ಯೆ ಉಪನಿಷತ್ ಯುಗವು ಉದಿಸಿತು. ಭೌತ ಉದ್ದೇಶಗಳಿಗೆ ಏನೂ ಬೆಲೆಯಿಲ್ಲ ಎಂದು ಉಪನಿಷತ್ತುಗಳು ಅವುಗಳನ್ನು ತಿರಸ್ಕರಿಸಿದುವು. ಅವು ಕೆಳ ಮಟ್ಟದ ಉದ್ದೇಶಗಳು ಎಂದುವು. ವಾಸ್ತವವಾಗಿ ವೇದಗಳ ಕರ್ಮಕಾಂಡವನ್ನು ಉಪನಿಷತ್ತುಗಳಲ್ಲಿ ಪುನರ್ಪರಿಶೀಲಿಸಿ ಪರಿವರ್ತನೆಗೊಳಿಸಲಾಗಿದೆ. ಅವು ಮನುಷ್ಯನಿಗೆ ಜನನ ಮರಣಗಳ ಬಂಧನದಿಂದ ಬಿಡುಗಡೆ, ಸಂಸಾರ ಸಾಗರವನ್ನು ದಾಟಿಸುವ ನಾವೆ ಎಂಬುದಾಗಿ ಪುನರ್ಮೌಲ್ಯಮಾಪನ ಮಾಡಿರುವುವು. ಉಪನಿಷತ್ ಸಾಧಕನ ದರ್ಶನವು ವಸ್ತುನಿಷ್ಠ ಬಾಹ್ಯ ಇಂದ್ರಿಯ ಜಗತ್ತಿನ ಮೂಲಕವಾಗಿ ಒಳ ನುಗ್ಗಿ ಆಂತರಿಕ ಜಗತ್ತಿನ ಮೇಲೆ ಕೇಂದ್ರೀಕರಿಸುತ್ತದೆ. ಉಪನಿಷತ್ತಿನ ಋಷಿಗಳು ಪರಮೋನ್ನತ ತತ್ತ್ವದ ಸ್ವರೂಪವನ್ನು ಒಟ್ಟಾಗಿ ಹೀಗೆ ಸ್ಥಿರೀಕರಿಸುತ್ತಾರೆ. ಈ ನಾಮ ರೂಪ ಜಗತ್ತಿನ ಆಳದಲ್ಲಿ, ಆಧಾರವಾಗಿ ಒಂದು ನಿತ್ಯ, ಶಾಶ್ವತ ಸತ್ ಇದೆ. ಅದು ಸರ್ವೋನ್ನತ ಪರಬ್ರಹ್ಮ. ಜ್ಞಾನ ಯೋಗದಿಂದ ಆ ಸರ್ವೋನ್ನತ ತತ್ತ್ವವನ್ನು ಗ್ರಹಿಸಬಹುದು. ಆದ್ದರಿಂದ, "ತದ್ವಿಜಿಜ್ಞಾಸಸ್ವ; ತದ್ಬ್ರಹ್ಮ (ಅದನ್ನು ಜಿಜ್ಞಾಸೆ ಮಾಡು; ಅದೇ ಬ್ರಹ್ಮ)." ಉಪನಿಷತ್ತುಗಳು (ವೇದಾಂತ) ಬೋಧಿಸುವ ಬ್ರಹ್ಮವಿದ್ಯೆ ಇದೇಯೆ.

ಜೊತೆಗೆ ಉಪನಿಷತ್ತುಗಳು ಈ ಮಾತನ್ನೂ ಸಾರಿ ಹೇಳುತ್ತವೆ: "ವೇದಗಳು ಸ್ವರ್ಗವನ್ನು ಗಳಿಸಬೇಕೆಂಬ ಮೂಲೋದ್ದೇಶಕ್ಕೇ ಮುಖ್ಯವಾಗಿ ಸಂಬಂಧಿಸಿವೆಯಾದರೂ ಮೋಕ್ಷ ಸಾಧನೆಗೆ ಮೂಲ ತರಬೇತಿಯನ್ನೂ ಅವು ಕೊಡುತ್ತವೆ. ಸರ್ವೌನ್ನತ್ಯವನ್ನು ಪಡೆಯುವುದು ಬ್ರಹ್ಮವಿದ್ಯೆಯ ಪರಿಣತಿಯನ್ನೇ ಸಂಪೂರ್ಣವಾಗಿ ಅಥವಾ ಏಕೈಕವಾಗಿ ಅವಲಂಬಿಸುವುದಿಲ್ಲ. ಅದು ಅಧ್ಯಯನ, ವಿದ್ವತ್ತು ಮತ್ತು ಬೌದ್ಧಿಕ ಸಾಧನೆಗಳ ಎಟುಕಿಗೆ ಅತೀತವಾಗಿದೆ. ಉಪಾಸನೆಯಿಂದ ಮಾತ್ರವೇ ಅದನ್ನು ಸಾಕ್ಷಾತ್ಕರಿಸಿಕೊಳ್ಳಬಹುದು. ವಿದ್ವಾಂಸನು ತನ್ನ ಜ್ಞಾನದ ಬಲದೊಂದಿಗೆ ಉಪಾಸನೆಯಲ್ಲಿ ಲೀನವಾದರೆ ಅವನ ಜೀವನ ನಿಜವಾಗಿಯೂ ಪವಿತ್ರವಾಗುತ್ತದೆ!"

ಅಂತಹ ಸಾಧಕರೆದುರಿಗೆ ಭಗವಂತನು ತನ್ನ ನಿಜವಾದ ದಿವ್ಯ ಸ್ವರೂಪದಲ್ಲಿ ಪ್ರಕಟವಾಗುತ್ತಾನೆ. ಜೀವಿಗೂ ಪರಮಾತ್ಮನಿಗೂ ಇರುವ ಸಂಬಂಧವನ್ನು ಕುರಿತು ಬೃಹದಾರಣ್ಯಕೋಪನಿಷತ್ತಿನಲ್ಲಿ ಬರುವ ಈ ಘೋಷಣೆಗೆ ಅರ್ಥ ಇದೇಯೆ:

> ಏಷೋಽಸ್ಯ ಪರಮಾಗತಿಃ ಏಷೋಽಸ್ಯ ಪರಮಂ ಸಂಪದಃ ।
> ಏಷೋಽಸ್ಯ ಪರಮೋ ಲೋಕ ಏಷೋಽಸ್ಯ ಪರಮಾನಂದಂ ॥

> ಯಾವುದು ವಿಶ್ವಾತ್ಮಕವೋ ಅದು ವ್ಯಕ್ತಿಯ ಸರ್ವೋನ್ನತ ಲಕ್ಷ್ಯ, ಅತ್ಯುತ್ಕೃಷ್ಟವಾದ ಸಂಪತ್ತು. ಅತ್ಯುನ್ನತ ನೆಲೆ, ಅತ್ಯುನ್ನತವಾದ ಆನಂದ.

ತೈತ್ತರೀಯ ಉಪನಿಷತ್ತಿನಲ್ಲಿ ಹೀಗೆ ಹೇಳಿದೆ: "ಪರಮಾತ್ಮನು ತೃಪ್ತಿಯ ಮೂಲ. ಏಕೆಂದರೆ ಅವನು ಅತ್ಯಂತ ಪರಿಶುದ್ಧ ಭಾವವಾದ ರಸದ ಸಾಕಾರವಾಗಿದ್ದಾನೆ. ಅವನನ್ನು ಪಡೆದು ಜೀವಿಯು ಸಂತೋಷದಲ್ಲಿ ನಿಮಗ್ನನಾಗಬಹುದು. ಹೃದಯ ಸಿಂಹಾಸನದಲ್ಲಿ ಪರಮಾತ್ಮನು ಬೆಳಗುತ್ತಿರದೆ ಹೋದರೆ, ಅನುಭೋಗಿಸುವವರು ಯಾರು, ಬದುಕುವವರು ಯಾರು? ಅವನೇ ಎಲ್ಲರಿಗೂ ಆನಂದವನ್ನು ಒದಗಿಸುವವನು."

ವೇದ ಸಂಹಿತೆಗಳಲ್ಲಿ ಅಲ್ಲಲ್ಲಿ ಚೆಲ್ಲಾಡಿದ್ದ ಭಕ್ತಿಯ ಬೀಜಗಳು, ಉಪನಿಷತ್ತುಗಳಲ್ಲಿ ಮೊಳಕೆಯೊಡೆದು, ಪುರಾಣಗಳಲ್ಲಿ ಅನೇಕಾನೇಕ ಹೂವುಗಳು ಅರಳಿದ ಕೊಂಬೆಗಳಾಗಿ ಬೆಳೆಯತೊಡಗುತ್ತವೆ.

ಭಕ್ತಿ ಎಂದರೆ ಖಚಿತವಾಗಿ ಏನು ಎಂದು ನಿರ್ಧರಿಸುವುದರಲ್ಲಿ ಇನ್ನೂ ಅನೇಕರಿಗೆ ಗೊಂದಲವಿದೆ. ಭಕ್ತಿ ಎಂಬ ಮನೋಧರ್ಮದ ಸ್ವರೂಪ ಏನು? ಯಾವುದು ಭಕ್ತಿ ಯಾವುದು ಅಲ್ಲ ಎಂದು ಗುರುತಿಸುವುದು ಯಾರಿಗೂ ಸಾಧ್ಯವಿಲ್ಲ. ಭಕ್ತಿಗೆ ಅಸಂಖ್ಯಾತ ಮುಖಗಳಿವೆ. ಶುದ್ಧಾಂತರಂಗರಾದ, ಮೃದು ಮನಸ್ಕರಾದ, ಸಹಿಷ್ಣುಗಳಾದ ಸಮಾಧಾನಿಗಳಾದ, ಪ್ರೀತಿಯುತರಾದ ಸಾಧು ಶ್ರೇಷ್ಠರು, ಭಕ್ತರ ಸಹವಾಸದಲ್ಲೇ ಸದಾ ನಿರತರಾದ ಹಂಸರು ಮಾತ್ರವೇ ಅದರ ಶುದ್ಧತೆಯನ್ನೂ ಆಳವನ್ನೂ ಅರಿಯಬಲ್ಲರು. ಇತರರಿಗೆ ವ್ಯಕ್ತಿಯಲ್ಲಿರುವ ಭಕ್ತಿಯನ್ನು ಗುರುತಿಸುವುದು ತುಂಬಾ ಕಷ್ಟ; ಬಂಡೆಯಲ್ಲಿ ಮೃದುತ್ವವನ್ನೋ ಬೆಂಕಿಯಲ್ಲಿ ತಂಪನ್ನೋ ಬೇವಿನಲ್ಲಿ ಸಿಹಿಯನ್ನೋ ಹುಡುಕುವ ಹಾಗೆ. ಭಕ್ತನು ಭಗವಂತನನ್ನು ತನ್ನ ಪ್ರಾಣಕ್ಕಿಂತಲೂ ಹೆಚ್ಚಾಗಿ ಹಿಡಿದುಕೊಂಡಿರುತ್ತಾನೆ; ಭಗವಂತನೂ ಅಷ್ಟೆ, ಅವನನ್ನು ಕುರಿತು ಅಷ್ಟೇ ಗಾಢವಾಗಿ ಮೋಹಿತನಾಗಿರುತ್ತಾನೆ. ಭಕ್ತನು ಭಗವಂತನಿಗಿಂತಲೂ ಉತ್ತಮನು ಎಂದು ಕೆಲವು ಹಿರಿಯರು ಹೇಳುತ್ತಾರೆ. ಮೋಡಗಳು ಸಾಗರದ ನೀರನ್ನೇ ರೈತನ ಹೊಲಗದ್ದೆಗಳಿಗೆ ಸುರಿಸುವುದು; ಆದರೂ ರೈತನು ಸಾಗರಕ್ಕಿಂತ ಮಿಗಿಲಾಗಿ ಮೋಡಗಳನ್ನೇ ಪ್ರೀತಿಸುತ್ತಾನೆ. ಸಾಗರವು ನೇರವಾಗಿ ಅವನು ಬೆಳೆದ ಫಸಲಿನ ಮೇಲೆ ಹರಿದು ಬರುವುದಿಲ್ಲ. ಭಕ್ತನಿಗೂ ಭಗವಂತನಿಗೂ ಇರುವ ಸಂಬಂಧವನ್ನು ತುಲಸೀದಾಸರು ವರ್ಣಿಸುವುದು ಹೀಗೆಯೇ. ಮೋಡಗಳು ಮಳೆಯ ರೂಪದಲ್ಲಿ ಸಾಗರದ ಕರುಣೆ, ಪ್ರೇಮ, ವೈಭವಗಳನ್ನೂ ವಾತಾವರಣದ ಮಧುರ ಪರಿಮಳವನ್ನೂ ತಂದು ಇಡೀ ಭೂ ಭಾಗದ ಮೇಲೆ ವರ್ಷಿಸುತ್ತವೆ. ಹಾಗೆಯೇ ಭಕ್ತರು ಹೋದಲ್ಲೆಲ್ಲಾ ಈ ದೈವೀಗುಣಗಳನ್ನು ಕೊಂಡೊಯ್ಯುತ್ತಾರೆ. ಚಿನ್ನವನ್ನು ಗಣಿಗಳಿಂದ ಅಗೆದು ತೆಗೆಯಬೇಕು, ಈ ಗುಣಗಳು ಮನುಷ್ಯನಲ್ಲಿ ಹುದುಗಿಸುವ ದೈವತ್ವದ ಭಾಗವಾಗಿದೆ.

ಭಕ್ತಿಯ ಮಹಿಮೆಯನ್ನು ಪರೀಕ್ಷಿಸಲು ದುರ್ವಾಸ ಋಷಿಯು ಒಂದು ದಿನ ಅಂಬರೀಷನ ಆಸ್ಥಾನಕ್ಕೆ ಬಂದರು. ಆ ಉದ್ದೇಶಕ್ಕಾಗಿ ತಮ್ಮ ಕೋಪದಿಂದ ಕೃತ್ಯ ನನ್ನು ಸೃಷ್ಟಿಸಿ ಅಂಬರೀಷನನ್ನು ನಾಶಮಾಡಲು ಹೇಳಿದರು. ಆದರೆ ಭಕ್ತರ ಹೃದಯಗಳಲ್ಲಿರುವ ಭೀತಿಯನ್ನು ನಾಶ ಮಾಡುವ ಭಗವಂತನ ಚಕ್ರವು ಕೃತ್ಯನನ್ನು ಸಂಹರಿಸಿ, ದುರ್ವಾಸ ಋಷಿಯನ್ನು ಭೂಲೋಕದ ಅಂಚಿನವರೆಗೂ ಅಟ್ಟಿಸಿ ಕೊಂಡು ಹೋಯಿತು. ಬೆಟ್ಟ, ಕಣಿವೆ, ಹೊಳೆ, ಕೆರೆಗಳನ್ನು ದಾಟಿ ಅವನು ಓಡಿದನು. ಸಪ್ತಸಾಗರಗಳಾಚೆಗೆ ನೆಗೆದನು; ಸ್ವರ್ಗಗಳಲ್ಲಿ ಆಶ್ರಯ ಪಡೆಯಲು ಹವಣಿಸಿದನು. ಆದರೆ ಭಕ್ತನ ವೈರಿಗೆ ಎಲ್ಲೂ ಆಶ್ರಯ ದೊರಕುವುದಿಲ್ಲ, ಪಶ್ಚಾತ್ತಾಪದಿಂದ ಬಳಲಿ ಬೆಂಡಾಗಿ, ಕೊನೆಗೆ ವೈಕುಂಠದಲ್ಲಿ ನಾರಾಯಣನ ಪಾದಗಳ ಮೇಲೆ ಉರುಳಿದನು. ಭಗವಂತನು ತಾನು ಸದಾ ಕಾಲವೂ ತನ್ನ ಭಕ್ತನ ಪರವಾಗಿರುವುದಾ ಗಿಯೂ ತನ್ನನ್ನು ಏಕೈಕ ಆಶ್ರಯವೆಂದು ನಂಬಿರುವ ಭಕ್ತನನ್ನು ಎಂದಿಗೂ ಕೈಬಿಡುವುದಿಲ್ಲವೆಂದೂ ಸಾರಿ ಹೇಳಿದನು, "ಕರುವು ಹಸುವನ್ನು ಹಿಂಬಾಲಿಸಿ ಹೋಗುವಂತೆ ನಾನು ಭಕ್ತನನ್ನು ಹಿಂಬಾಲಿಸುತ್ತೇನೆ. ಏಕೆಂದರೆ ಪ್ರಾಪಂಚಿಕರಾದ ವರು ಏನೆಲ್ಲವನ್ನು ಬಯಸುವರೋ ಅವೆಲ್ಲವನ್ನೂ ಅವನು ನನಗಾಗಿ ತೊರೆಯು ತ್ತಾನೆ."

ಒಮ್ಮೆ ಕೃಷ್ಣನು ಉದ್ಧವನಿಗೆ ಹೀಗೆ ಹೇಳಿದನು: "ತಪಸ್ಸು, ಜ್ಞಾನ, ವೈರಾಗ್ಯ, ಯೋಗ, ಧರ್ಮ, ವ್ರತ, ತೀರ್ಥಯಾತ್ರೆ ಇವುಗಳಿಂದ ಗಳಿಸುವ ಪುಣ್ಯವನ್ನು ನನ್ನ ಭಕ್ತರು ಬಹು ಸುಲಭವಾಗಿ ಗಳಿಸಿಬಿಡುತ್ತಾರೆ." ನಿಜವಾದ ಭಕ್ತಿ ಎಷ್ಟು ದೊಡ್ಡದು ನೋಡಿ! ಅದರ ಬಲದಿಂದ ಒಬ್ಬ ಚಂಡಾಲನು ಒಬ್ಬ ಬ್ರಾಹ್ಮಣನನ್ನು ಮೀರಿಸಬಹುದು! ಭಕ್ತಿಯಿಲ್ಲದ ಒಬ್ಬ ಬ್ರಾಹ್ಮಣನು ಭಕ್ತಿಯುತ ಚಂಡಾಲನಿಗಿಂತ ಕೆಳಗಿನವನು. ಇವುಗಳನ್ನು ಪುರಾಣಗಳು ವಿವರಿಸುತ್ತವೆ. ವೇದಗಳಲ್ಲಿ ಸುಮ್ಮನೆ ನೇತಿ ನೇತಿ (ಇದಲ್ಲ, ಇದಲ್ಲ) ಎಂದು ವರ್ಣಿಸಿರುವುದು, ಮಾತುಗಳ ಎಟುಕಿಗೆ ಮೀರಿದುದು, ಮನಸ್ಸು ಕೂಡ ಗ್ರಹಿಸಲಾಗದುದು, ಇಂದ್ರಿಯಗಳಾಗಲಿ, ಮನಸ್ಸಾಗಲಿ, ಬುದ್ಧಿಯಾ ಗಲಿ ಮುಟ್ಟಲಾಗದಂಥದು. ಅಂಥದನ್ನು ಧ್ಯಾನ ಮಗ್ನರಾದವರು ಅನುಭವಕ್ಕೆ ತಂದುಕೊಳ್ಳುತ್ತಾರೆ. ಭಕ್ತಿಯು ಅದನ್ನು ಅತ್ಯಂತ ಸುಲಭವಾಗಿ ದೊರಕಿಸಿಕೊಡು ತ್ತದೆ. ಅದು ಭಕ್ತನಲ್ಲಿ ಆನಂದವನ್ನು ತುಂಬುತ್ತದೆ.

ಪುರಾಣಗಳಲ್ಲಿ ವರ್ಣಿಸಿರುವ ಭಗವಂತನು ನಿರ್ಗುಣ, ನಿರಾಕಾರ, ಅದ್ವಿತೀಯ ಬ್ರಹ್ಮ ಮಾತ್ರವಲ್ಲ, ಅವನು ಜ್ಞೇಯ ವಸ್ತು, ತಿಳಿದುಕೊಳ್ಳಬೇಕಾದ ವಸ್ತು, ಚಿತ್ ಸ್ವರೂಪ, ವಿಶ್ವದ ಮೂಲ ಸೆಲೆ. ಅವನು ಸಮಸ್ತ ಉದಾತ್ತ, ಉದ್ಧಾರಕ ಆಕರ್ಷಕ ಸದ್ಗುಣಗಳ ಆಗರ. ಸುಂದರವಾದದ್ದು, ಪ್ರೀತಿಯುತವಾದದ್ದು ಏನೇನಿದೆಯೋ

ಅದೆಲ್ಲದರ ತವರು. ಅವನು ಮೇಲಕ್ಕೆ ಎತ್ತುತ್ತಾನೆ, ಶಕ್ತಿ ತುಂಬುತ್ತಾನೆ ಮತ್ತು ಪರಿಶುದ್ಧಗೊಳಿಸುತ್ತಾನೆ. ಜ್ಞಾನ ಮಾರ್ಗದ ಶಿಖರವಾಗಿ ಗ್ರಹಿಸುವ ಅವ್ಯಕ್ತ ನಿರ್ಗುಣ ಮುಖಕ್ಕಿಂತ ಸಗುಣ ಮುಖಕ್ಕೆ ಹೆಚ್ಚು ಗಮನ ಕೊಡುವುದಕ್ಕೆ ಇದೇ ಕಾರಣ. ಮೊದಲು ಸಾಧಕನು ಭಗವಂತನ ಸಗುಣ ಮುಖವನ್ನು ಕುರಿತು ಸಾಧನೆ ಮಾಡಬೇಕು. ಇದು ಅವನಿಗೆ ಅಗತ್ಯವಾದ ಏಕಾಗ್ರತೆಯನ್ನು ಕೊಡುತ್ತದೆ. ಆಮೇಲೆ ಸ್ಥೂಲದಿಂದ ಸೂಕ್ಷ್ಮಕ್ಕೆ ಎಂಬ ತತ್ತ್ವದ ಪ್ರಕಾರ ಅವನು ನಿರ್ಗುಣ ಬ್ರಹ್ಮದ ಮೇಲೆ ಮನಸ್ಸನ್ನು ನೆಲೆಗೊಳಿಸಬಹುದು. ಮರೀಚಿಕೆಯು ಬಾಯಾರಿದ ವ್ಯಕ್ತಿಯನ್ನು ನಿಜವಾದ ಸರೋವರದಿಂದ ಬಹು ದೂರಕ್ಕೆ ಕೊಂಡೊಯ್ಯುತ್ತದೆ. ಆಮೇಲೆ ಅವನು ಹಿಂದಿರುಗಿ ನಿಜವಾಗಿ ನೀರು ದೊರಕುವ ಸರೋವರದ ಬಳಿಗೆ ಬರುತ್ತಾನೆ. ಅಲ್ಲಿ ನೀರು ಕುಡಿದು ತನ್ನ ತೃಷೆಯನ್ನು ಇಂಗಿಸಿಕೊಳ್ಳಲು ಸಮರ್ಥನಾಗುತ್ತಾನೆ. ಇದನ್ನು ಸ್ಥೂಲ ಸೌರಂಭಿಕಾನ್ಯಾಯ ಎಂದು ಕರೆಯಲಾಗುತ್ತದೆ. ಹಾಗೇ ಸಾಧಕರಿಗೆ ಮೋಕ್ಷದ ನಂತರ ನಿರ್ಗುಣೋಪಾಸನೆಯ ಬಯಕೆ ಉಂಟಾಗುತ್ತದೆ. ಭಕ್ತರ ಬಗೆಗೆ ಮೋಹಿತನಾಗಿರುವ ಭಗವಂತನು ಸಾಧುಗಳು ಮತ್ತು ಮಹಾತ್ಮರು ಅರಸುವ ರೂಪಗಳನ್ನು ಪಡೆಯುತ್ತಾನೆ, ನಾಲ್ಕು ಪುರುಷಾರ್ಥಗಳನ್ನು ಅನುಗ್ರಹಿಸುತ್ತಾನೆ.

## ಅಧ್ಯಾಯ ೧೨

# ದೇವಾಲಯಗಳು

ಪ್ರಾಚೀನರು ದೇವಾಲಯಗಳನ್ನು ದೇವಮಂದಿರಗಳನ್ನಾಗಿ ಮಾತ್ರವಲ್ಲದೆ ವಿಜ್ಞಾನ ಮಂದಿರಗಳನ್ನಾಗಿಯೂ ಪರಿಗಣಿಸಿದರು. ಅರ್ಥವನ್ನು ಪೂರ್ತಿಯಾಗಿ ತಿಳಿದು ಕೊಂಡು ಪ್ರಜ್ಞಾಪೂರ್ವಕವಾಗಿ ಮಾಡುವ ಸೇವೆಯಿಂದ ಭಗವಂತನನ್ನು ಪಡೆಯ ಬಹುದು ಎಂದು ಅವರಿಗೆ ತಿಳಿದಿತ್ತು. ದೇವಾಲಯಗಳು ಉನ್ನತ ಶಿಕ್ಷಣ ಸಂಸ್ಥೆಗಳು. ಅಲ್ಲಿ ಮನುಷ್ಯನು ನಿಜವಾದ ಮನಸ್ಸಿನ ಸಂಸ್ಕೃತಿಯನ್ನು ಬೆಳೆಸಿಕೊಳ್ಳುತ್ತಾನೆ ಎಂದು ಭಾವಿಸಿದರು. ಭಗವಂತನು ವಾಸ ಮಾಡುವ ಮಂದಿರವು ಎಷ್ಟು ಸ್ವಚ್ಛವಾಗಿ, ಶುಭ್ರವಾಗಿ, ಪವಿತ್ರವಾಗಿ ಇರುತ್ತದೋ ಮನುಷ್ಯನ ಹೃದಯದಲ್ಲಿ ಅವನು ನೆಲೆಸಿರುವ ಮಂದಿರವೂ ಅಷ್ಟೇ ಶುಭ್ರವಾಗಿರಬೇಕು, ಸ್ವಚ್ಛವಾಗಿರಬೇಕು ಎಂದು ತಿಳಿದುಕೊಂಡಿದ್ದರು. ಒಂದು ದೇವಾಲಯವನ್ನೂ ಅದರ ಪರಿಸರವನ್ನೂ ನೋಡಿಬಿಟ್ಟರೆ ಆ ಗ್ರಾಮದ ನಿವಾಸಿಗಳ ಸ್ವಭಾವ ಎಂಥದು ಎನ್ನುವುದು ತಿಳಿದು ಹೋಗುತ್ತದೆ. "ಗ್ರಾಮದ ದೇವಾಲಯವು ಸ್ವಚ್ಛವಾಗಿ, ಪರಿಸರವು ಪವಿತ್ರವಾಗಿದ್ದರೆ, ಆ ಹಳ್ಳಿಯ ಜನರು ಶುದ್ಧ ಹೃದಯರು, ಪಾಪ ಭೀತಿಯುಳ್ಳವರು, ಒಳ್ಳೆಯತನದ ಹಾದಿಯಲ್ಲೇ ನಡೆಯುವವರು ಎಂದು ಊಹಿಸಬಹುದು," ಎಂದು ಪ್ರಾಚೀನರು ಭಾವಿಸಿದ್ದರು.

ಇಂಥ ದಿವ್ಯಜ್ಞಾನ ಮಂದಿರಗಳು, ಇಂಥ ಆತ್ಮೋಪದೇಶಾಲಯಗಳು, ಆಧ್ಯಾತ್ಮಿಕ ಸ್ಫೂರ್ತಿದಾಯಕ ಸಂಸ್ಥೆಗಳು ಒಂದು ಪ್ರಸಾದ ಹಂಚುವ, ಪಿಕ್‌ನಿಕ್ ಪಾರ್ಟಿಗಳನ್ನು ಮಾಡುವ ಸ್ಥಳಗಳ ಮಟ್ಟಕ್ಕೆ ಇಳಿದುಹೋಗಿವೆ. ಅದರ ಆವರಣದಲ್ಲಿ ಆಲಸಿಗಳು, ಸೋಮಾರಿಗಳು ಸೇರಿ ಇಸ್ಪೀಟು, ಪಗಡೆ ಮೊದಲಾದ ಆಟಗಳನ್ನು ಆಡುತ್ತಾ ಕಾಲ ಕಳೆಯುತ್ತಾರೆ. ದೇವಾಲಯಗಳಲ್ಲಿ ಹೀಗೆ ಗುಂಪುಗುಂಪಾಗಿ ಜನರು ಸೇರಿ ಇಂತಹ ಕೃತ್ಯಗಳಲ್ಲಿ ನಿರತರಾಗಿದ್ದರೆ ಕಲಿಪುರುಷನು ಸಂತೋಷದಿಂದ ಬೀಗುತ್ತಾನೆ.

ಇದು ಧರ್ಮಕ್ಕೆ ವಿರುದ್ಧವಾದದ್ದು. ದೇವಾಲಯವು ಗ್ರಾಮದ ಹೃದಯ. ಆದ್ದ ರಿಂದ ಅದರಲ್ಲಿ ನಮ್ಮ ಹೃದಯವನ್ನು ಹೇಗೋ ಹಾಗೆಯೇ ಕಾಪಾಡಬೇಕು, ಪೋಷಿಸಬೇಕು, ಆರೈಕೆ ಮಾಡಬೇಕು. ಭಗವಂತನು ದೇವಾಲಯದಲ್ಲಿ ನಡೆದಾಡು ತ್ತಾನೆ ಎಂದು ನಂಬಿರಿ. ಅದು ಅವನ ಮನೆ. ಆ ವಾತಾವರಣದ ಪವಿತ್ರತೆಯನ್ನು

ಕಾಪಾಡುವ ಜವಾಬ್ದಾರಿ ಎಲ್ಲರಿಗೂ ಸೇರಿದೆ. ಅದು ಭಗವಂತನಿಗೆ ಸೇವೆ ಸಲ್ಲಿಸಿದ ಆನಂದವನ್ನು ಉಂಟುಮಾಡುತ್ತದೆ. ದೇವಾಲಯವು ಎಲ್ಲರ ಹೃದಯ ಎಂದು ನಂಬಿರಿ. ಇದನ್ನು ಮಾಡಿದ ದಿನ ಮಾನವನಲ್ಲಿರುವ ಮಾಧವ ತತ್ತ್ವವು ರತ್ನದಂತೆ ಥಳಥಳಿಸುತ್ತದೆ. ಇದು ಸತ್ಯ. ದೇವಾಲಯಗಳನ್ನು ಕಟ್ಟುವ ಶ್ರಮ, ಹಣ ಎಲ್ಲದಕ್ಕೂ ಇದೇ ಕಾರಣ. ಅಂಥದೊಂದು ಆಧ್ಯಾತ್ಮಿಕ ಶಿಸ್ತು ಅಥವಾ ವಿವೇಕ ಬೆಳೆಯಲು ಗ್ರಾಮದ ಅಧಿಕಾರಿಗಳು ಅಥವಾ ಸರಕಾರೀ ವಿಭಾಗಗಳು ಅಥವಾ ಭಕ್ತರು ಎಲ್ಲಾ ವ್ಯವಸ್ಥೆಗಳನ್ನು ಮಾಡಬೇಕು. ಆಗ ಮಾತ್ರವೇ ಮನುಷ್ಯನು ದಿವ್ಯ ಕಾಂತಿಯಿಂದ ಬೆಳಗುತ್ತಾನೆ. ಇದಿಷ್ಟೇ ಅಲ್ಲ, ಗೋಪುರ ನಿರ್ಮಾಣ ಮೊದಲಾದುವನ್ನು ಕೇವಲ ಹಣದ ಪೋಲು ಎಂದು ಟೀಕಿಸುವ ಕೆಲವು ಅತ್ಯಾಧುನಿಕ ವಿಮರ್ಶಕರಿದ್ದಾರೆ. ಅದು ಅವರಲ್ಲಿ ಸ್ವಲ್ಪವೂ ದೂರದೃಷ್ಟಿಯಿಲ್ಲದುದನ್ನು ಸೂಚಿಸುತ್ತದೆ. ಉನ್ನತ ಆದರ್ಶವು ಯಾರಲ್ಲಿದೆಯೋ ಊರ್ಧ್ವ ದೃಷ್ಟಿ ಯಾರಲ್ಲಿದೆಯೋ ಅವನು ಖಂಡಿತವಾಗಿಯೂ ಅಂತಹ ಟೀಕೆಯನ್ನು ಮಾಡುವುದಿಲ್ಲ. ಗೋಪುರದ ಮಹತ್ವವನ್ನು ಕುರಿತು ಸ್ವಲ್ಪ ಯೋಚಿಸಿದಾಗ ಅದು ಎಷ್ಟು ಪವಿತ್ರವಾಗಿದೆ, ಎಷ್ಟು ಅದ್ಭುತವಾಗಿದೆ, ಅದರ ಉದ್ದೇಶ ಎಷ್ಟು ಗಹನವಾಗಿದೆ ಎನ್ನುವುದು ತಿಳಿಯುತ್ತದೆ. ಹಾದಿತಪ್ಪಿ ಅಲೆಯುತ್ತಿರುವವರನ್ನು, ಸತ್ಯದಿಂದ ದೂರ ಹೋಗಿಬಿಟ್ಟಿರುವವರನ್ನು ಅದು ಕೈಬೀಸಿ ಕರೆಯುತ್ತದೆ. “ಓ ಮರ್ತ್ಯರೆ! ದೈಹಿಕ ಮೋಹ ಸ್ವಪ್ರತಿಷ್ಠೆ ಎಂಬ ಮಂಜಿನಿಂದ ಕುರುಡಾಗಿ ಚಂಚಲವೂ ಮಿಥ್ಯೆಯೂ ಆದ ಪ್ರಾಪಂಚಿಕ ಆಸೆಗಳೆಂಬ ಕೆಟ್ಟ ಹವೆಯಿಂದ ಆವೃತವಾಗಿ ನೀವು ನನ್ನನ್ನು ಮರೆತುಬಿಟ್ಟಿದ್ದೀರಿ. ನಾನು ನಿಮ್ಮೆಲ್ಲರ ಮೂಲವೂ ಪೋಷಣೆಯೂ ಆಗಿದ್ದೇನೆ. ಈ ಶಾಶ್ವತವಾದ, ಸದಾ ಪವಿತ್ರವಾದ, ಸದಾ ಸಂತೋಷಭರಿತವಾದ ಗೋಪುರವನ್ನು ನೋಡಿ. ನನ್ನನ್ನು ಮರೆತು ನೀವು ದುಃಖದಲ್ಲಿ ತೊಳಲಾಡುತ್ತಿದ್ದೀರಿ. ಮರುಭೂಮಿಯಲ್ಲಿ ಮರೀಚಿಕೆಯನ್ನು ಬೆನ್ನಟ್ಟಿ ಹೋಗುತ್ತಿದ್ದೀರಿ. ಬನ್ನಿ, ನಿತ್ಯನಾದ ನನ್ನ ಮೇಲೆ ವಿಶ್ವಾಸವನ್ನಿಡಿ. ಕತ್ತಲೆಯ ವಲಯದಿಂದ ಹೋರಾಡಿ ಹೊರಕ್ಕೆ ಬಂದು ಬೆಳಕಿನ ವಲಯವನ್ನು ಪ್ರವೇಶಿಸಿ. ಶಾಂತಿಯ ರಾಜಮಾರ್ಗಕ್ಕೆ ಬಂದು ಸೇರಿಕೊಳ್ಳಿ. ಅದೇ ಧರ್ಮದ ದಾರಿ. ಬನ್ನಿ, ಬನ್ನಿ, ನೀವೆಲ್ಲರೂ ಬನ್ನಿ!”

ಹೀಗೆ ಗೋಪಾಲನು ಪ್ರತಿಯೊಂದು ಹಳ್ಳಿಯ ಮನೆ ಚಾವಣಿಯ ಮೇಲಿನಿಂದ ತೋಳನ್ನೆತ್ತಿ ಎಲ್ಲರಿಗೂ ಕರೆ ಕೊಡುತ್ತಿದ್ದಾನೆ. ಆದ್ದರಿಂದ ಹೀಗೆ ಉನ್ನತ ದೃಷ್ಟಿಯಿಂದ ನೋಡಿದಾಗ, ಗೋಪುರಗಳು ಮಾನವನ ಉನ್ನತ ಆದರ್ಶಗಳು ಮತ್ತು ನಡವಳಿಕೆಗಳಿಗೆ ಪೋಷಕವಾಗಿವೆ ಎಂದು ಗೌರವಿಸಬಹುದು. ಗೋಪುರ ನಿರ್ಮಾಣದ ಹಿಂದಿರುವ ತತ್ತ್ವ ಇದು. ಈ ರಚನೆಗಳ ಹಿಂದೆ ಅಂತಹ ಉನ್ನತ

ಆದರ್ಶಗಳಿವೆ. ಇದು ನಿಜವಾದ ಅರ್ಥ, ಯಾರು ಬೇಕಾದರೂ ಅನುಭವಕ್ಕೆ ತಂದುಕೊಳ್ಳಬಹುದಾದ ಅರ್ಥ. ಗೋಪುರದ ನೆತ್ತಿಯ ಮೇಲೆ ಇರುವ ದೀಪವು ಎಲ್ಲರಿಗೂ ಆಶ್ರಯವಾಗಿರುವ ಬೆಳಕಿನ ಸಂಕೇತ. ಅಲುಗದೆ ನಿಶ್ಚಲವಾಗಿ ಉರಿಯುವ ಅಂತರ್ಜ್ಯೋತಿಯ ಸಂಕೇತ. ಹರಿಯಲ್ಲಿ ಲೀನವಾಗುವುದರಿಂದ ಬರುವ ಆಂತರಿಕವಾದ ದಿವ್ಯ ಕಾಂತಿ.

ದೇವಾಲಯಗಳು ಮರುಭೂಮಿಯಲ್ಲಿ ಓಯಸಿಸ್ ಇದ್ದ ಹಾಗೆ. ದುಃಖ, ಲೋಭಗಳೆಂಬ ಮರಳಿನಲ್ಲಿ ಹಾದಿ ತಪ್ಪಿಸಿಕೊಂಡಿರುವವರಿಗೆ ಪ್ರಶಾಂತಿ ಮಂದಿರಗಳು, ಸಂತೋಷ ಸದನಗಳು. ತಂಪಾದ ಆನಂದಭರಿತ ಶಾಂತಿಯನ್ನು ಪಡೆಯಲು ಅವು ಸ್ವಾಗತಿಸುತ್ತವೆ. ಹಾದಿ ತಪ್ಪಿ, ಅಲೆಯುವವರಿಗೆ ಗೋಪುರಗಳು ಮಾರ್ಗದರ್ಶಕಗಳು. ಭಗವಂತನ ನಾಮವೆಂಬ ಧ್ವಜವನ್ನು ಅವು ಎತ್ತರಕ್ಕೆ ಎತ್ತಿ ಹಿಡಿಯುತ್ತವೆ; ಅಲ್ಲಿ ಸಲ್ಲಿಸುವ ಸೇವೆಗಾಗಿ ಎಲ್ಲರೂ ಅವಕ್ಕೆ ಕೃತಜ್ಞರಾಗಿರಬೇಕು.

ನಿಜವಾಗಿ ಅನೇಕ ಜನ ಮಂದಬುದ್ಧಿಯ ಆಧುನಿಕರು ದೇವಾಲಯದೊಂದಿಗೆ ಸೇರಿರುವ ನಿರ್ಮಾಣಗಳು, ನಿಯಮಗಳು, ರೂಢಿ ಸಂಪ್ರದಾಯಗಳು, ಇವನ್ನು ಕುರಿತು ಚಕಿತರಾಗುತ್ತಾರೆ. ಅವರ ಸೀಮಿತ ಅರಿವಿನ ಆಚೆಗೆ ಇರುವ ಯಾವುದೇ ವಿವರಣೆಯ ಅರ್ಥವನ್ನು ಅವರು ಗ್ರಹಿಸಲಾರರು. ವಿಪರೀತ ಜ್ವರದಿಂದ ನರಳುತ್ತಿರುವ ರೋಗಿಗೆ ಸಿಹಿ ತಿಂಡಿಯೂ ಕಡುಕಹಿಯಾಗಿ ತೋರುತ್ತದೆ. ಹಾಗೆಯೇ ಪ್ರಾಪಂಚಿಕತೆಯೆಂಬ ಜ್ವರದಿಂದ ಬಳಲುತ್ತಿರುವವರು ಸತ್ಯದ ನಿಜವಾದ ಸಿಹಿಯನ್ನು ಎಂದಿಗೂ ಸವಿಯಲಾರರು. ಮೊದಲು ಅವರ ಆ ಜ್ವರ ಇಳಿಯಬೇಕು.

ಮಾನವ ಜೀವನದ ಗುರಿ ಏನು? ಮನುಷ್ಯನು ಸಾಧಿಸಬೇಕಾದ ಲಕ್ಷ್ಯ ಯಾವುದು? ತಿನ್ನುವುದು, ಕುಡಿಯುವುದು, ನಿದ್ರಿಸುವುದು, ಒಂದಿಷ್ಟು ಸುಖ ದುಃಖ ಅನುಭವಿಸುವುದು, ಕೊನೆಗೆ ಒಂದು ಪ್ರಾಣಿಯಂತೆಯೋ ಪಕ್ಷಿಯಂತೆಯೋ ಸತ್ತು ಹೋಗುವುದು, ಇಷ್ಟೆಯೆ? ಅಲ್ಲ, ಖಂಡಿತವಾಗಿಯೂ ಅಲ್ಲ. ಸ್ವಲ್ಪ ಆಲೋಚನೆ ಮಾಡಿದರೆ ಹಾಗಲ್ಲವೆನ್ನುವುದು ತಿಳಿಯುತ್ತದೆ. ಮಾನವನ ಗುರಿ ಬ್ರಹ್ಮ ಸಾಕ್ಷಾತ್ಕಾರ, ಸರ್ವೋನ್ನತ ಬ್ರಹ್ಮವನ್ನು ಅರಿಯುವುದು! ಅದಿಲ್ಲದೆ ಯಾವ ಮನುಷ್ಯನಿಗೂ ಶಾಂತಿಯೂ ದೊರಕುವುದಿಲ್ಲ. ಅವನು ಆ ದಿವ್ಯಾನುಗ್ರಹದ ಆನಂದವನ್ನು ಪಡೆಯಬೇಕು. ಅಸಂಖ್ಯಾತವಾದ ಪ್ರಾಪಂಚಿಕ ವಸ್ತುಗಳಿಂದ ಸಂತೋಷವನ್ನು ಪಡೆಯುತ್ತೇನೆಂದು ಎಷ್ಟೇ ಪ್ರಯತ್ನಿಸಿದರೂ ಆ ತೃಪ್ತಿಯು ಅತ್ಯಲ್ಪ; ಏಕೆಂದರೆ ಜಗತ್ತಿನ ವಸ್ತುಗಳ ಮೂಲಕವಾಗಿ ಶಾಂತಿಯನ್ನು ಪಡೆಯುವುದು ಸಾಧ್ಯವಿಲ್ಲ.

ಮನಸ್ಸಿನ ಪರಿಪೂರ್ಣ ಪ್ರಜ್ಞೆಯಲ್ಲಿ ಆದಿಮ ಕಾರಣದಲ್ಲಿ, ಪರಿವರ್ತನರಹಿತ ಅಸ್ತಿತ್ವದಲ್ಲಿ ಲೀನವಾದಾಗ ಮಾತ್ರವೇ ಶಾಂತಿಯನ್ನು ಪಡೆಯುವುದು ಸಾಧ್ಯ.

ಅತ್ಯಂತ ಸುಸಜ್ಜಿತವಾದ ಮನೆ, ಮನುಷ್ಯನು ಹಾತೊರೆಯಬಹುದಾದ ಎಲ್ಲಾ ಸುಖ ಭೋಗ ವಸ್ತುಗಳಿಂದ ಸಜ್ಜುಗೊಂಡಿದ್ದರೂ ರಾಶಿರಾಶಿಯಾಗಿ ಐಶ್ವರ್ಯವು ತುಂಬಿದ್ದರೂ ಮನುಷ್ಯನಿಗೆ ಶಾಂತಿಯನ್ನು ನೀಡಲಾರದು. ಭಗವಂತನಿಗೆ ಶರಣಾಗುವುದರಿಂದ ಮಾತ್ರ, ವ್ಯಕ್ತಿಯ ಮೂಲಸತ್ವವೇ ಆಗಿರುವ, ಸಮಸ್ತ ಜೀವಕೋಟಿಯ ಮೂಲವಾಗಿರುವ ಅವನಿಗೆ ಶರಣಾಗುವುದರಿಂದ ಮಾತ್ರ ಅದನ್ನು ಪಡೆದುಕೊಳ್ಳಬಹುದು. ಸ್ವಲ್ಪ ಯೋಚನೆ ಮಾಡಿ. ಐಶ್ವರ್ಯ, ಚಿನ್ನ, ಆಸ್ತಿಪಾಸ್ತಿ, ಸುಖ ಸಾಮಗ್ರಿ ಇರುವ ಅದೃಷ್ಟಶಾಲಿಗಳು ಶಾಂತಿಯಿಂದಿದ್ದಾರೇನು? ಹೋಗಲಿ, ತುಂಬಾ ವಿದ್ಯಾವಂತರಾಗಿಯೋ ಅಪ್ರತಿಮ ಸೌಂದರ್ಯದಿಂದ ಕೂಡಿಯೋ ಅಥವಾ ಅಸಾಧಾರಣ ದೇಹಬಲದಿಂದ ಕೂಡಿಯೋ ಇರುವ ವ್ಯಕ್ತಿಗಳು ಶಾಂತಿಯಿಂದ ಇದ್ದಾರೇನು? ಅವರ ದುಃಖಕ್ಕೆ ಏನು ಕಾರಣ?

ಕಾರಣ ಇಷ್ಟೆ, ಸೃಷ್ಟಿಯ ದೈವಿಕ ಆಧಾರವನ್ನು ಅವರು ಮರೆತುಬಿಟ್ಟಿದ್ದಾರೆ. ಎಲ್ಲದರ ತಳದಲ್ಲಿರುವ ಸರ್ವೋನ್ನತ ತತ್ತ್ವವನ್ನು ಅವರು ಅಲಕ್ಷಿಸಿದ್ದಾರೆ. ಶ್ರದ್ಧೆ, ಒಬ್ಬ ಸರ್ವೋನ್ನತ ಪ್ರಭುವಿನಲ್ಲಿ ಭಕ್ತಿ ಇಲ್ಲದ ಜೀವನ ಖಂಡನೀಯವಾದದ್ದು. ದೈವ ತತ್ತ್ವದ ಅಮೃತವನ್ನು ಸವಿಯದೆ ಕಳೆದ ಜೀವನವೆಲ್ಲವೂ ವ್ಯರ್ಥವಾಗಿ ಪೋಲಾದ ಅವಕಾಶಗಳು.

ಇದು ನಿಜವಾಗಿಯೂ ವಿಚಿತ್ರವಾದ ತಿರುವು! ನಿಮ್ಮ ಅಸಲಿ ಆಧಾರ, ನಿಮ್ಮ ಸಂತೋಷದ ಚಿಲುಮೆ, ನಿಮ್ಮ ಅಂತಿಮ ಮೂಲಭೂತ ಪರಮಾತ್ಮ ತತ್ತ್ವವು ನಿಮಗೆ ಯಾವುದೋ ಅನ್ಯವಾದ, ಪರಕೀಯವಾದ, ದೂರದ, ಅನಗತ್ಯವಾದ, ಪಡೆಯಬೇಕಾಗಿಲ್ಲದ ವಸ್ತುವಾಗಿಬಿಟ್ಟಿದೆ; ಚಂಚಲವಾದ, ಅನಿತ್ಯವಾದ, ಥಳಕು, ಆಡಂಬರಗಳ ಪ್ರಪಂಚವು ಹತ್ತಿರವಾಗಿದೆ, ಅಗತ್ಯ, ಅಪೇಕ್ಷಣೀಯ ಅನಿಸಿದೆ !

ಭಗವಂತನಿಗೆ ಶರಣಾಗುವುದರಿಂದ ದೊರಕುವ ಆನಂದವನ್ನು ವಂಚಿಸಿಕೊಂಡು, ಭಕ್ತಿಯ ಹೆಸರಿನಲ್ಲಿ ಜನರು ಪವಿತ್ರ ಕ್ಷೇತ್ರಗಳಿಗೆ, ಸಾಧು ಸಂತರ ಬಳಿಗೆ, ಪುಣ್ಯ ನದಿಗಳ ಬಳಿಗೆ ಅಲೆದಾಡುತ್ತಾರೆ. ನಿಜವಾದ ಭಕ್ತಿ ಸ್ವಲ್ಪ ಇದ್ದರೂ ಅವರನ್ನು ಈ ಭ್ರಮೆಯಿಂದ ಎಚ್ಚರಿಸುತ್ತದೆ. ಮಾನವನು ತನ್ನ ನಿಜವಾದ ಮನೆಗೆ, ಅಂದರೆ ಭಗವಂತನ ಬಳಿಗೆ ಹಿಂದಿರುಗಿ ಬಂದು ಸೇರಿದಾಗ ಮಾತ್ರವೇ ಶಾಂತಿಯನ್ನು ಪಡೆ

ಯುವನು ಎಂಬುದನ್ನು ಕಲಿಸುತ್ತದೆ. ಅಲ್ಲಿಯವರೆಗೆ ಮನೆಯ ಗೀಳು ಅವನನ್ನು ಕಾಡುತ್ತಲೇ ಇರುತ್ತದೆ.

ದೇವಾಲಯಗಳು ಆ ಮನೆಗೆ ಆಹ್ವಾನ ಪತ್ರಿಕೆಗಳು; ಆ ಕಡೆಗೆ ಮನುಷ್ಯನನ್ನು ನಿರ್ದೇಶಿಸುವ ಗುರುತು ಹಲಗೆಗಳು. ಒಂದು ಸಂದರ್ಭದಲ್ಲಿ ಚಿತ್ರಕೂಟ ಪರ್ವತದ ಮೇಲೆ ಶ್ರೀರಾಮಚಂದ್ರನು ತನ್ನ ಸುತ್ತಲೂ ಕುಳಿತಿದ್ದವರಿಗೆ ಹೀಗೆ ಹೇಳಿದನು: "ಮುಂಜಾನೆಯಾಗುತ್ತದೆ, ಸಂಜೆಯಾಗುತ್ತದೆ. ಬೆಳಗಾಗುತ್ತಿದ್ದಂತೆ ಮನುಷ್ಯನಲ್ಲಿ ಲೋಭವು ಜಾಗೃತವಾಗುತ್ತದೆ; ಸಂಜೆಯಾಗುತ್ತಿದ್ದಂತೆ ಕಾಮವು ಆತನನ್ನು ಆವರಿಸಿಕೊಳ್ಳುತ್ತದೆ. ನಿಮ್ಮ ಜೀವನ ವಿಧಾನ ಇಷ್ಟೇ ಆಗಿರಬೇಕೇನು? ಇದು ನಿಮ್ಮ ಗುರಿಯೇನು? ಒಂದೊಂದು ದಿನವು ಉರುಳಿದಾಗಲೂ ಮನುಷ್ಯನು ಒಂದು ಅಮೂಲ್ಯವಾದ ಅವಕಾಶವನ್ನು ಪೋಲು ಮಾಡಿರುತ್ತಾನೆ; ಮೃತ್ಯುವಿನ ಗವಿಯ ಕಡೆಗೆ ಇನ್ನೊಂದು ಹೆಜ್ಜೆಯನ್ನಿಟ್ಟಿರುತ್ತಾನೆ. ಆದರೆ ಎಂದಾದರೂ ತನ್ನ ಈ ದುರ್ವಿಧಿಗಾಗಿ ಅವನು ವಿಷಾದಿಸಿದ್ದಾನೆಯೆ? ಪೋಲಾಗಿ ಹೋದ ದಿನವನ್ನು ಕುರಿತು ಮರುಗಿದ್ದಾನೆಯೆ?" ಈ ಸಂದೇಶವು ಎಷ್ಟು ಸ್ಮರಣೀಯವಾಗಿದೆ ಗಮನಿಸಿ!

ನೆನಪಿನಲ್ಲಿಟ್ಟುಕೊಳ್ಳಬೇಕಾದ ಇಂತಹ ಸಂದೇಶಗಳಿಂದಾಗಿಯೇ ಭರತವರ್ಷದ ಸಂಸ್ಕೃತಿಯ ಕೇಂದ್ರ ವಸ್ತು ಭಗವಂತ ಆಗಿರುವುದು. ಭರತ ಎಂದರೆ ಭಗವಾನ್ ಅಥವಾ ದೇವರಿಗಾಗಿ ರತಿ ಅಥವಾ ಮೋಹವನ್ನು ಹೊಂದಿರುವ ನಾಡು ಎಂದು ಅರ್ಥ. ಪಾಶ್ಚಾತ್ಯರು ಈ ವಸ್ತುನಿಷ್ಠ ಪ್ರಪಂಚವನ್ನು ಆಳುವ ನಿಯಮಗಳನ್ನು ಕಂಡುಹಿಡಿಯಲು ಸಮಸ್ತವನ್ನೂ ತ್ಯಾಗ ಮಾಡಿ ಅಪಾರ ಏಕಾಗ್ರತೆಯಿಂದ ಶ್ರಮಿಸುತ್ತಾರೆ; ಇಲ್ಲಿ ಭರತ ವರ್ಷದಲ್ಲಿ, ಜನರು ವಿಶ್ವದ ಮೂಲ ಕಾರಣವೂ ಅಚಲವಾದ ಶಾಂತಿಯನ್ನು ನೀಡುವಂಥದೂ ಆದ ಸರ್ವೋನ್ನತ ತತ್ತ್ವವನ್ನು ಕಂಡುಹಿಡಿದು, ಸಾಕ್ಷಾತ್ಕರಿಸಿಕೊಳ್ಳಲು ಸರ್ವಸ್ವವನ್ನೂ ತ್ಯಾಗಮಾಡಿದ್ದಾರೆ.

ಪಾಶ್ಚಾತ್ಯರು ಕ್ಷಣಿಕ ವಸ್ತುಗಳಿಗಾಗಿ ತ್ಯಾಗ ಮಾಡುತ್ತಾರೆ; ಇಲ್ಲಿ ತ್ಯಾಗ ನಿತ್ಯ ವಸ್ತುವಿಗಾಗಿ. ಇದು ವಿಜ್ಞಾನಕ್ಕಾಗಿ; ಅದು ಅಜ್ಞಾನಕ್ಕಾಗಿ. ಇದು ತಪಸ್ಸು, ಅವರದು ತಮಸ್ಸು. ಆದ್ದರಿಂದಲೇ ಇಂದಿಗೂ ಶತಶತಮಾನಗಳ ಅಂಗಳದುದ್ದಕ್ಕೂ ಇಲ್ಲಿನ ಜನರ ಮುಖದ ಮೇಲೆ ಋಷಿಗಳು, ಸಾಧುಗಳು ಮತ್ತು ಯೋಗಿಗಳ ದಿವ್ಯ ಕಾಂತಿ ಮಿನುಗುತ್ತದೆ. ಕೆಲವೊಮ್ಮೆ ಅಲ್ಲಿ ನಿರಾಶೆ, ಅವಿವೇಕ, ಅತೃಪ್ತಿಗಳ ನೆರಳು ಈ ದೇಶದ ಜನರ ಮುಖಗಳಲ್ಲಿ ಕಾಣಿಸಿದರೆ, ಅದು ಧರ್ಮದಲ್ಲಿ ನಂಬಿಕೆ ಕ್ಷೀಣವಾಗುತ್ತಿರುವುದರ ಮುನ್ನೆಚ್ಚರಿಕೆ.

ದೇವಾಲಯಗಳು ಜನರಿಗೆ ಅವರ ಹೃದಯದ ಮೇಲೆ ಮುಸುಕಿರುವ ಮೋಹದ ತೆರೆಯನ್ನು ತೆಗೆದುಹಾಕುವ ಕಲೆಯನ್ನು ಕಲಿಸಬೇಕು. ಅವು ಇರುವುದೇ ಅದಕ್ಕಾಗಿ. ಆದ್ದರಿಂದಲೇ ತ್ಯಾಗರಾಜರು ತಿರುಪತಿಯ ದೇವಸ್ಥಾನದಲ್ಲಿ ಕುಳಿತು ಹಂಬಲಿಸಿದರು: "ನನ್ನೊಳಗಿರುವ ಗರ್ವ ದ್ವೇಷಗಳ ತೆರೆಯನ್ನು ತೆಗೆದುಹಾಕು ಸ್ವಾಮಿ." ಕರುಣೆಯ ಕಿರಣಗಳ ಎದುರಿಗೆ ಮಾಯೆಯ ಮಂಜು ಕರಗಿಹೋಯಿತು. ಆಗ ಅವರು ಪರದೈವದ ದಿವ್ಯ ರೂಪವನ್ನು ವರ್ಣಿಸಿ ಹೃದಯ ತುಂಬಿ ಹಾಡಿದರು 'ಶಿವುಡನೋ ಮಾಧವುಡನೋ'. ಆ ರೂಪದ ಮಾಧುರ್ಯದಲ್ಲಿ ಆಳವಾಗಿ ಮುಳುಗಿದರು. ದೈವಿಕ ತತ್ತ್ವದಿಂದ ಅವರ ಹೃದಯವನ್ನು ಮಥಿಸಿದುದರಿಂದ ಜ್ಞಾನದ ಕಿಡಿಯು ಹೊತ್ತಿಕೊಂಡಿತು, ಸಾಕ್ಷಾತ್ಕಾರದ ಜ್ವಾಲೆಯಾಗಿ ಬೆಳೆಯಿತು.

ಈ ಕಲಿಯುಗದಲ್ಲಿ ಮಾತ್ರವಲ್ಲ, ಅದಕ್ಕಿಂತ ಹಿಂದಿನ ಯುಗಗಳಲ್ಲಿಯೂ ಕೃತ, ತ್ರೇತ, ದ್ವಾಪರ ಯುಗಗಳಲ್ಲಿಯೂ ನಾಮಸ್ಮರಣವು ಬಂಧನದಿಂದ ಮುಕ್ತಿ ಪಡೆಯುವ ರಹಸ್ಯವಾಗಿ ಬಂದಿದೆ. ನಾಮಸ್ಮರಣೆಯು ಸಹಜವಾಗಿ, ಸ್ವಯಂ ಪ್ರೇರಿತವಾಗಿ, ಯಾವ ತಡೆಯೂ ಇಲ್ಲದೆ ನಡೆಯುವುದು ದೇವಾಲಯದಲ್ಲೇ! ಆದ್ದರಿಂದ ದೇವಾಲಯಕ್ಕೆ ಹೋಗುವುದು ತುಂಬಾ ಮುಖ್ಯ. ಅದರಲ್ಲೂ ಎಲ್ಲೆಲ್ಲೂ ದುಷ್ಟ, ಕುಹಕ ಆಲೋಚನೆಗಳಿಂದ ವಾಯುವು ಕಲುಷಿತವಾಗಿರುವ ಕಲಿಯುಗದಲ್ಲಿ ಅದು ಅತ್ಯಂತ ಅಗತ್ಯ.

ಈ ಕಾರಣದಿಂದಾಗಿಯೇ ಭಗವದ್ಗೀತೆಯಲ್ಲಿ ಕೃಷ್ಣನು, "ಯಜ್ಞಗಳಲ್ಲಿ ನಾನು ಜಪಯಜ್ಞ," ಎಂದು ಘೋಷಿಸಿದ್ದಾನೆ. ಯಜ್ಞದ ಅಗ್ನಿಯಲ್ಲಿ ಪ್ರಾಣಿಯನ್ನು ಹೋಮ ಮಾಡುತ್ತಾರಷ್ಟೆ. ಇಲ್ಲಿ ಅಜ್ಞಾನವೇ ಆ ಪ್ರಾಣಿ. ಅದನ್ನು ಹೋಮ ಮಾಡಲಾಗುತ್ತದೆ. ದುಃಖದ ಪರಿಹಾರಕ್ಕೆ, ಸಂತೋಷದ ಸಂಪಾದನೆಗೆ ಭಗವಂತನ ನಾಮಸ್ಮರಣೆ ನಡೆಯುವ ದೇವಾಲಯಗಳು ಅತ್ಯಂತ ಅಗತ್ಯ. ಆನಂದಕ್ಕಾಗಿ ಸ್ಮರಣೆ, ಸ್ಮರಣೆಗಾಗಿ ದೇವಾಲಯ; ಇದು ಕ್ರಮ. ಇದಕ್ಕಿಂತ ಹೆಚ್ಚು ಫಲಪ್ರದವಾದದ್ದು, ಹೆಚ್ಚು ಆನಂದದಾಯಕವಾದದ್ದು, ಹೆಚ್ಚು ರಮಣೀಯವಾದದ್ದು ಬೇರೊಂದಿಲ್ಲ. "ಅದ್ಭುತವಾದ ಸರಳ ಭಗವನ್ನಾಮವಿರುತ್ತಾ ಸದಾ ಸಿದ್ಧವಾಗಿರುವ ನಾಲಗೆಯಿರುತ್ತಾ ಆತನ ಮಹಿಮೆಯನ್ನು ಎತ್ತರದ ದನಿಯಲ್ಲಿ ಹಾಡಲು ಅನುಕೂಲಿಸುವಂತೆ ಭಗವಂತನ ಸುಂದರ ವಿಗ್ರಹವನ್ನು ಇರಿಸಿರುವ ದೇವಾಲಯವಿರುತ್ತಾ ಜನರೇಕೆ ನರಕದ ಬಾಗಿಲ ಕಡೆಗೆ ಧಾವಿಸುತ್ತಾರೆ?" ಎಂದು ವ್ಯಾಸರು ಆಶ್ಚರ್ಯಪಟ್ಟರು. ನಾಮ ಮತ್ತು ಅದರ ಸ್ಮರಣೆಯ ಪರಿಣಾಮವೆಂಥದೆಂಬುದರ ಪ್ರತ್ಯಕ್ಷ ಅನುಭವದಿಂದ ಅವರು ಆ ರೀತಿ ಆಶ್ಚರ್ಯವನ್ನು ವ್ಯಕ್ತಪಡಿಸಿದರು. ಹಾಗೆಯೇ ತುಲಸೀದಾಸರು! ಅವರು ಸದಾ ದೇವಾಲಯದಲ್ಲೇ ವಾಸಮಾಡುತ್ತ ತಾವು

ಸವಿದ ಆನಂದವನ್ನು ಹಾಡಿದರು. "ಭಗವಂತನ ನಾಮವನ್ನು, ದೇವಾಲಯವನ್ನು ಅಲಕ್ಷಿಸಿದ ಜನರು, ಬೇರೆ ಸ್ಥಳಗಳಲ್ಲಿ ಶಾಂತಿ ಸಂತೋಷಗಳನ್ನು ಹುಡುಕುತ್ತಿರುವುದನ್ನು ನೋಡಿದಾಗ ನನಗೆ, ಎದುರಿಗೆ ತಟ್ಟೆಯಲ್ಲಿ ಬಡಿಸಿರುವ ಅದ್ಭೂರಿಯಾದ, ರುಚಿಯಾದ ಅತ್ಯುತ್ತಮವಾದ ಆಹಾರವನ್ನು ಅಲಕ್ಷಿಸಿ, ಇತರರು ತಟ್ಟೆಗಳಲ್ಲಿ ತಿಂದು ಉಳಿಸಿರುವ ಎಂಜಲಿಗಾಗಿ ಕೈಚಾಚಿ ಗೋಗರೆಯುತ್ತಿರುವ ಮೂರ್ಖತನ ನೆನಪಾಗುತ್ತದೆ," ಎಂದು ಅವರು ಕೊರಗಿದರು.

ವೈದಿಕ ಸಾಹಿತ್ಯದಲ್ಲಿ ಭಗವನ್ನಾಮಕ್ಕೆ ಹಾಗೂ ಮನಸ್ಸು ಅದರ ಮೇಲೆ ನೆಲೆಗೊಳ್ಳುವಂತೆ ಮಾಡುವುದಕ್ಕೆ ಅತಿ ಹೆಚ್ಚಿನ ಪ್ರಾಮುಖ್ಯವನ್ನು ನೀಡಲಾಗಿದೆ. "ಓಂ ಇತ್ಯೇಕಾಕ್ಷರಂ ಬ್ರಹ್ಮ (ಓಂ ಆ ಒಂದು ಶಬ್ದವೇ ಬ್ರಹ್ಮ)," ಎಂದು ಆರ್ಯ ಋಷಿಗಳು ಘೋಷಿಸಿದ್ದಾರೆ. ಯಾರಾದರೂ ಸಂತನನ್ನು ಭಗವನ್ನಾಮವಿಲ್ಲದೆ, ಭಗವಂತನ ನಿವಾಸವಿಲ್ಲದೆ ಉದ್ಧರಿಸಲಾಗಿದೆಯೆ ಎಂಬುದನ್ನು ಸ್ವಲ್ಪ ಪರೀಕ್ಷಿಸಿ ನೋಡಿ. ಗೌರಾಂಗನಿಗೆ ಜಗನ್ನಾಥ ಮಂದಿರವು ಸ್ಫೂರ್ತಿಯಾಯಿತು, ಆಶ್ರಯವಾಯಿತು; ಜಯದೇವನಿಗೆ ರಾಧಾಕೃಷ್ಣ ಮಂದಿರ; ನಂದನಾರ್‌ಗೆ ಚಿದಂಬರದ ದೇವಾಲಯ; ವಲ್ಲಭಾಚಾರ್ಯ, ಕಬೀರ್, ನಾನಕ್, ಮೀರಾ, ರಾಧಾ, ರಾಮಾನುಜ, ಮಧ್ವ, ಶಂಕರ, ನಾಮದೇವ, ತುಲಸೀದಾಸ, ತ್ಯಾಗರಾಜ ಎಲ್ಲರೂ ಭಗವಂತನ ದರ್ಶನವನ್ನು, ಅಷ್ಟೇಕೆ ದಿವ್ಯಜ್ಞಾನವನ್ನೂ ದೇವಾಲಯಗಳಿಂದ ಪಡೆದರು. ಇನ್ನು ಹೆಚ್ಚಿಗೆ ಹೇಳಬೇಕಾದ ಅಗತ್ಯವೇನಿದೆ? ಈಚೆಗೆ, ರಾಮಕೃಷ್ಣ ಪರಮಹಂಸರು ದಿವ್ಯಾನಂದವನ್ನು ಸವಿದದ್ದು, ತಮ್ಮ ನಿಜಸ್ವರೂಪವನ್ನು ಅರಿತುಕೊಂಡದ್ದು, ರಾಣಿ ರಾಸಮಣಿ ಕಟ್ಟಿಸಿದ ಕಾಳಿ ದೇವಾಲಯದಲ್ಲೇ ಅಲ್ಲವೆ?

ಇಂತಹ ದೇವಾಲಯಗಳನ್ನು ದುರುಪಯೋಗಪಡಿಸಿಕೊಳ್ಳುವುದು, ಆ ಪವಿತ್ರ ಆವರಣವನ್ನು ಹಾಳುಮಾಡುವುದು, ಅವುಗಳ ಪವಿತ್ರ ಧ್ಯೇಯೋದ್ದೇಶಗಳನ್ನು ಮರೆಯುವುದು, ಅವುಗಳ ಶಿಥಿಲತೆಗೆ, ವಿನಾಶಕ್ಕೆ ಎಡೆಗೊಡುವುದು ನಿಜವಾಗಿ ಅಧರ್ಮ, ಧರ್ಮವಲ್ಲ. ಈ ಕೆಲಸ ಮಾಡುವವರಲ್ಲಿ ಒಳಗೂ ಬೆಳಕಿಲ್ಲ, ಹೊರಗೂ ಬೆಳಕಿಲ್ಲ; ಅವರು ಸಂಪೂರ್ಣ ಕಗ್ಗತ್ತಲೆಯಲ್ಲಿದ್ದಾರೆ. ದೇವಾಲಯ ಪೂಜೆ, ಸಂತರ ಸಹವಾಸ, ನಾಮಸ್ಮರಣೆ, ವಿಗ್ರಹ ಅಥವಾ ಸಂಕೇತವನ್ನು ಸ್ತುತಿಸುವುದು ಇವು ಬೆಳಕಿನ ಹೊರಗಿನ ಮೂಲಗಳು; ಧ್ಯಾನ, ತಪಸ್ಸು, ಮನನ ಒಳಗಿನ ಮೂಲಗಳು. ಎರಡೂ ಇಲ್ಲದೆ ಮನುಷ್ಯನು ಭಗವಂತನ ಮಹಿಮೆಯ ದರ್ಶನವನ್ನು ಪಡೆಯುವುದು ಹೇಗೆ? ತುಲಸೀದಾಸ್ ಗೋಸ್ವಾಮಿಗಳು ಒಂದು ಸಾರಿ ಹೀಗೆ ಹೇಳಿದರು, "ಮನೆಯ ಹೊರಗೂ ಒಳಗೂ ಬೆಳಕಿರಬೇಕೆಂದು ಬಯಸುವಿರಾ? ಹಾಗಾದರೆ, ಹೊಸ್ತಿಲ ಮೇಲೆ ದೀಪವನ್ನಿಡಿ! ಹಾಗೆಯೇ ನಿಮ್ಮ

ಹೊರಗೂ ಒಳಗೂ ಶಾಂತಿಯ ಬೆಳಕನ್ನು ಹರಡಬೇಕೆಂದು ಬಯಸುವುದಾದರೆ ಭಗವಂತನ ನಾಮವನ್ನು ನಾಲಗೆಯ ಮೇಲಿಡಿ. ನಾಲಗೆ ನಿಮ್ಮ ವ್ಯಕ್ತಿತ್ವದ ಹೊಸ್ತಿಲು. ನಾಲಗೆಯ ಮೇಲಿರುವ ದೀಪವು ಯಾವುದೇ ಬಿರುಗಾಳಿ ಬೀಸಿದರೂ ಅಲುಗುವುದಿಲ್ಲ, ಮಂಕಾಗುವುದಿಲ್ಲ ಅಥವಾ ಅಳಿಸುವುದಿಲ್ಲ. ಅದು ನಿಮಗೂ ನೀವು ಸಂಧಿಸುವ ಎಲ್ಲರಿಗೂ ಇಡೀ ಜಗತ್ತಿಗೂ ಶಾಂತಿಯನ್ನು ನೀಡುತ್ತದೆ."

ಆದ್ದರಿಂದ ವ್ಯಕ್ತಿಯು ತನ್ನ ಬಿಡುಗಡೆಗೆ ಭಗವಂತನ ರೂಪದ ದರ್ಶನ ಪಡೆಯಬೇಕು. ನಾಮದ ಸ್ಮರಣೆಯೇ ರೂಪದ ದರ್ಶನವನ್ನು ಒದಗಿಸುತ್ತದೆ. ಆ ರೂಪವೇ ಸಮಸ್ತ ಸೌಂದರ್ಯ, ಮಹಿಮೆಗಳಿಂದ ದೇವಾಲಯಗಳಲ್ಲಿ ಚಿತ್ರಿತವಾಗಿದೆ, ಅದು ಸಾಧಕನಿಗೆ ಸ್ಫೂರ್ತಿ ನೀಡುವ ಸಲುವಾಗಿ. ಸಾಮಾನ್ಯ ಕಣ್ಣುಗಳು ಅದನ್ನು ಕಾಣಲಿ ಬಿಡಲಿ, ಆತ್ಮ ಸತ್ಯವನ್ನು ಅರಸುವವರಿಗೆ ಮಾತ್ರ ದೇವಾಲಯಗಳು ಅನಿವಾರ್ಯವಾಗಿ ಕಂಡು ಬರುತ್ತವೆ.

ಅಧ್ಯಾಯ ೧೩

# ಧರ್ಮಿಷ್ಠ

ಧರ್ಮಕ್ಕೆ ಪೂರ್ವಗ್ರಹವಾಗಲಿ ಪಕ್ಷಪಾತವಾಗಲಿ ಇಲ್ಲ. ಅದರಲ್ಲಿ ಸತ್ಯ ಮತ್ತು ನ್ಯಾಯಗಳು ಸೇರಿವೆ. ಆದ್ದರಿಂದ ಮನುಷ್ಯನು ಧರ್ಮಯುತನಾಗಬೇಕು. ಅದ ರಿಂದ ದೂರವಾಗುವುದು ತಪ್ಪು. ಇತರರ ಬಗೆಗೆ ದ್ವೇಷವನ್ನು ತೊರೆಯುವುದು, ಪರಸ್ಪರ ವಿಶ್ವಾಸ, ಸಾಮರಸ್ಯಗಳನ್ನು ಬೆಳೆಸಿಕೊಳ್ಳುವುದನ್ನು ಧರ್ಮವು ಹೇಳುತ್ತದೆ. ಈ ವಿಶ್ವಾಸ, ಸಾಮರಸ್ಯಗಳಿಂದ ದಿನ ದಿನಕ್ಕೆ ಪ್ರಪಂಚವು ಹೆಚ್ಚು ಹೆಚ್ಚು ಆನಂದದ ನೆಲೆಯಾಗಿ ಬೆಳೆಯುತ್ತದೆ. ಇವು ಬಲವಾಗಿ ಸ್ಥಾಪಿತವಾದರೆ ಜಗತ್ತಿನಲ್ಲಿ ಅಶಾಂತಿ, ಅಶಿಸ್ತು, ಅವ್ಯವಸ್ಥೆ, ಅನ್ಯಾಯಗಳ ಹೆಸರೇ ಇರುವುದಿಲ್ಲ.

ನೀವು ಏನನ್ನೇ ಮಾಡಿದರೂ ಮೊದಲು ಅದರ ನಿಜವಾದ ಅರ್ಥವನ್ನು ಗ್ರಹಿಸ ಬೇಕು. ಆಮೇಲೆ ಅದನ್ನು ಬೆಳೆಸಿಕೊಳ್ಳುವುದೆಂದಾದರೆ ಪ್ರತಿದಿನವೂ ಮಾಡಬೇಕು. ಈ ವಿಧಾನದಿಂದ ಜ್ಞಾನವು ವರ್ಧಿಸುತ್ತದೆ, ಶಾಶ್ವತವಾದ ಆನಂದ ಲಭಿಸುತ್ತದೆ. ಈ ಎರಡು ಮೂಲ ಕಾರ್ಯಗಳು ಧರ್ಮ ಮತ್ತು ಕರ್ಮ. ಪಕ್ಷ ಪಾತವಿಲ್ಲದವರೂ ಪೂರ್ವಗ್ರಹರಹಿತರೂ ಆದ, ಧರ್ಮದಲ್ಲಿ ನೆಲೆಗೊಂಡ ಜ್ಞಾನಿಗಳು ವೇದಗಳು ಬೋಧಿಸಿರುವಂತೆ ಸತ್ಯದ ಹಾದಿಯಲ್ಲಿ ನಡೆಯುತ್ತಾರೆ. ಇಂದು ಎಲ್ಲ ಮನುಷ್ಯ ರಿಗೂ ತೆರೆದಿರುವ ದಾರಿ ಇದೇಯೆ.

ಧರ್ಮವನ್ನು ಮೂರು ಹಂತಗಳಲ್ಲಿ ತಿಳಿದುಕೊಳ್ಳಲಾಗುತ್ತದೆ—ಧರ್ಮದಲ್ಲಿ ನೆಲೆ ಗೊಂಡಿರುವ ವಿದ್ವಾಂಸರಿಂದ ಮೊದಲು ತರಬೇತಿಯನ್ನು ಪಡೆಯಬೇಕು, ಆತ್ಮ ಶುದ್ಧಿಗಾಗಿ ಮತ್ತು ಸತ್ಯಕ್ಕಾಗಿ ಆಶಿಸಬೇಕು ಮತ್ತು ಪರಮೇಶ್ವರನ ವಾಣಿಯಾದ ವೇದ ವಿದ್ಯೆಯ ಮೌಲ್ಯವನ್ನು ಅರ್ಥಮಾಡಿಕೊಳ್ಳಬೇಕು. ಈ ಮೂರೂ ಪೂರೈಸಿ ದಾಗ ಮನುಷ್ಯನು ಸತ್ಯವನ್ನು ಅದನ್ನು ಅಸತ್ಯದಿಂದ ಬೇರ್ಪಡಿಸುವುದು ಹೇಗೆನ್ನು ವುದನ್ನು ಅರಿಯುತ್ತಾನೆ. ಸತ್ಯಾನ್ವೇಷಣೆಯು ಪರಸ್ಪರ ವಿಶ್ವಾಸ, ಸಹಕಾರಗಳಿಂದ ನಡೆಯಬೇಕು, ಎಲ್ಲರ ಪ್ರಯೋಜನಕ್ಕಾಗಿ ಅದನ್ನು ಕಂಡು ಹಿಡಿಯಲು ಎಲ್ಲರೂ ಪ್ರಯತ್ನಿಸಬೇಕು. ಪ್ರತಿಯೊಬ್ಬರ ಅಭಿಪ್ರಾಯವನ್ನೂ ಧರ್ಮದ ಒರೆಗಲ್ಲಿಗೆ ತಿಕ್ಕಿ ಪರೀಕ್ಷಿಸಬೇಕು. ಅದೇ ಸಾರ್ವತ್ರಿಕ ಒಳಿತು ಅಥವಾ ಸರ್ವಲೋಕಹಿತ. ಅದರ ಆಧಾರದಿಂದ ಪರೀಕ್ಷಿಸಬೇಕು. ಈ ಪರೀಕ್ಷೆಯಲ್ಲಿ ಉತ್ತೀರ್ಣವಾಗುವ ತತ್ತ್ವವನ್ನು

ಬೇರೆಯಾಗಿಟ್ಟುಕೊಂಡು ಬೆಳೆಸಿಕೊಳ್ಳಬೇಕು, ಪ್ರಪಂಚದಾದ್ಯಂತ ಹರಡಿ ಮಾನವ ಕಲ್ಯಾಣದ ಪ್ರಗತಿಗೆ ನೆರವಾಗಬೇಕು. ಈ ವಿಧಾನದಿಂದ ಎಲ್ಲರೂ ಸಮಾನವಾಗಿ ಸಂತೋಷವನ್ನು ಪಡೆಯುತ್ತಾರೆ.

"ಸಮಿತಿಃ ಸಮಾನಿ," ಎಂದು ವೇದಗಳು ಹೇಳುತ್ತವೆ. ಜ್ಞಾನವನ್ನು ಪಡೆಯುವ ಹಕ್ಕು ಎಲ್ಲರಿಗೂ ಇದೆ, ಶಿಕ್ಷಣದ ಹಾಗೆಯೇ. ಆದ್ದರಿಂದ ಪ್ರತಿಯೊಬ್ಬರೂ ಒಳ್ಳೆಯ ಮತ್ತು ಶುದ್ಧವಾದ ಕೆಲಸಗಳನ್ನು ಮಾಡಬೇಕು. ಎಲ್ಲಾ ದುಷ್ಕೃತ್ಯಗಳನ್ನು ತೊರೆಯುವುದು, ಆಸೆಯನ್ನು ಬಿಡುವುದು; ಈ ಎರಡೂ ಮನಸ್ಸೆಂಬ ಒಂದೇ ಸಾಧನದಿಂದ ಸಾಧ್ಯವಾಗುತ್ತದೆ. ಮಾನವ ಜೀವನದ ಧ್ಯೇಯಗಳಾದ ಪುರುಷಾರ್ಥಗಳನ್ನು ಅದರ ಮೂಲಕವೇ ಸಂಪಾದಿಸಬೇಕಾಗುತ್ತದೆ. ಸತತವಾದ ಅಭ್ಯಾಸದಿಂದ ಅದು ನಿಮ್ಮ ಇಚ್ಛೆಗೆ ಅನುವರ್ತಿಯಾಗಲು ಕಲಿಯುತ್ತದೆ. ಚಿತ್ತವಾದರೋ ಹಿಂದಿನ ಮತ್ತು ಈಗಿನ ಅನುಭವಗಳನ್ನು ನಿಮ್ಮೆದುರಿಗೆ ಇರಿಸಿ, ನೀವೇ ವಿಷಯವನ್ನು ಸರಿಯಾಗಿ ಗ್ರಹಿಸುವಂತೆ, ಆ ಹಿನ್ನೆಲೆಯಲ್ಲಿ ತೀರ್ಮಾನಿಸುವಂತೆ ಆಹ್ವಾನಿಸುತ್ತದೆ. ಚಿತ್ತದಲ್ಲಿ ನಡೆಯುವ ಈ ಪ್ರಕ್ರಿಯೆಯ ಮೂಲಕವೇ ಸಮತ್ವವನ್ನು ಸಾಧಿಸಬೇಕು, ಅಂದರೆ ಏಕಚಿತ್ತರಾಗಬೇಕು.

ಮನಸ್ಸು ಮತ್ತು ಚಿತ್ತಗಳೆರಡನ್ನೂ ಸರ್ವಮಾನವ ಸುಖ ಅಥವಾ ಇಡೀ ಮಾನವ ಜನಾಂಗದ ಕಲ್ಯಾಣದ ಹಾದಿಯಲ್ಲಿ ನೇರವಾಗಿ ನೆಲೆಗೊಳಿಸಬೇಕು. ಇದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಯಾರು ಎಲ್ಲರಿಗೂ ಸೇವೆ ಮಾಡುತ್ತಾ ಎಲ್ಲರಿಗೂ ಸಂತೋಷವುಂಟುಮಾಡುತ್ತಾನೋ ಅವನಲ್ಲಿ ಧರ್ಮವು ಬೆಳಗುತ್ತದೆ, ಪ್ರಕಾಶಿಸುತ್ತದೆ. ಅವನಿಗೆ ಭಗವಂತನ ಕೃಪೆ ದೊರಕುವುದು ಮಾತ್ರವಲ್ಲ, ಅವನಲ್ಲಿ ಲೀನವಾಗುವ ಮಹದ್ಭಾಗ್ಯವು ಲಭಿಸುತ್ತದೆ. ನೀವು ಯಾರಿಗಾದರೂ ಏನನ್ನಾದರೂ ಕೊಡುವಾಗ ಅಥವಾ ಯಾರಿಂದಲಾಗಲಿ ಪಡೆಯುವಾಗ ಧರ್ಮದ ಎಲ್ಲೆಯನ್ನು ಅತಿಕ್ರಮಿಸದಂತೆ ನೋಡಿಕೊಳ್ಳಿ. ಧರ್ಮದ ಆದೇಶಗಳಿಗೆ ವಿರುದ್ಧವಾಗಿ ಹೋಗಬೇಡಿ. ಅದು ನಿಮ್ಮ ಬದ್ಧಕರ್ತವ್ಯವೆಂದು ನಂಬಿಕೊಂಡು ಸದಾ ಕಾಲವೂ ಪಾಲಿಸಿ. ನಿಮ್ಮ ಶಕ್ತಿಯ ಪ್ರತಿಯೊಂದು ಔನ್ಸಿಗೂ ಧರ್ಮದ ಸಾರವನ್ನು ತುಂಬಿ, ಒಂದೊಂದು ದಿನವು ಉರುಳಿದಂತೆಯೂ ಆ ಹಾದಿಯಲ್ಲಿ ಹೆಚ್ಚು ಹೆಚ್ಚು ದೂರ ಮುನ್ನಡೆಯಲು ಪ್ರಯತ್ನಿಸಿ.

ಧರ್ಮಿಷ್ಠನಾದ ವ್ಯಕ್ತಿಯು ತನ್ನ ಪ್ರತಿಯೊಂದು ಕಾರ್ಯದಲ್ಲಿಯೂ ನಿರ್ಧಾರವನ್ನೂ ಉತ್ಸಾಹವನ್ನೂ ತೋರಿಸುತ್ತಾನೆ. ಅವನ ಧರ್ಮಾವಲಂಬನೆ ಕೂಡ ಆ ಮಟ್ಟದ್ದಾಗಿರಬೇಕು. ದೇವರು ಎಲ್ಲೆಲ್ಲೂ ಎಲ್ಲವನ್ನೂ ನೋಡುತ್ತಿದ್ದಾನೆ ಎಂಬ

ಭೀತಿಯ ಭಾವನೆ, ಪಾಪಕ್ಕೆ ಜಾರಿಬಿಡಬಹುದೆಂಬ ನಿರಂತರ ಭೀತಿ, ಸತ್ಯದ ಕಡೆಗೆ ಸಹಜವಾದ ಒಲವು, ಸಚ್ಚಾರಿತ್ರದ ಆಸಕ್ತಿ—ಈ ಗುಣಗಳು ಮನಸ್ಸಿಗಿವೆ. ನಿಮ್ಮ ಕೆಲಸ ಅದನ್ನು ಸರಿಯಾಗಿ ನಿರ್ದೇಶಿಸಿ, ಸಮಸ್ತ ಮಾನವ ಜನಾಂಗದ ಕಲ್ಯಾಣ ಕ್ಕಾಗಿ ಅದನ್ನು ಉಪಯೋಗಿಸುವುದು. ಧರ್ಮಾವಲಂಬನೆಯು ಸಂತೋಷವನ್ನು ತರುತ್ತದೆ, ಅದನ್ನು ಹೆಚ್ಚಿಸುತ್ತದೆ. ವ್ಯಕ್ತಿಯು ಇತರರ ಬಗೆಗೆ ಬೆಳೆಸಿಕೊಳ್ಳುವ ದ್ವೇಷವನ್ನು ಅದು ಹೋಗಲಾಡಿಸುತ್ತದೆ. ಇನ್ನೊಬ್ಬ ವ್ಯಕ್ತಿಯು ನರಳುತ್ತಿರುವಾಗ ಅಥವಾ ದುಃಖಪಡುತ್ತಿರುವಾಗ ನೀವು ಗರ್ವದಿಂದ ಉಬ್ಬಲು ಅದು ಅವಕಾಶ ಕೊಡುವುದಿಲ್ಲ. ಅಂತಹ ದುಷ್ಟತನ ನಿಮಗೆ ಸಂತೋಷವನ್ನು ಕೊಡುತ್ತದೇನು? ನೆನಪಿಡಿ, ಎಲ್ಲರೂ ಸಂತೋಷವಾಗಿದ್ದಾಗ ಮಾತ್ರವೇ ನೀವೂ ಸಂತೋಷವಾಗಿರ ಬಹುದು! ಆದ್ದರಿಂದ ಸತ್ಯವನ್ನು ಮಾತ್ರ ಪ್ರೀತಿಸಿ, ಅನುಸರಿಸಿ, ಅಸತ್ಯವು ಎಂದಿಗೂ ಲಾಭದಾಯಕವಲ್ಲ.

ಮನುಷ್ಯರು ಗೌರವಿಸುತ್ತಾರೆ, ಅಪಮಾನಿಸುತ್ತಾರೆ; ಯಾರೂ ಸುಳ್ಳು, ವಂಚನೆ ಮತ್ತು ಅನ್ಯಾಯಗಳನ್ನು ಗೌರವಿಸುವುದಿಲ್ಲ. ಎಲ್ಲರೂ ಸತ್ಯ, ನೇರ್ಮೆ ಮತ್ತು ನ್ಯಾಯಗಳನ್ನು ಗೌರವಿಸುತ್ತಾರೆ. ವೇದವು ವಿಧಿಸಿರುವ ಧರ್ಮವನ್ನು ಪರೀಕ್ಷಿಸಲಾ ಗಿದೆ. ಯಾರು ಬೇಕಾದರೂ ಅದನ್ನು ಪರೀಕ್ಷಿಸಬಹುದಾಗಿದೆ. ಅದು ನಿಷ್ಪಕ್ಷಪಾತವೂ ನ್ಯಾಯವೂ ಆದದ್ದು. ಅಭ್ಯಾಸದಿಂದ ಅದರಲ್ಲಿ ಶ್ರದ್ಧೆ ಬೆಳೆಯುತ್ತದೆ. ದೇವರ ಪೂಜೆಯು ವೇದಗಳಲ್ಲಿ ವಿಧಿಸಿರುವ ನಿಯಮಗಳಿಗನುಗುಣವಾಗಿರಬೇಕು. ಈ ವಿಧಾನದಿಂದ ಧರ್ಮಾಚರಣೆಯು ಬಲಗೊಳ್ಳುತ್ತದೆ. ಈ ಧರ್ಮವು ಭಗವಂತನ ಆದೇಶ; ಭಗವಂತನ ಅಧಿಕೃತ ವಾಣಿ. ಆದ್ದರಿಂದ ಅದನ್ನು ಎಲ್ಲರೂ ಅನುಸರಿಸ ಬಹುದು. ದೇವತೆ ಎಂದರೆ ಯಾರು? ಯಾವ ವ್ಯಕ್ತಿಯು ಸತ್ಯವನ್ನು ತನ್ನ ಅನುದಿನದ ಜೀವನದಲ್ಲಿ ವ್ರತವಾಗಿ ಪಾಲಿಸುತ್ತಾನೆಯೋ ಆ ವ್ಯಕ್ತಿಗೆ ಕೊಟ್ಟ ಹೆಸರು ಅಷ್ಟೆ.

ಭಗವಂತನು ಮನುಷ್ಯನಿಗೆ ಎಷ್ಟೊಂದು ಶಕ್ತಿಗಳನ್ನು ಕೊಟ್ಟಿದ್ದಾನೆ ಎಂಬುದನ್ನು ಸ್ವಲ್ಪ ಆಲೋಚಿಸಿ ನೋಡಿ. ಅದರಿಂದ ಪುರುಷಾರ್ಥಗಳನ್ನು ಸಾಧಿಸಿ ಸತ್ಯಕ್ಕೆ ಬದ್ಧರಾಗಿ ಭಗವಂತನತ್ತ ಮುನ್ನಡೆಯಿರಿ. ನಿಮ್ಮ ಬುದ್ಧಿಶಕ್ತಿಯನ್ನು ಆ ಕೆಲಸಕ್ಕಾಗಿ ಬಳಸಬೇಕು; ಅದೇ ಆ ಉಡುಗೊರೆಯ ಉದ್ದೇಶ. ದೃಷ್ಟಿ ಶಕ್ತಿಯನ್ನು ಯಾರಿಗೆ ಭಗವಂತನು ಕೊಟ್ಟಿದ್ದಾನೋ ಅವರು ಮಾತ್ರವೇ ವಸ್ತುಗಳನ್ನು ನೋಡಬಲ್ಲರು. ಕುರುಡರಿಗೆ ಆ ಅದೃಷ್ಟ ಇಲ್ಲ ಹಾಗೆಯೇ ಸತ್ಯದ ಉಡುಗೊರೆಯನ್ನು ಪಡೆದಿರುವವರು, ಪುರುಷಾರ್ಥಗಳನ್ನು ಬಯಸುವವರು ಮತ್ತು ಧರ್ಮನಿಷ್ಠರಾಗಲು ಪ್ರಯತ್ನಿಸುವ ವರು ಭಗವಂತನನ್ನು ನೋಡಬಲ್ಲರು; ಮಿಕ್ಕ ಎಲ್ಲರೂ ಕುರುಡರಾಗಿರುತ್ತಾರೆ.

ಭಗವಂತನು ಮನುಷ್ಯನಿಗೆ ಬುದ್ಧಿಶಕ್ತಿ ಮತ್ತು ವಿವೇಚನಾ ಶಕ್ತಿಗಳನ್ನು ಬೆಳೆಸಿ ಕೊಳ್ಳುವ ಉಪಕರಣಗಳನ್ನೂ ಕೊಟ್ಟಿದ್ದಾನೆ; ಅವುಗಳನ್ನು ಉತ್ತಮ ರೀತಿಯಲ್ಲಿ ಉಪಯೋಗಿಸಿ ತನ್ನನ್ನೇ ಅರಿಯಲು ಪ್ರಯತ್ನಿಸಿದರೆ ಭಗವಂತನು ಅವನಿಗೆ ಹೊಸದಾಗಿ ಇನ್ನಷ್ಟು ಶಕ್ತಿಯನ್ನು ತುಂಬುತ್ತಾನೆ, ಏಕೆಂದರೆ ಯಾರು ಹೋರಾಡು ತ್ತಾರೋ ಅವರ ಕಡೆಗೆ ಅವನಿಗೆ ತುಂಬಾ ಕರುಣೆ. ಮನುಷ್ಯನು ಧರ್ಮವನ್ನು ಅನುಕರಿಸಲು ಹೊರಟದ್ದೇ ಆದರೆ ಸತ್ಯವೂ ತನಗೆ ತಾನೆ ಅವನಿಗೆ ಗೋಚರ ವಾಗುತ್ತದೆ.

ನೀವು ಸತ್ಯಕ್ಕೆ ಅಲಕ್ಷ್ಯ ತೋರಿಸಿದ್ದೇ ಆದ ಪಕ್ಷದಲ್ಲಿ ಧರ್ಮವು ವಿಧಿಸಿದ ಪ್ರತಿ ಯೊಂದು ಕರ್ತವ್ಯವೂ ಧರ್ಮದಿಂದ ಪ್ರೇರಿತವಾದ ಪ್ರತಿಯೊಂದು ಕರ್ಮವೂ ಒಂದು ಭಾರವಾದ ಹೊರೆಯಾಗಿ ಹೆಗಲಮೇಲೆ ಕುಳಿತುಕೊಳ್ಳುತ್ತದೆ. ಈ ಎಲ್ಲ ವಸ್ತು ಪ್ರಪಂಚದ ಹಿಂದಿರುವ ಸತ್ಯ ಅನ್ವೇಷಣೆಯಿಂದ ಎಲ್ಲ ಧರ್ಮ ಕರ್ಮಗಳೂ ಹಗುರವಾಗಿ, ಹಿತಕರವಾಗುತ್ತವೆ. ಭಗವಂತನು ಮನುಷ್ಯನನ್ನು ಹೇಗೆ ರೂಪಿಸಿ ದ್ದಾನೆಂದರೆ, ಅವನು ಸಹಜವಾಗಿಯೇ ದೇವರ ಕಡೆಗೆ ಒಲವು ಪಡೆದಿರುತ್ತಾನೆ. ದರ್ಶನದ ವಿಸ್ತಾರದಿಂದ ಅವನಿಗೆ ಸಂತೋಷವಾಗುತ್ತದೆ, ನೀತಿವಂತನಾಗಿ, ಸತ್ಕಾ ರ್ಯನಿರತನಾಗಿದ್ದಾಗ ಅವನಿಗೆ ಸಹಜವಾಗಿ ಆನಂದ. ಆದ್ದರಿಂದ ತನ್ನ ಮೂಲ ಸ್ವರೂಪಕ್ಕೆ ಬದ್ಧನಾಗಲು ಅವನು ಶ್ರಮಿಸಬೇಕು. ಅದರಿಂದ ಅವನ ಅತ್ಯುತ್ತಮ ಹಿತವು ಸಾಧಿತವಾಗುತ್ತದೆ. ಅದಕ್ಕಾಗಿ ಆತನು ಬ್ರಹ್ಮದ ಮೇಲೆ ತನ್ನ ಗಮನವನ್ನು ಕೇಂದ್ರೀಕರಿಸಬೇಕು, ಸತ್ಯವನ್ನು ಬೆಳೆಸಿಕೊಂಡು ಧರ್ಮವನ್ನು ಆಚರಿಸಬೇಕು, ಸತ್ಯೇನಾವೃತ ಆಗಬೇಕು.

ಸಾಧನೆಯಲ್ಲಿ ಓಜಶ್ಚ, ನಿರ್ಭೀತ ಆತ್ಮನಿಗ್ರಹ; ಸಹಶ್ಚ, ಜೀವನದ ನೋವು ನಲಿವು, ಏಳು ಬೀಳುಗಳಲ್ಲಿ ಸಂತೋಷವಾಗಲಿ, ದುಃಖವಾಗಲಿ ಪಡದೆ ಸಮಚಿತ್ತನಾಗಿರು ವುದು; ಸತ್ಯ ಮತ್ತು ಧರ್ಮಗಳಲ್ಲಿ ಸ್ಥಿರವಾದ ವಿಶ್ವಾಸ; ಬಲಂಚ, ಸಾಧನೆಯಿಂ ದಲೂ ಬ್ರಹ್ಮಚರ್ಯದಿಂದಲೂ ಸಂಪಾದಿಸಿದ ಅತ್ಯುತ್ತಮ ದೈಹಿಕ ಮತ್ತು ಮಾನಸಿಕ ಆರೋಗ್ಯ, ವಾಕ್ ಚ, ಮಧುರವಾಗಿಯೂ ನೇರವಾಗಿಯೂ ಮಾತನಾಡಲು ಆಸೆ ಮತ್ತು ಸಾಮರ್ಥ್ಯ, ಸತ್ಯ ಮತ್ತು ಪ್ರೇಮಗಳ ಆಚರಣೆಯಿಂದ ಸಾಧಿತವಾಗುವುದು; ಇಂದ್ರಿಯ ಮೋಹ, ಐದು ಜ್ಞಾನೇಂದ್ರಿಯಗಳನ್ನೂ ಐದು ಕರ್ಮೇಂದ್ರಿಯಗಳನ್ನೂ ಪಾಪಕಾರ್ಯದಿಂದ ಅಧರ್ಮದಿಂದ ಹಿಂದಕ್ಕೆ ಸೆಳೆದುಕೊಳ್ಳುವುದು, ಮತ್ತು ಎಲ್ಲಾ ಇಂದ್ರಿಯಗಳನ್ನು ಸತ್ಯದ ಸೇವೆಗೆ ಒಳಪಡಿಸಿ ಅವುಗಳ ಉನ್ನತಿಯನ್ನು ಸಾಧಿಸು ವುದು; ಶ್ರೀಶ್ಚ, ಅಂತರಂಗ ಜಗತ್ತನ್ನು ತಾನೇ ಗೆಲ್ಲುವುದರ ಮೂಲಕ ಸಕಲ ವಿಶ್ವಗಳ ಪ್ರಭುತ್ವವನ್ನು ಪಡೆಯುವುದು; ಧರ್ಮಶ್ಚ, ಪೂರ್ವಗ್ರಹಗಳನ್ನು ತೊರೆದು

ಸದಾಕಾಲವೂ ಸತ್ಯವನ್ನೇ ಅರಸುವುದು–ಇವುಗಳನ್ನು ನನಗೆ ಅನುಗ್ರಹಿಸು ಎಂದು ಮನುಷ್ಯನು ಪ್ರಾರ್ಥಿಸಬೇಕು. ಇದೇ ಚಮಕ (ಓಜಶ್ಚಮೇ ಇತ್ಯಾದಿ) ದಲ್ಲಿ ಹೇಳಿರುವುದು.

ಧರ್ಮವು ಎಲ್ಲರಿಗೂ ಒಳಿತನ್ನು ತರುತ್ತದೆ. ಇಹದಲ್ಲೂ ಪರದಲ್ಲೂ ಆನಂದವನ್ನು ನೀಡುತ್ತದೆ. ಸಮಸ್ತ ಮಾನವ ಜನಾಂಗವೂ ಈ ವಿಶ್ವಧರ್ಮದ ಮಹಿಮೆಯನ್ನು ಕಂಡುಕೊಳ್ಳಬೇಕಾದದ್ದು ಇಂದು ಅತ್ಯಗತ್ಯವಾಗಿದೆ. ಒಬ್ಬ ಬ್ರಾಹ್ಮಣನನ್ನು ಆತನ ವಿಶಿಷ್ಟ ಲಕ್ಷಣಗಳಿಂದ ಗುರುತಿಸಲಾಗುತ್ತದೆ. ವಿದ್ಯೆ, ಸದಾಚಾರ, ಅತ್ಯಂತ ಪ್ರಯೋಜನ ಕಾರಿಯಾದ, ಅತ್ಯಂತ ಉದಾತ್ತವಾದ ಕರ್ಮ, ತಾನೇ ಮಾದರಿ ಹಾಕಿ ಸದ್ಗುಣವನ್ನು ಹರಡುವ ರೀತಿ ಇವು ಆ ಲಕ್ಷಣಗಳು. ಇವುಗಳನ್ನು ಯಾರು ಬೆಳೆಸಿಕೊಂಡಿರುವನೋ ಪೋಷಿಸುವನೋ ಅವನೇ ಬ್ರಾಹ್ಮಣ. ಹುಟ್ಟಿನಿಂದ ಅವನು ಏನೇ ಆಗಿದ್ದರೂ ಅದು ಮುಖ್ಯವಲ್ಲ. ಬ್ರಾಹ್ಮಣನು ಚಲಾಯಿಸಬಹುದಾದ ಅಧಿಕಾರಕ್ಕೆ ಬೇಕಾದ ಅರ್ಹತೆಗಳು ಇವು. ತುಂಬಾ ವಿದ್ಯಾವಂತನಾದವನು, ಆ ವಿದ್ಯೆಗೆ ತಕ್ಕಹಾಗೆ ನಡೆದುಕೊಳ್ಳುವವನು ಮಾತ್ರ ಆ ಸ್ಥಾನಕ್ಕೆ ಅರ್ಹನಾಗಬಹುದು. ಆ ಉನ್ನತ ಸ್ಥಾನವನ್ನು ಸಮರ್ಥಿಸಲು ಉತ್ಸುಕರಾದವರು ಮಾಡಬೇಕಾದ ಪ್ರಯತ್ನ ಈ ಅರ್ಹತೆಗಳನ್ನು ಸಂಪಾದಿಸುವುದು.

ಇನ್ನು ಕ್ಷತ್ರಿಯನ ಲಕ್ಷಣಗಳನ್ನು ನೋಡೋಣ. ಎಲ್ಲಾ ಕೆಲಸಗಳಲ್ಲಿ ಕುಶಲತೆ, ಪರಾಕ್ರಮ, ಧೈರ್ಯ, ಸಾಹಸ ಪ್ರವೃತ್ತಿ, ದುಷ್ಟರನ್ನು ಶಿಕ್ಷಿಸಿ, ಶಿಷ್ಟರನ್ನು ರಕ್ಷಿಸುವುದರಲ್ಲಿ ಆಸಕ್ತಿ ಇವು ಅವನ ಮುಖ್ಯ ಲಕ್ಷಣಗಳು. ಇಂತಹ ಗುಣಗಳಿಂದ ಕೂಡಿದವರು ಕ್ಷತ್ರಿಯತ್ವಕ್ಕೆ ಅರ್ಹರು. ಆ ಮನೋಭಾವದಿಂದ ಅವನ ಎಲ್ಲಾ ಉದ್ಯಮಗಳನ್ನು ಕೈಗೊಂಡು ಎಲ್ಲರಿಗೂ ಮಂಗಳಕರವಾಗುವ ಈ ರೀತಿಯಲ್ಲಿ ತನ್ನ ಮನೆಯಲ್ಲಿ ನಿಯಮಗಳನ್ನು ಸ್ಥಾಪಿಸಬೇಕು.

ಆಮೇಲೆ ವೈಶ್ಯರು, ವ್ಯಾಪಾರ ವಾಣಿಜ್ಯಗಳು ಸರಾಗವಾಗಿಯೂ ವೇಗವಾಗಿಯೂ ಹರಿಯುವಂತೆ ಮಾಡಲು ಅವರು ಪ್ರಯತ್ನಿಸಬೇಕು. ರಾಷ್ಟ್ರಗಳನ್ನು ಒಂದು ಕಾಮನ್ ವೆಲ್ತ್ ಆಗಿ ಒಂದುಗೂಡಿಸಲು ಅಗತ್ಯವಾದ ಸಂಪರ್ಕ ಸಂಬಂಧಗಳನ್ನು ಸ್ಥಾಪಿಸಬೇಕು. ಜಗತ್ತಿನಲ್ಲಿ ಐಶ್ವರ್ಯವು ದ್ವಿಗುಣಿತವಾಗುತ್ತಾ ಹೋಗುವಂತೆ ಮಾಡಬೇಕು. ಅದು ಅವರ ಕೆಲಸ. ಜನರ ನಡುವಣ ಸಾಮರಸ್ಯವು ಮುರಿದು ಹೋಗದಂತೆ, ಕುಂಠಿತವಾಗದಂತೆ ಅವರು ನೋಡಿಕೊಳ್ಳಬೇಕು. ಅವರು ಯಶಃ (ಮಹಾಕಾರ್ಯಗಳು ಮತ್ತು ಉದಾತ್ತ ಸಾಧನೆಗಳು) ಮತ್ತು ವರ್ಚಿಃ (ಶಾಲೆಗಳು, ಆಸ್ಪತ್ರೆಗಳು ಮೊದಲಾದುವನ್ನು ಕಟ್ಟಿಸಿ ಶಿಕ್ಷಣ ಮತ್ತು ಆರೋಗ್ಯಗಳ ಪ್ರಸಾರ) ಇವಕ್ಕೆ ನೆರವಾಗ

ಬೇಕು. ಅದರಿಂದ ಅವರ ವ್ಯಕ್ತಿತ್ವಕ್ಕೆ ಬರುವ ಕಾಂತಿಗಳಿಗಾಗಿ ಅವರು ಶ್ರಮಿಸುತ್ತಾರೆ. ಅರ್ಹವಾದ ಉದಾತ್ತ ಉದ್ದೇಶಗಳಿಗಾಗಿ ತಮ್ಮ ಸಂಪತ್ತನ್ನು ಅವರು ಮೀಸಲಾಗಿಡ ಬೇಕು. ಈ ವಿಧಾನದಿಂದ ಪುಣ್ಯ, ಧರ್ಮಗಳು ಬೆಳೆಯುತ್ತವೆ.

ಈಗ ಶೂದ್ರರು ಮತ್ತು ಅವರ ಆದರ್ಶ ಲಕ್ಷಣಗಳನ್ನು ನೋಡಲಾಗಿ, ಅವರು ಧರ್ಮದ ದಾರಿಯನ್ನು ಬಿಡದೆ ಬೆಲೆಯುಳ್ಳ ವಸ್ತುಗಳನ್ನು ಉತ್ಪಾದಿಸಬೇಕು, ಕೂಡಿ ಸಬೇಕು, ಮಾನವ ಅಸ್ತಿತ್ವದ ಉದ್ದೇಶಗಳನ್ನು ಅರಿಯಲು ಮತ್ತು ಅದಕ್ಕಾಗಿ ಶ್ರಮಿಸಲು ಸದಾ ಉತ್ಸುಕರಾಗಿದ್ದು, ಬುದ್ಧಿವಂತಿಕೆಯಿಂದ, ಉತ್ಪಾದಿತ ವಸ್ತುಗಳನ್ನು ಸಂಗ್ರಹಿಸಿಡಬೇಕು, ಕಾಪಾಡಬೇಕು. ಎಲ್ಲರಿಗೂ ಸಮಾನವಾಗಿ ಪ್ರಯೋಜನವಾಗು ವುದಕ್ಕಾಗಿ ಇನ್ನೂ ಅಧಿಕವಾಗಿ ಉತ್ಪಾದಿಸಲು ಶ್ರಮಿಸಬೇಕು. ಹೀಗೆ ಸಂಗ್ರಹಸಿದ ವಸ್ತುಗಳನ್ನು ನಿಜವಾದ ವಿದ್ಯಾಪ್ರಸಾರಕ್ಕೆ, ಸದ್ಗುಣಗಳ ಪೋಷಣೆಗೆ, ನೆರವಿಗೆ ಧಾರಾಳವಾಗಿ ವಿನಿಯೋಗಿಸಬೇಕು.

ಹೀಗೆ ಈ ನಾಲ್ಕು ಬಗೆಗಳ ಮಾನವ ಪರಿಶ್ರಮದ ಸಹಕಾರಯುತ ಪ್ರಯತ್ನದಿಂದ ಸಂಪತ್ತು ಹೇರಳವಾಗಿ ಬೆಳೆಯುತ್ತದೆ, ಮನುಷ್ಯನು ಸುಖಪಡುತ್ತಾನೆ. ಸಾಮಾಜಿಕ ವ್ಯವಸ್ಥೆಯನ್ನು ಲೋಕಧರ್ಮಪಾಲನೆಯ ಒಟ್ಟಾರೆ ದೃಷ್ಟಿಯಿಂದ ವಿನ್ಯಾಸಗೊಳಿಸ ಲಾಗಿದೆ ಎಂಬುದನ್ನು ನಾಲ್ಕು ವರ್ಣಗಳವರೂ ತಿಳಿದುಕೊಳ್ಳಬೇಕು. ಪ್ರತಿಯೊಂದು ವರ್ಣವೂ ತನ್ನ ಕರ್ತವ್ಯಕ್ಕೆ ಬದ್ಧವಾಗುವುದಾದರೆ ಪ್ರಪಂಚದ ಕಲ್ಯಾಣವು ಸಾಧಿತ ವಾಗುವುದರಲ್ಲಿ ಸಂದೇಹವಿಲ್ಲ. ಅಲ್ಲದೆ ಅದರಿಂದ ಪ್ರತಿಯೊಬ್ಬರೂ ಆತ್ಮಾನಂದ ವನ್ನು ಪಡೆಯುತ್ತಾರೆ ಎನ್ನುವುದು ತುಂಬಾ ಮುಖ್ಯವಾದ ವಿಷಯ. ಇದನ್ನು ಬಿಟ್ಟು ಎಲ್ಲರಿಗೂ ಇರುವುದೊಂದೇ ವರ್ಣ, ಒಂದೇ ಕರ್ತವ್ಯ ಸಂಹಿತೆ, ಎಲ್ಲರಿಗೂ ಅನ್ವಯವಾಗುವ ಒಂದೇ ನಿಯಮಾವಳಿ ಎಂದು ಭಾವಿಸುವುದಾದರೆ ಜಗತ್ತಿನ ಕಲ್ಯಾಣವೂ ಸುಭದ್ರತೆಯೂ ಅಪಾಯಕ್ಕೀಡಾಗುತ್ತದೆ.

ಎಲ್ಲರೂ ವ್ಯಾಪಾರದ ಕ್ಷೇತ್ರಕ್ಕೆ ಇಳಿದರೆ, ಅಂದರೆ ಎಲ್ಲರೂ ಮಾರುವವರೇ ಆದರೆ ಕೊಂಡು ಉಪಯೋಗಿಸುವವರು ಯಾರು? ಎಲ್ಲರೂ ಕಲಿಸಲು ಹೊರಟರೆ ಕಲಿಯುವವರು, ಆಚರಿಸುವವರು ಯಾರು? ಎಲ್ಲರೂ ಆಜ್ಞೆ ಮಾಡುವವರೆ ಆದರೆ ಆಜ್ಞೆಗಳನ್ನು ಪಾಲಿಸುವವರು ಯಾರು? ಎಲ್ಲರೂ ಬೆಳೆದು ಉತ್ಪಾದನೆ ಮಾಡಲು ಹೊರಟರೆ ಅವರ ದುಡಿಮೆಯ ಫಲವನ್ನು ಪಡೆಯುವವರಾರು? ಭಗವಂತನು ವರ್ಣಧರ್ಮದ ಪ್ರಕಾರ ಜೀವಿಸಬೇಕೆಂದು ವಿಧಿಸಿರುವುದಕ್ಕೆ ಕಾರಣವೇ ಸತ್ಯ ಧರ್ಮಗಳ ಆಚರಣೆಯ ಮೂಲಕ ಏಕತೆಗೆ ಪೋಷಕವಾಗುವ ಅನೇಕತೆಯನ್ನು ಸೃಷ್ಟಿಸುವುದು.

ವೃತ್ತಿಯು ವರ್ಣವನ್ನು ಅನುಸರಿಸಿತು ಎಂದು ಭಾವಿಸಲಾಗಿದೆ. ಅಲ್ಲ, ವರ್ಣಗಳಿಗೆ ಆ ಹೆಸರು ಬಂದದ್ದೇ ವೃತ್ತಿಗಳ ಆಧಾರದಿಂದ. ಇಂದು ವರ್ಣವೂ ಇಲ್ಲ, ವೃತ್ತಿಯೂ ಇಲ್ಲ; ಇಂದು ಒಂದು ವೃತ್ತಿ, ನಾಳೆ ಇನ್ನೊಂದು. ಜಗತ್ತಿನ ವಾತಾವರಣದ ಅಸ್ಥಿರತೆಯ ಕೆಳಗೆ ಅತೃಪ್ತಿ ಹರಡಿಕೊಂಡಿರುವುದಕ್ಕೆ ಇದೇ ಕಾರಣ. ಪ್ರತಿಯೊಂದು ಕಸುಬಿಗೆ ಅಥವಾ ವೃತ್ತಿಗೆ ನೈತಿಕತೆಯನ್ನು ತುಂಬಿರಿ. ಸದಾ ಸತ್ಯಕ್ಕೆ ಬದ್ಧನಾಗಿರುವುದರಿಂದ, ಸಹನೆಯ ಸ್ಥಿರ ಸಮತ್ವದ ಆಚರಣೆಯಿಂದ ವರ್ಣದ ಕರ್ತವ್ಯಗಳನ್ನು ಪಾಲಿಸಿರಿ. ಅದೇ ಪರಮೋನ್ನತ ಆನಂದ, ಜೀವನದ ಸಾರ. ಇಷ್ಟು ಮಾಡದೆ ಹೋದರೆ ಮನುಷ್ಯನಿಗೆ ದುಃಖ, ಕಡುಬಡತನ ಇವೇ ವಿಧಿಯಾದಾವು. ಶ್ರೀರಾಮ ರಕ್ಷೆಯಿದೆ, ದುರ್ಭಿಕ್ಷೆಯ ಲೋಕಶಿಕ್ಷೆಯಿದೆ. ಈ ಎರಡರಲ್ಲಿ ಆಯ್ಕೆ ನಿಮ್ಮದು. ಶಿಕ್ಷೆಯಾಗದಂತೆ ನಿಮ್ಮ ರಕ್ಷೆ ಈ ಧರ್ಮ ಶಿಕ್ಷಣದಿಂದ ಮಾತ್ರ ಸಾಧ್ಯ.

✍ ಟಿಪ್ಪಣಿ

# ಶ್ರೀ ಸತ್ಯಸಾಯಿ ಪಬ್ಲಿಕೇಷನ್ಸ್ ಸೊಸೈಟಿ (ರೆ)

'ಸುಧಾಮ ಹೌಸ್', ಚಿಕ್ಕಪೇಟೆ, ಬೆಂಗಳೂರು ೫೬೦೦೫೩ ✆ 2226-9694, 2226-8201

## ಪ್ರಕಟಣೆಗಳು

| # | ಶೀರ್ಷಿಕೆ | ₹ | # | ಶೀರ್ಷಿಕೆ | ₹ |
|---|---|---|---|---|---|
| 1 | ಸತ್ಯಂ ಶಿವಂ ಸುಂದರಂ – ಭಾಗ ೧ | 120 | 38 | ಶ್ರೀ ಸಾಯಿ ಸಂಕೀರ್ತನ | 10 |
| 2 | ಸತ್ಯಂ ಶಿವಂ ಸುಂದರಂ – ಭಾಗ ೨ | 72 | 39 | ಶ್ರೀ ಸತ್ಯಸಾಯಿ ಎಜುಕೇರ್ | 10 |
| 3 | ಸತ್ಯಂ ಶಿವಂ ಸುಂದರಂ – ಭಾಗ ೩ | 25 | 40 | ಭಕ್ತರಿಗೆ ಶ್ರೀ ಸತ್ಯಸಾಯಿ ಎಜುಕೇರ್ | 10 |
| 4 | ಸತ್ಯಂ ಶಿವಂ ಸುಂದರಂ – ಭಾಗ ೪ | 26 | 41 | ಬಾಲ ವಿಕಾಸ – ೧ | 35 |
| 5 | ಸತ್ಯಂ ಶಿವಂ ಸುಂದರಂ – ಭಾಗ ೫ | 65 | 42 | ಬಾಲ ವಿಕಾಸ – ೨ | 45 |
| 6 | ಸತ್ಯಂ ಶಿವಂ ಸುಂದರಂ – ಭಾಗ ೬ | 105 | 43 | ಬಾಲ ವಿಕಾಸ – ೩ | 70 |
| 7 | ಸತ್ಯಂ ಶಿವಂ ಸುಂದರಂ – ಭಾಗ ೭ | 130 | 44 | ಬಾಲ ವಿಕಾಸ ೧–೩ರ ಅನುಬಂಧ | 20 |
| 8 | ಶ್ರೀ ಸತ್ಯಸಾಯಿ ವಾಣಿ – ಭಾಗ ೧ | 35 | 45 | ಬಾಲವಿಕಾಸ ಗುರುಗಳ ಕೈಪಿಡಿ | 15 |
| 9 | ಶ್ರೀ ಸತ್ಯಸಾಯಿ ವಾಣಿ – ಭಾಗ ೨ | 35 | 46 | ಈಶ್ವರಮ್ಮ | 40 |
| 10 | ಶ್ರೀ ಸತ್ಯಸಾಯಿ ವಾಣಿ – ಭಾಗ ೩ | 30 | 47 | ಶ್ರೀ ಕೃಷ್ಣ – ಶ್ರೀ ಸತ್ಯಸಾಯಿ | 40 |
| 11 | ಶ್ರೀ ಸತ್ಯಸಾಯಿ ವಾಣಿ – ಭಾಗ ೪ | 46 | 48 | ಸಾಧನಾ, ಅಂತರ್ಮುಖಿ ಯಾತ್ರೆ | 38 |
| 12 | ಶ್ರೀ ಸತ್ಯಸಾಯಿ ವಾಣಿ – ಭಾಗ ೫ | 53 | 49 | ಭರವಸೆಯ ಹೊಂಗಿರಣ | 32 |
| 13 | ಶ್ರೀ ಸತ್ಯಸಾಯಿ ವಾಣಿ – ಭಾಗ ೬ | 25 | 50 | ಶ್ರೀ ಸತ್ಯಸಾಯಿ ಹೃದಯಸ್ಥಾಯಿ | 22 |
| 14 | ಶ್ರೀ ಸತ್ಯಸಾಯಿ ವಾಣಿ – ಭಾಗ ೭ | 30 | 51 | ಪ್ರಶಾಂತಿ ನಿಲಯಂ | 8 |
| 15 | ಶ್ರೀ ಸತ್ಯಸಾಯಿ ವಾಣಿ – ಭಾಗ ೮ | 35 | 52 | ವಾಕ್ಯ–ವಿಭೂತಿ | 10 |
| 16 | ಸತ್ಯಸಾಯಿ ವಾಹಿನಿ | 55 | 53 | ಸ್ವಾಮಿಯೆಡೆಗೆ ತಡೆಯೋಟ | 8 |
| 17 | ವಿದ್ಯಾ ವಾಹಿನಿ | 20 | 54 | ಹೆತ್ತವರ–ಪಾಲಕತ್ವದ ಪಾತ್ರ | 10 |
| 18 | ಜ್ಞಾನ ವಾಹಿನಿ | 15 | 55 | ಶ್ರೀ ಗುರುಚರಣ | 15 |
| 19 | ಉಪನಿಷತ್ ವಾಹಿನಿ | 20 | 56 | ಸಾಯಿತ್ರೀ | 30 |
| 20 | ಧ್ಯಾನ ವಾಹಿನಿ | 20 | 57 | ಶ್ರೀ ಸತ್ಯಸಾಯಿ ಅಷ್ಟೋತ್ತರಶತ | |
| 21 | ಪ್ರೇಮ ವಾಹಿನಿ | 20 | | ರತ್ನಮಾಲೆ | 18 |
| 22 | ಪ್ರಶಾಂತಿ ವಾಹಿನಿ | 20 | 58 | ಜ್ಯೋತಿರ್ಧ್ಯಾನ | 13 |
| 23 | ಪ್ರಶ್ನೋತ್ತರ ವಾಹಿನಿ | 20 | 59 | ಭಗವಲ್ಲೀಲಾ | 35 |
| 24 | ಧರ್ಮ ವಾಹಿನಿ | 25 | 60 | ಚಮತ್ಕಾರ ವಾಣಿ | 15 |
| 25 | ಸಂದೇಹ ನಿವಾರಿಣಿ | 25 | 61 | ಕೋಽಹಂ? ಸೋಽಹಂ! | 15 |
| 26 | ಸೂತ್ರ ವಾಹಿನಿ | 20 | 62 | ನೀತಿ ಪಾಠಗಳು | 30 |
| 27 | ಲೀಲಾ ಕೈವಲ್ಯ ವಾಹಿನಿ | 10 | 63 | ಸಂಧ್ಯಾವಂದನ ವಿಧಿ | 10 |
| 28 | ಭಾಗವತ ವಾಹಿನಿ | 60 | 64 | ಭಜನೆಗಳು | 10 |
| 29 | ಗೀತಾ ವಾಹಿನಿ | 50 | 65 | ಶ್ರೀ ಸತ್ಯಸಾಯಿ ಹೃದಯಸ್ಥಾಯಿ | |
| 30 | ರಾಮಕಥಾರಸ ವಾಹಿನಿ | 120 | | (ಸಾರ ಸಂಗ್ರಹ) | 11 |
| 31 | ಶ್ರೀ ಸತ್ಯಸಾಯಿ ಆನಂದದಾಯಿ | 50 | 66 | ಆತ್ಮಾವಲೋಕನ | 10 |
| 32 | ಶ್ರೀ ಸತ್ಯಸಾಯಿ ಆರಾಧನಾ | | 67 | ಅವತಾರ ಘೋಷಣೆ | 12 |
| | ಸ್ತೋತ್ರ ಸೌರಭ | 12 | 68 | ಶ್ರೀ ಸತ್ಯಸಾಯಿ ಪೂಜಾ ವಿಧಿ | 21 |
| 33 | ಶ್ರೀ ಸತ್ಯಸಾಯಿ ಸಂಸ್ಥೆ (ಭಾರತ) – | | 69 | ರಸಪ್ರಶ್ನೆಗಳು ಶ್ರೀ ಸತ್ಯಸಾಯಿ ಬಾಬಾ | 20 |
| | ನಿಯಮ ಮತ್ತು ನಿಬಂಧನೆಗಳು | 40 | 70 | ರಸಪ್ರಶ್ನೆಗಳು ರಾಮಾಯಣ | 16 |
| 34 | ಶ್ರೀ ಸತ್ಯಸಾಯಿ ದೃಷ್ಟಾಂತ ಸೌರಭ | 15 | 71 | ರಸಪ್ರಶ್ನೆಗಳು ಮಹಾಭಾರತ | 17 |
| 35 | ಸೂಕ್ತಿ ಸೌರಭ – ಭಾಗ ೧ | 10 | 72 | ರಸಪ್ರಶ್ನೆಗಳು ಭಾಗವತ | 17 |
| 36 | ಸೂಕ್ತಿ ಸೌರಭ – ಭಾಗ ೨ | 25 | 73 | ರಸಪ್ರಶ್ನೆಗಳು ಭಗವದ್ಗೀತೆ | 9 |
| 37 | ಸಾಯಿ ಭಜನೆಗೆ ಮಾರ್ಗದರ್ಶಿ | | 74 | ತ್ವಮೇವ ಮಾತಾ | 20 |
| | ಸೂತ್ರಗಳು | 10 | | ಮುಂದುವರಿದಿದೆ ... | |

ಪ್ರತಿಗಳ ಲಭ್ಯತೆಯನ್ನು ಸೊಸೈಟಿಯ ಕಛೇರಿಯಲ್ಲಿ ವಿಚಾರಿಸುವುದು.

# ಶ್ರೀ ಸತ್ಯಸಾಯಿ ಪಬ್ಲಿಕೇಷನ್ಸ್ ಸೊಸೈಟಿ (ರೆ)

'ಸುಧಾಮ ಹೌಸ್', ಚಿಕ್ಕಪೇಟೆ, ಬೆಂಗಳೂರು ೫೬೦೦೫೩ ✆ 2226-9694, 2226-8201

## ಪ್ರಕಟಣೆಗಳು

| # | ಶೀರ್ಷಿಕೆ | ₹ | # | ಶೀರ್ಷಿಕೆ | ₹ |
|---|---|---|---|---|---|
| 75 | ನನ್ನ ಆಧ್ಯಾತ್ಮಿಕ ದಿನಚರಿ | 10 | 94 | Sri Sathya Sai, | |
| 76 | ಉತ್ಕೃಷ್ಟತೆಯೆಡೆಗೆ ನನ್ನ ವಿಕಾಸ | 8 | | The Indweller | 15 |
| 77 | ಅಮರಪುರಿಯ ಆನಂದ ಯಾತ್ರೆ | 10 | 95 | Guidelines for Sai Bhajans | 10 |
| 78 | ಪರಮ ವೈದ್ಯ | 28 | 96 | Balavikas - 1 | 35 |
| 79 | ಶ್ರೀ ಸತ್ಯಸಾಯಿ ಪರಮಸುಖದಾಯಿ | 45 | 97 | Balavikas - 2 | 60 |
| 80 | ಯುಗಾವತಾರಿ ಶ್ರೀ ಸತ್ಯಸಾಯಿ | 60 | 98 | Balavikas - 3 | * |
| 81 | ನನ್ನ ನೆಚ್ಚಿನ ಬಾಬಾ | 45 | 99 | Supplement to Balavikas 1 | 10 |
| 82 | ಸೇವೆಯೇ ಸಾಧನೆ | 31 | 100 | Supplement to Balavikas 2 | 10 |
| 83 | ಶ್ರೀ ಸತ್ಯಸಾಯಿ ಗೀತೆ | 36 | 101 | Supplement to Balavikas 3 | 10 |
| 84 | ವಿದ್ಯಾ ಸಂಸ್ಥೆಗಳಲ್ಲಿ ನೈತಿಕ ವಿದ್ಯೆಯ | | 102 | Sri Sathya Sai Educare | 10 |
| | ಅವಶ್ಯಕತೆ | 10 | 103 | Sai Educare for Devotees | 10 |
| 85 | ವೇದ ಮಂಜರಿ | 60 | 104 | Sandhyavandana Vidhi | 10 |
| 86 | ವೇದ ಮಂತ್ರಗಳು | | 105 | Sainama Kirtana | |
| | (ಬಾಲವಿಕಾಸ ಮಕ್ಕಳಿಗಾಗಿ) | 30 | | Kaliyuga Sadhana | 100 |
| 87 | ಶ್ರೀ ಸತ್ಯಸಾಯಿ ಸಂಸ್ಥೆಗಳ | | 106 | Educare, Veda of Twenty | |
| | ಮಾರ್ಗದರ್ಶಿ ಸೂತ್ರಗಳು | 25 | | First Century | 60 |
| 88 | ಶ್ರೀ ಸತ್ಯಸಾಯಿ ಮಧುರ ಸ್ಮೃತಿ | 60 | 107 | Namo Namah Sri Guru | |
| 89 | ಭಾರತದ ಸಂತರು | 50 | | Padukabyam | 60 |
| 90 | ಶ್ರೀ ಸತ್ಯಸಾಯಿ | | 108 | Sri Sathya Sai Balvikas: The | |
| | ಮುರುಗನ ಕರುಣಾಮೃತ | 40 | | Pathway to Excellence–2 | * |
| 91 | ದಿವ್ಯ ಪಥ ಭಾಗ – ೧ | 50 | 109 | Brindamrutam | 225 |
| 92 | ಹರಿ ಭಜನ ಬಿನಾ | 30 | 110 | Sri Sathya Sai | |
| 93 | ಒಂದು ದಿವ್ಯ ಜೀವನ | 63 | | Madhura Smrithi | 90 |
| | | | 111 | Bhagavallila | 35 |

ಪ್ರತಿಗಳ ಲಭ್ಯತೆಯನ್ನು ಸೊಸೈಟಿಯ ಕಛೇರಿಯಲ್ಲಿ ವಿಚಾರಿಸುವುದು.